ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ಸಂಪ್ರಬಂಧ

"ವ್ಯಾಸಭಾರತ ಮತ್ತು ಜನಪದ ಮಹಾಭಾರತಗಳ ಆಯ್ದ ಮಹಿಳಾ ಪಾತ್ರಗಳು"

(ಎ.ಆರ್.ಕೃಷ್ಣಶಾಸ್ತ್ರೀ ಅವರ ವಚನಭಾರತ ಮತ್ತು ಪಿ.ಕೆ.ರಾಜಶೇಖರ ಅವರು ಸಂಗ್ರಹಿಸಿರುವ ಜನಪದ ಮಹಾಭಾರತಗಳ ಹಿನ್ನಲೆಯಲ್ಲಿ)

ನಿಬಂಧಕಾರರು

ಎಚ್.ಎಂ.ನಟರಾಜು

ಕನ್ನಡ ಎಂ.ಫಿಲ್.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

ಮಾರ್ಗದರ್ಶಕರು

ಡಾ.ಪ್ರಧಾನ ಗುರುದತ್ತ

ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸ ಗಂಗೋತ್ರಿ

ಮೈಸೂರು.

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ವಿದ್ಯಾರಣ್ಯ

೨೦೦೭-೦೮

438

ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ಸಂಪ್ರಬಂಧ

"ವ್ಯಾಸಭಾರತ ಮತ್ತು ಜನಪದ ಮಹಾಭಾರತಗಳ ಆಯ್ದ ಮಹಿಳಾ ಪಾತ್ರಗಳು"

(ಎ.ಆರ್.ಕೃಷ್ಣಶಾಸ್ತ್ರೀ ಅವರ ವಚನಭಾರತ ಮತ್ತು ಪಿ.ಕೆ.ರಾಜಶೇಖರ ಅವರು ಸಂಗ್ರಹಿಸಿರುವ ಜನಪದ ಮಹಾಭಾರತಗಳ ಹಿನ್ನಲೆಯಲ್ಲಿ)

ನಿಬಂಧಕಾರರು

ಎಚ್.ಎಂ.ನಟರಾಜು

ಕನ್ನಡ ಎಂ.ಫಿಲ್.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

ಮಾರ್ಗದರ್ಶಕರು

ಡಾ.ಪ್ರಧಾನ ಗುರುದತ್ತ

ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸ ಗಂಗೋತ್ರಿ

ಮೈಸೂರು.

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ವಿದ್ಯಾರಣ್ಯ

೨೦೦೭-೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ಕನ್ನಡ ವಿಶ್ವವಿದ್ಯಾನಿಲಯ ಹಂಪಿಯ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ **ಎಚ್.ಎಂ.ನಟರಾಜು** ಅವರು ೨೦೦೭-೦೮ ರ ಪರೀಕ್ಷಾ ಭಾಗವಾಗಿ ನನ್ನ ಮಾರ್ಗದರ್ಶನದಲ್ಲಿ **"ವ್ಯಾಸ ಭಾರತ ಮತ್ತು ಜನಪದ ಮಹಾಭಾರತಗಳ ಆಯ್ದ ಮಹಿಳಾ ಪಾತ್ರಗಳು"** (ಎ.ಆರ್.ಕೃಷ್ಣಶಾಸ್ತ್ರಿ ಅವರ ವಚನಭಾರತ ಮತ್ತು ಪಿ.ಕೆ.ರಾಜಶೇಖರ ಅವರು ಸಂಗ್ರಹಿಸಿರುವ ಜನಪದ ಮಹಾಭಾರತಗಳ ಹಿನ್ನೆಲೆಯಲ್ಲಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯೇ ಆಗಲಿ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಮತ್ತು ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೧-೦೮-೨೦೦೮
ಸ್ಥಳ : ಮೈಸೂರು

ಪ್ರಧಾನ್ ಗುರುದತ್ತ
ಮಾರ್ಗದರ್ಶಕರು
(ಡಾ.ಪ್ರಧಾನ ಗುರುದತ್ತ)
ನಿವೃತ್ತ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು.

ಅಭ್ಯರ್ಥಿಯ ಘೋಷಣಾ ಪತ್ರ

"ವ್ಯಾಸಭಾರತ ಮತ್ತು ಜನಪದ ಮಹಾಭಾರತಗಳ ಆಯ್ದ ಮಹಿಳಾ ಪಾತ್ರಗಳು" (ಎ.ಆರ್.ಕೃಷ್ಣಶಾಸ್ತ್ರೀ ಅವರ ವಚನಭಾರತ ಮತ್ತು ಪಿ.ಕೆ.ರಾಜಶೇಖರ ಅವರು ಸಂಗ್ರಹಿಸಿರುವ ಜನಪದ ಮಹಾಭಾರತಗಳ ಹಿನ್ನಲೆಯಲ್ಲಿ) ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಕನ್ನಡ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ.ಪ್ರಧಾನ ಗುರುದತ್ತ** ನಿವೃತ್ತ ಪ್ರಾಧ್ಯಾಪಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ನಿಬಂಧಕಾರರು

ಎಚ್.ಎಂ.ನಟರಾಜು

ಕನ್ನಡ ಎಂ.ಫಿಲ್

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಮಾನಸ ಗಂಗೋತ್ರಿ
ಮೈಸೂರು.

ಸ್ಥಳ: ಮೈಸೂರು
ದಿನಾಂಕ: ೨೧-೦೮-೨೦೦೮

ಪರಿವಿಡಿ

ಅನುಬಂಧ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಭಾರತೀಯ ಪರಂಪರೆಯಲ್ಲಿ 'ರಾಮಾಯಣ', 'ಮಹಾಭಾರತಗಳು' ಮೌಲ್ಯಯುತವಾದವುಗಳು. ಮಹಾಭಾರತವಂತೂ ತನ್ನೆಲ್ಲಾ ಗುಣಮೌಲ್ಯಗಳೊಂದಿಗೆ ಅಭಿವ್ಯಕ್ತವಾಗುವ ಜೀವನ ನೆಲೆಯ ಕಾವ್ಯವಾಗುತ್ತದೆ. ಮಹಾಭಾರತದ ಪಾತ್ರಗಳು ವ್ಯಕ್ತಿಗಳಾಗದೆ ಸಂಕೇತಗಳಾಗಿ ನಿಲ್ಲುತ್ತವೆ. ಜೊತೆಗೆ ಓದುಗರ ಸಂಸ್ಕಾರಾನುಗುಣವಾಗಿ ಅರಳುತ್ತ, ವಿಸ್ತಾರತೆ ಪಡೆದಿವೆ. ಈ ರೀತಿಯಿಂದ ಅವುಗಳು ಸಂದಾನಕ್ಕೆಳೆಸುತ್ತವೆ. ಮತ್ತು ಜನಾಂಗದ ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸುವ ಮೂಲಕ ತಮ್ಮತನವನ್ನು ಮೆರೆದಿರುವುದು ವಿದಿತವಾದ ವಿಷಯವೇ. ಆದರೆ ಇದಕ್ಕೊಂದು ಜಾನಪದ ಆಯಾಮವಿತ್ತೇ? ಅದಾದರೂ ಯಾವ ರೀತಿಯದು ಎಂಬುದು ಅಲ್ಲಲ್ಲಿ ಚದುರಿ ಹೋಗಿ ಬಿಡಿಬಿಡಿಯಾಗಷ್ಟೇ ನಮಗೆ ದೊರೆತಿದ್ದುದು ಸಾಮಾನ್ಯವಾಗಿತ್ತು. ಆದರೆ ಈಚೆಗೆ ಪಿ.ಕೆ. ರಾಜಶೇಖರ ಅವರು ಬೆಟ್ಟದಬೀಡು ಸಿದ್ಧಶೆಟ್ಟರ ಬಾಯಿಂದ ಕೇಳಿ ಬರೆದುಕೊಂಡ 'ಜನಪದ ಮಹಾಭಾರತ'ವು ಪೂರ್ಣ ಪ್ರಮಾಣದ ಕೃತಿಯಾಗಿ ಕಂಡುಬರುತ್ತದೆ.

ಹೀಗೆ ಮೂಲಭಾರತ ಮತ್ತು ಜನಪದ ಭಾರತಗಳು ಜನಮಾನಸದಲ್ಲಿ ನಿಂತ ಬಗೆಯ ಹಾಗೆಯೇ ಅವುಗಳಲ್ಲಿನ ಪಾತ್ರಗಳು ನಿರ್ವಹಿಸುವ ಗುಣಮೌಲ್ಯಗಳು ಮುಖ್ಯವಾದವು. ಮೂಲದಲ್ಲಿ ದೈವತ್ವದ ಪರಿವೇಷದೊಡನೆ ಮಾನವ ಸಹಜ ಗುಣಗಳನ್ನು ಅವು ಒಳಗೊಂಡರೆ, ಜನಪದದಲ್ಲಿ ದೈವವೂ ಸಾಮಾನ್ಯ ರೂಪತೆ ಪಡೆದುಕೊಳ್ಳುವ ಸನ್ನಿವೇಶಗಳೇ ಹೆಚ್ಚಾಗಿ ಕಂಡುಬರುತ್ತವೆ. ಅಂದರೆ ಸಾಹಿತ್ಯ ಪ್ರಯೋಜನಗಳ ನೆಲೆಯು ಕಾಲದಿಂದ ಕಾಲಕ್ಕೆ ವಿಶಾಲತೆ ಪಡೆಯುತ್ತಾ ಸಾಗುವಲ್ಲಿ ಆನಂದ, ರಸದ ಆಸ್ವಾದನೆ, ವೈಯಕ್ತಿಕ ಭಿನ್ನತೆಗಳು ಕಾರ್ಯ ನಿರ್ವಹಿಸುವ ಹಂತದಲ್ಲಿ ಈ ಪ್ರಕ್ರಿಯೆಗಳು ಜರುಗುವುದು ಸಾಮಾನ್ಯ.

ಪ್ರಾಚೀನವಾದ ಸಾಹಿತ್ಯದಲ್ಲಿ ನೀತಿಯು ಮೌಲ್ಯವಾಗುವುದರೊಂದಿಗೆ ಅದರೊಂದಿಗಿನ ತಿಳಿವು, ವಿವೇಕ, ಔದಾರ್ಯ, ಸಹಾನುಭೂತಿ, ಅಂತಃಕರಣದಂತಹ ಅನೇಕ ಅನುಭವಗಳನ್ನು ನೆಲೆಗೊಳಿಸುವ ಮೂಲಕ ಕವಿಯಾದವನು ನಿರ್ವಹಿಸುವ ಪ್ರತಿಹಂತವೂ ಆಪ್ತವಾಗುವಂಥದ್ದು. ಇದರಿಂದಲೇ ಜನರು ಅವುಗಳನ್ನು ಹತ್ತಿರ ತಂದುಕೊಳ್ಳಲಿಕ್ಕೆ ಹೆಚ್ಚು ಅನುವು ಮಾಡಿಕೊಟ್ಟಿರುವ ಸಾಧ್ಯತೆಗಳಾಗಿರುವುದು.

ಹೀಗೆ ಪರಂಪರೆಯ ಪ್ರಸ್ಥಾನಗಳಲ್ಲಿ ಅಂದರೆ ಜನಪದ ಮತ್ತು ಶಿಷ್ಟಸಾಹಿತ್ಯದಲ್ಲಿ ಭಾರತದ ಕಥೆ ನಿಲ್ಲುವ ಸ್ಥಾನವನ್ನು ಕಂಡುಕೊಳ್ಳುವುದರೊಂದಿಗೆ ಅವುಗಳಲ್ಲಿನ ಪಾತ್ರಗಳ

ಗುಣಮೌಲ್ಯಗಳನ್ನು ಅಳೆಯುವ ಗಂಭೀರ ಚರ್ಚೆಯು ಈ ಪ್ರಬಂಧದ ಮಹೋದ್ದೇಶವಾಗಿದೆ. ಅಂದರೆ ಒಟ್ಟಾರೆ ಎರಡೂ ಭಾರತಗಳಲ್ಲಿನ 'ಸ್ತ್ರೀ ಪಾತ್ರ'ಗಳೇ ಅಧ್ಯಯನದ ಮುಖ್ಯ ಅಂಶವಾಗಿ ಗೋಚರಿಸುತ್ತವೆ.

ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಪೂಜ್ಯ ಸ್ಥಾನವಿದೆ. ಸ್ತ್ರೀಯನ್ನು ಆದಿಶಕ್ತಿ ಎಂದು ಕರೆದು ಪೂಜಿಸಿದ್ದಾರೆ. ವಿದ್ಯೆಗೆ, ಬುದ್ಧಿಗೆ, ಶಕ್ತಿಗೆ ಅಧಿದೇವತೆಗಳು ಸ್ತ್ರೀಯರೇ ಆಗಿರುವುದು ಭಾರತೀಯ ಪರಂಪರೆಯಲ್ಲಿ ವಿದಿತವಾಗಿದೆ. ಹಾಗಾಗಿಯೇ ತ್ರಿಮೂರ್ತಿಗಳಲ್ಲಿ ವಿಷ್ಣುವು ಲಕ್ಷ್ಮಿಗೆ ತನ್ನ ಹೃದಯದಲ್ಲಿ ಸ್ಥಾನವಿತ್ತರೆ, ಪರಶಿವನು ತಲೆಯ ಮೇಲೆಯೂ, ಬ್ರಹ್ಮನೂ ತೊಡೆಯ ಮೇಲೆಯೂ ಸ್ಥಾನವಿತ್ತಿದ್ದಾನೆ. ಸಾಮಾನ್ಯ ತಿಳುವಳಿಕೆಯಂತೆಯೇ ಪ್ರಕೃತಿ–ಪುರುಷ ಸಂಬಂಧದ ಕಲ್ಪನೆಯಲ್ಲಿ ಈ ಎರಡರ ಬಂಧ ಮುಖ್ಯವಾಗಿ 'ಜಗತ್ ಸೃಷ್ಟಿ'ಗೆ ಕಾರಣಭೂತವಾಗಿರುವುದುಂಟು. ಆದ್ದರಿಂದಲೇ ಸಕಲಭುವನಕ್ಕೂ ಸ್ತ್ರೀಯನ್ನೇ ಆದಿಶಕ್ತಿಯಾಗಿ, ಅನಂತರ ಅದರ ಇತರ ರೂಪಗಳ ಅವತಾರವನ್ನು ಕಲ್ಪಿಸಿರುವುದನ್ನು ಕಾಣಬಹುದು. ಸ್ತ್ರೀ ಒಂದು ಮನೆಯಲ್ಲಿ ಮಗುವಾಗಿ ಮತ್ತೊಂದು ಮನೆ ಬೆಳಗುವ ಮೂಲಕ ಎರಡೂ ಕಡೆಗೂ ಕೀರ್ತಿ ತರುವ ಗೌರವಕ್ಕೆ ಪಾತ್ರವಾಗಿರುವಂತಹವಳು. ತನ್ನ ತ್ಯಾಗ, ನಿಷ್ಕಲ್ಮಷ, ಪ್ರೀತಿ, ಮಮತೆ–ವಾತ್ಸಲ್ಯಗಳಂತೆಯೇ ತನ್ನ ಕುಟಿಲತೆಗಳಿಂದಲೂ ಮೆರೆಯುವ ಸ್ತ್ರೀಯರ ಆದರ್ಶಗಳನ್ನು ಬಿಂಬಿಸುವ ಅನೇಕ ಪುರಾಣ–ಪುಣ್ಯ ಕಥೆಗಳು ನಮಗೆ ಗೋಚರಿಸುತ್ತವೆ. ಹಾಗೆಯೇ ಒಂದು ಸಾಮ್ರಾಜ್ಯದ ಉನ್ನತಿಗೆ ಕಾರಣಳಾದಂತೆ ಅವನತಿಗೂ ಅಡಿಗಲ್ಲಾಗುವ ಸಾಮರ್ಥ್ಯ ಅವಳಲ್ಲಿದೆ ಎಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಇಂತಹ ಸ್ತ್ರೀಯು ಮಹಾಭಾರತ ವಾರಿಧಿಯಲ್ಲಿ ಮುಳುಗೆದ್ದು ನಿಂತ ನೆಲೆಯನ್ನು ಕುರಿತೇ ನನ್ನ ಅಧ್ಯಯನ ನಡೆದಿದೆ ಎನ್ನುವುದು ಉದ್ದೇಶವೂ, ಮಾನದಂಡವೂ ಆಗಿದೆ.

"ಕಾರ್ಯೇಷು ದಾಸೀ, ಕರುಣೇಶು ಮಂತ್ರಿ, ಭೋಜೇಶು ಮಾತಾ,
ರೂಪೇಷು ಲಕ್ಷ್ಮೀ, ಕ್ಷಮಯಾ ಧರಿತ್ರಿ, ಶಯನೇಷು ರಂಭಾ" ಎಂದು

ಪೂಜ್ಯ ಸ್ಥಾನದಲ್ಲಿಟ್ಟು ಗೌರವಿಸಿರುವಂತೆ ಈ ಗುಣ ಮೌಲ್ಯಗಳನ್ನು ಸಾದರಪಡಿಸುವ ಸ್ತ್ರೀಯು ಭಾರತದೊಳಗೆ ನಿಂತ ನೆಲೆಗಳನ್ನು ನೋಡುವುದಷ್ಟೇ ಪ್ರಬಂಧದ ಉದ್ದೇಶವಾಗಿದೆ. ಅಂದರೆ ಸ್ವಾರ್ಥದ ಪರಿಧಿ ಮೀರಿ ಮನುಷ್ಯರ ನಡುವಿನ ಸ್ಪಂದನೆ, ಸಹಜತೆ, ಪ್ರೀತಿ, ಗೌರವ, ಪ್ರಾಮಾಣಿಕತೆ ಮುಂತಾದ ಮಾನವೀಯ ಗುಣಗಳನ್ನು ಕಂಡುಕೊಳ್ಳುವುದಷ್ಟೇ ಮುಖ್ಯ ಅಂಶಗಳಾಗಿವೆ.

ಇಷ್ಟಾಗಿಯೂ ಇದು ಅಂತಿಮವಾದುದಲ್ಲ ಎಂಬುದು ಮುಖ್ಯ. ಮಹಾಭಾರತದಂತಹ ಕೃತಿಗೆ, ಅದರೊಳಗಿನ ಪಾತ್ರಗಳ ವೈವಿಧ್ಯಕ್ಕೆ ಅಂತಿಮತೆರೆ ಎಳೆಯಲಾಗದು ಎಂಬುದು ಎಲ್ಲರೂ ಒಪ್ಪುವ ಸಂಗತಿಯೇ ಆಗಿದೆ ಎಂದು ತಿಳಿದುಕೊಳ್ಳುತ್ತೇನೆ.

ಅಧ್ಯಾಯ ೧

ಕೃತಿಕಾರರ ಪರಿಚಯ

ಎ.ಆರ್.ಕೃಷ್ಣಶಾಸ್ತ್ರೀ

ಬಹುಮುಖ ವ್ಯಕ್ತಿತ್ವದ ಇವರು ೧೨.೦೨.೧೮೯೦ರಲ್ಲಿ ಜನಿಸಿದರು. ಇವರು ಚಿಕ್ಕಮಗಳೂರು ಜಿಲ್ಲೆಯ ಅಂಬಳೆ ಗ್ರಾಮದವರು. ತಂದೆ ರಾಮಕೃಷ್ಣಶಾಸ್ತ್ರೀ, ತಾಯಿ ಶಂಕರಮ್ಮನವರಿಗೆ ಮೊದಲ ಮಗ. ಲೋಯರ್ ಸೆಕೆಂಡರಿಯನ್ನು ಓದುವಾಗಲೆ ವೆಂಕಟಲಕ್ಷ್ಮಮ್ಮನವರ ಜೊತೆ ವಿವಾಹ. ಮದ್ರಾಸಿನಲ್ಲಿ ಖಾಸಗಿಯಾಗಿ ಕನ್ನಡ ಎಂ.ಎ. ಮಾಡುವಾಗಲೇ ಅಠರಾ ಕಚೇರಿಯಲ್ಲಿ ಕೆಲಸ ಮಾಡಿದರು. ೧೯೬೧ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಟ್ಯೂಟರ್ ಆಗಿ ಅಧ್ಯಾಪಕ ವೃತ್ತಿಗೆ ಪಾದಾರ್ಪಣೆ ಮಾಡಿದರು. ಕೆಲಕಾಲ ಪ್ರಾಚ್ಯ ಸಂಶೋಧನಾಲಯದಲ್ಲಿ (ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್) ಕೆಲಸ ಮಾಡಿದರು. ೧೯೩೯ರಿಂದ ನಿವೃತ್ತಿವರೆಗೆ ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಬೋಧನೆ ಮಾಡಿ ಹಲವು ಉತ್ತಮ ಶಿಷ್ಯರನ್ನು ರೂಪಿಸಿದರು.

ಅವರ ವ್ಯಕ್ತಿತ್ವವನ್ನು ಗುರುತಿಸುತ್ತ “ತಿಳಿಮನಸ್ಸು, ಕಳಕಳಿ, ಪ್ರಾಚ್ಯ ಮತ್ತು ಪಾಶ್ಚಾತ್ಯ ವಿದ್ವತ್ತಿನ ಸುಸ್ಪಷ್ಟ ತಿಳಿವಳಿಕೆ, ಅನೇಕ ಭಾಷಾಜ್ಞಾನ, ನಿಷ್ಕೃಷ್ಟ ವ್ಯಾಕರಣ ಜ್ಞಾನ, ಜೀವನಶ್ರದ್ಧೆ, ನಿಷ್ಠೆ, ಸೂಕ್ಷ್ಮ ಸಾಹಿತ್ಯ ಸಂವೇದನೆ, ಅಗಾಧ ಲೋಕಾನುಭವ, ಆಡಂಬರವೈರ” ಇವು ಅವರ ಲಕ್ಷಣವೆಂದು ಕೆ.ಕೃಷ್ಣಮೂರ್ತಿಯವರು ತಿಳಿಸುತ್ತಾರೆ.

ಇವರು ಸೆಂಟ್ರಲ್ ಕಾಲೇಜಿನಲ್ಲಿ ‘ಪ್ರಬುದ್ಧ ಕರ್ನಾಟಕ’ವನ್ನು ಪ್ರಾರಂಭಿಸಿದರು. ಅದನ್ನು ಹೊಸಗನ್ನಡ ಸಾಹಿತ್ಯದ ಬೆಳ್ಳಿ ಕಿರಣ’ ಎನ್ನಲಾಗಿದೆ. ೧೯೧೮ರಲ್ಲಿ ‘ಕರ್ನಾಟಕ ಸಂಘ’ವನ್ನು ಕಟ್ಟಿ ಬೆಳೆಸಿದರು. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ ನಿಘಂಟುವಿನ ಪ್ರಥಮ ಸಂಪಾದಕರಾಗಿದ್ದು ಅದಕ್ಕೊಂದು ಖಚಿತ ರೂಪವನ್ನು ಕೊಟ್ಟವರೂ ಅವರೆ.

ಶಾಸ್ತ್ರಿಗಳು ಗ್ರಂಥರಚನೆ, ವಿಮರ್ಶೆ, ಸಂಪಾದನೆ, ಅನುವಾದ, ಶಾಸ್ತ್ರಸಾಹಿತ್ಯ, ಲಲಿತ ಸಾಹಿತ್ಯ ಕ್ಷೇತ್ರದಲ್ಲಿ ದುಡಿಮೆ ಗೈಯ್ದಿದ್ದಾರೆ. ‘ಸಂಸ್ಕೃತನಾಟಕ’, ‘ಸರ್ವಜ್ಞಕವಿ’, ‘ಭಾಸಕವಿ’, ‘ಗದಾಯುದ್ಧ ನಾಟಕ ಮತ್ತು ಅದರ ನಾಯಕ’ ‘ಬಂಕಿಮಚಂದ್ರ’ ಇವು ಅವರ ವಿಮರ್ಶಾ ಕೃತಿಗಳು. ‘ನಿಬಂಧಮಾಲಾ’, ‘ಶ್ರೀರಾಮಕೃಷ್ಣ ಪರಮಹಂಸ ಚರಿತ್ರೆ’, ‘ವಚನಭಾರತ’ ‘ಕಥಾಮೃತ’, ‘ಸ್ವಾಮಿ ಶಿಷ್ಯ ಸಂವಾದ’, ‘ನಾಗಮಹಾಶಯ’. ಇವು ಅನುವಾದಿತ ಕೃತಿಗಳು.

‘ಶ್ರೀಪತಿಯ ಕಥೆಗಳು’ ಲಲಿತ ಸಾಹಿತ್ಯದ ಇವರ ಒಂದೇ ಕೃತಿಯಾಗಿದೆ. ‘ನಿರ್ಮಲಭಾರತಿ’ ಮಕ್ಕಳಿಗಾಗಿ ಬರೆದ ಮಹಾಭಾರತವಾಗಿದೆ.

ಕೃಷ್ಣಶಾಸ್ತ್ರಿಗಳನ್ನು ಸಾಹಿತ್ಯ ಚರಿತ್ರೆಯಲ್ಲಿ ‘ಗದ್ಯಶಿಲ್ಪಿ’, ‘ಹೊಸ ಪರಂಪರೆಯ ನಿರ್ಮಾಪಕ’, ‘ಕೃಷ್ಣಶಾಸ್ತ್ರಿಗಳ ಮಾರ್ಗ’ವೆಂದೆಲ್ಲಾ ಗುರುತಿಸಿದೆ. ಅಲ್ಲದೆ ‘ಕನ್ನಡದ ಅಶ್ವಿನಿ ದೇವತೆ’ಗಳಲ್ಲಿ ಒಬ್ಬರು (ಇನ್ನೊಬ್ಬರು ಟಿ.ವಿ.ಎಸ್.ವೆಂಕಣ್ಣಯ್ಯ) ಎಂದು ಕರೆಯಲಾಗಿದೆ.

ಕೃಷ್ಣಶಾಸ್ತ್ರಿಗಳಿಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳೂ ಸಂದಿವೆ. ಅವುಗಳೆಂದರೆ.

೧೯೪೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ನಡೆಸಿದ ೨೬ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (ಹೈದರಾಬಾದ್). ೧೯೫೬ರಲ್ಲಿ ಅಭಿಮಾನಿಗಳು-ಶಿಷ್ಯ ವೃಂದದಿಂದ ‘ಅಭಿನಂದನೆ’, ಗ್ರಂಥ ಸಮರ್ಪಣೆ, ೧೯೬೦ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ೧೯೬೧ರಲ್ಲಿ ಅವರ ‘ಬಂಕಿಮಚಂದ್ರ’ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಹೀಗೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾದ ಇವರು ಫೆಬ್ರುವರಿ ೧, ೧೯೬೮ರಲ್ಲಿ ಅಸುನೀಗಿದರು. ‘ಪ್ರಬುದ್ಧ ಕರ್ನಾಟಕ’ದ ೫೦ನೇ ಸಂಪುಟದ ಮೊದಲ ಸಂಚಿಕೆಯನ್ನು ಇವರ ನೆನಪಿನ ಸಂಚಿಕೆಯನ್ನಾಗಿ ಪ್ರಕಟಿಸಲಾಗಿದೆ.

ಕೃಪೆ:

೧. ಸಾಲು ದೀಪಗಳು, (ಸಂ.) ಎಂ.ಎಚ್.ಕೃಷ್ಣ ಮತ್ತು ಜಿ.ಎಸ್.ಸಿದ್ದಲಿಂಗಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨. ಕನ್ನಡ ಸಾಹಿತ್ಯ ಕೋಶ, (ಸಂ.) ರಾಜಪ್ಪ ದಳವಾಯಿ, ರಾಘವೇಂದ್ರ ಪ್ರಕಾಶನ, ಬೆಂಗಳೂರು.

ಪಿ.ಕೆ. ರಾಜಶೇಖರ

ತಮ್ಮ ಎಳೆಯ ವಯಸ್ಸಿನಲ್ಲಿಯೇ ಹಳ್ಳಿಯ ಸಾಹಿತ್ಯವನ್ನು ಮೂಲ ನೆಲೆಯಲ್ಲಿ ಸಂಗ್ರಹಿಸುವ ಹವ್ಯಾಸ ಹತ್ತಿಸಿಕೊಂಡು ಜಾನಪದ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲನ್ನು ನೆಟ್ಟ ಕೀರ್ತಿಗೆ ಭಾಜನರಾಗಿರುವ ಇವರು ೦೩.೧೦.೧೯೪೯ರಲ್ಲಿ ಪಿರಿಯಾಪಟ್ಟಣದ ಪಿ.ಡಿ.ಕೆಂಪೇಗೌಡ ಮತ್ತು ಕೆಂಪಮ್ಮನವರ ಸುಪುತ್ರನಾಗಿ ಜನಿಸಿದರು. ಹಳ್ಳಿಯ ವಾತಾವರಣದಲ್ಲಿ ಬೆಳೆದು ಬಂದ ಇವರು ೧೯೭೦ರಲ್ಲಿ ಎಂ.ಎ. ಪದವಿಯನ್ನು ಸ್ವರ್ಣಪದಕದೊಂದಿಗೆ ತಮ್ಮದಾಗಿಸಿಕೊಂಡು ೧೯೮೧ರಲ್ಲಿ ಪಿ.ಎಚ್.ಡಿ. ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದರು. ಅನಂತರ ಅಧ್ಯಾಪಕ ವೃತ್ತಿಯನ್ನು ಕೈಗೊಂಡು ವಿಶ್ವವಿದ್ಯಾನಿಲಯದ ಮಹಾರಾಜ, ಯುವರಾಜ, ಲಲಿತಕಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಲ್ಲದೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ದುಡಿದು ನಿವೃತ್ತಿ ಹೊಂದಿದ್ದಾರೆ.

ಪಿ.ಕೆ.ರಾಜಶೇಖರ ಅವರು ಜಾನಪದ ಕ್ಷೇತ್ರ ಸಂಶೋಧನೆಯಲ್ಲಿ ಅಗಾಧ ಸಾಧನೆ ಮಾಡಿರುವುದು ಅವರ ಅನೇಕ ಸಂಶೋಧನಾ ಕೃತಿಗಳಿಂದ ಸಾಧಿತವಾಗಿದೆ. ಅವರ 'ಬೆಟ್ಟದ ಚಾಮುಂಡಿ' (೧೯೭೭) 'ಜನಪದ ರಾಮಾಯಣ' (೧೯೭೩), 'ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ' (ಭಾಗ-೧-೨) (೧೯೭೩), 'ಮಾಗಡಿ ಕೆಂಪೇಗೌಡ' (೧೯೭೩), 'ಜನಪದ ಚಮತ್ಕಾರ ಗಣಿತ' (೧೯೭೫), 'ಜನಪದ ಆಯ್ದ ಲೆಕ್ಕಗಳು' (೧೯೭೯), 'ಅವ್ವನಿನದನಿ ಅಪರಂಜಿ' (೧೯೮೧), 'ನಮ್ಮ ಜನಪದ ವಾದ್ಯಗಳು' (೧೯೮೦), 'ಜನಪದ ಬಸವ ಪುರಾಣ' (೧೯೮೧), 'ಮುದ್ದು ಮಾದೇವನ ನೆನೆದೇವು' (೧೯೭೪), 'ಜನಪದ ವೀರಕಾವ್ಯ ಪಿರಿಯಾಪಟ್ಟಣದ ಕಾಳಗ' (೧೯೯೦), 'ಚುಂಚನಗಿರಿ ಭೈರವೇಶ್ವರ' (೧೯೮೩), 'ಚಾಮುಂಡಿ ಸಿರಿ ಚಾಮುಂಡಿ' (೧೯೯೪), 'ಕರಪಾಲಬಸವ ಪುರಾಣ' (೧೯೯೫), 'ಮುತ್ತಿನ ಕಣಜ' (೨೦೦೦), 'ಮಾತಿನ ಅರಗಿಣಿ' (೧೯೯೮), 'ಜನಪದ ಗಣಿತ ಪ್ರಪಂಚ' (೧೯೯೯), 'ಜಾನಪದ ಸಂಭ್ರಮ' (೨೦೦೩), 'ಜನಪದ ಮಹಾಭಾರತ' (೨೦೦೪), 'ಪ್ರಾರ್ಥನ ಜೋಗೀಹಾಡು' (೨೦೦೪), 'ಕೋಗಿಲಾಗಿ ಕೂಗುತೀಯಲ್ಲೋ' (೨೦೦೪), 'ಬಾರಯ್ಯ ಬೆಳದಿಂಗಳೆ' (೨೦೦೪) ಗಳಲ್ಲದೆ ಅನೇಕ ಕೃತಿಗಳನ್ನು ಕೊಟ್ಟಿದ್ದಾರೆ. ಇಲ್ಲಿ ಗಾದೆ, ಜನಪದ ಕಥೆ ಇತ್ಯಾದಿಗಳೆಡೆಗೆ ಅವರು ವಹಿಸಿರುವ ಆಸ್ಥೆ ಎದ್ದು ಕಾಣುತ್ತದೆ.

ಹೀಗೆ ಪಿ.ಕೆ.ರಾಜಶೇಖರ ಅವರು ಜಾನಪದಕ್ಕೆ ಮೀಸಲಾಗದೆ 'ಮಾನಸ ದೀಪ್ತಿ', 'ಪ್ರತಿಬಿಂಬ', 'ಸ್ವಾತಿಮುತ್ತುಗಳು', 'ನಾನಲ್ಲದ ನಾನು' ಎಂಬ ಕೃತಿಗಳಲ್ಲಿ ಕಾವ್ಯದ ಕೃಷಿಗೈದಿದ್ದಾರೆ. ಭಾಷಾಶಾಸ್ತ್ರಕ್ಕೆ 'ಪದ ವಿವರಣ ಕೋಶ', 'ಪದಸಂಪದ' ಎಂಬ ಕೃತಿಗಳನ್ನು ನೀಡಿದ್ದಾರೆ. ಮಕ್ಕಳ ಸಾಹಿತ್ಯಕ್ಕಾಗಿ 'ಚಿನ್ನದ ತುಪ್ಪಳ', 'ಅಭಿನವ ಕಾಳಿದಾಸ', 'ವಿದ್ಯಾವಿಶಾರದೆ

ಕಂತಿ', 'ದಲಿತ ಭಾರತ' ಕೃತಿಗಳನ್ನು ನೀಡಿದ್ದಾರಲ್ಲದೆ 'ಶಿವಸಂಪದ', 'ರಜತಶ್ರೀ', 'ಸಂಜೀವಿನಿ' ಕೃತಿಗಳನ್ನು ಸಂಪಾದಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.

ಇಷ್ಟೆಲ್ಲಾ ಕೆಲಸ ಕಾರ್ಯಗಳನ್ನು ಮಾಡಿದ ಇವರಿಗೆ ಹಲವು ಸಂಘ-ಸಂಸ್ಥೆಗಳು ನೀಡಿದ ಪ್ರಶಸ್ತಿ ಪುರಸ್ಕಾರಗಳು ಹಲವಾರು.

೧೯೭೩ರಲ್ಲಿ 'ಮಲೆಯ ಮಾದೇಶ್ವರ' ಮಹಾಕಾವ್ಯಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,

೧೯೯೦ರಲ್ಲಿ 'ಪಿರಿಯಾಪಟ್ಟಣ ಕಾಳಗ' ವೀರಕಾವ್ಯಕ್ಕೆ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ.

೧೯೯೩ರಲ್ಲಿ 'ಪದವಿವರಣ ಕೋಶ'ಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉತ್ತೇಜಕ ಪ್ರಶಸ್ತಿ.

೧೯೯೭ರಲ್ಲಿ 'ಕರಪಾಲ ಬಸವ ಪುರಾಣ'ಕ್ಕೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ.

೧೯೯೮ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವತಿಯಿಂದ 'ಜಾನಪದ ತಜ್ಞ', ಪ್ರಶಸ್ತಿ.

೨೦೦೫ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಲ್ಲದೆ,

ಪಿ.ಎನ್.ಜವರಪ್ಪಗೌಡ ಪ್ರತಿಷ್ಠಾನದ 'ಸಮಾಜಮುಖಿ' ಪ್ರಶಸ್ತಿ (೨೦೦೫) ದಕ್ಷಿಣ ವಲಯ ಲಯನ್ಸ್ ಕ್ಲಬ್‌ನ 'ದಕ್ಷಿಣ ಸಾಹಿತ್ಯ ಕೇಸರಿ' ಪ್ರಶಸ್ತಿ ಬೊಪ್ಪೇಗೌಡನಪುರ ಮಂಟೇಸ್ವಾಮಿ ಪ್ರತಿಷ್ಠಾನದ 'ಶ್ರೇಷ್ಠ ಬರಹಗಾರ' ಪ್ರಶಸ್ತಿ ಫಾರೂಖಿ ವಿದ್ಯಾಸಂಸ್ಥೆಯಿಂದ 'ಜಾನಪದರತ್ನ ಭಂಡಾರ' ಪ್ರಶಸ್ತಿ, ತರೀಕೆರೆ ಗೆಳೆಯರ ಬಳಗದ ವತಿಯಿಂದ 'ಕನಕಶ್ರೀ' ಪ್ರಶಸ್ತಿ, ಜನಪದ ಮಹಾಭಾರತ ರೂಪಕಕ್ಕಾಗಿ 'ಪ್ರಸಾರ ಭಾರತಿ ಪ್ರಶಸ್ತಿ'ಯಲ್ಲದೆ ೨೦೦೮ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ರಜತಮಹೋತ್ಸವ' ಪ್ರಶಸ್ತಿ ಲಭಿಸಿದೆ. ಇದರೊಂದಿಗೆ ಅವರು ವೃತ್ತಿ ಜೀವನದಿಂದ ನಿವೃತ್ತಿ ಹೊಂದಿದ ಸಂದರ್ಭದಲ್ಲಿ 'ಜಾನಪದ ಜೋಗಿ' ಎಂಬ ಅಭಿನಂದನಾ ಗ್ರಂಥವನ್ನು (೨೦೦೮) ಸಮರ್ಪಿಸಲಾಗಿದೆ. ಪ್ರಸ್ತುತದಲ್ಲಿ ಪಿ.ಕೆ.ರಾ. ಅವರು ತಮ್ಮ 'ಹೊನ್ನಾರು ಜನಪದ ಗಾಯಕ ವೃಂದ'ವೆಂಬ ಗಾಯನ ಸಂಸ್ಥೆಯ ಮೂಲಕ ಹಾಡುತ್ತಾ ತಮ್ಮ ಕ್ಷೇತ್ರಕಾರ್ಯದ ಹಾದಿಯಲ್ಲಿ ಸಾಗಿದ್ದಾರೆ.

ಅಧ್ಯಾಯ ೨

ಮಹಾಕಾವ್ಯ : ಸ್ವರೂಪ, ಲಕ್ಷಣ ಮತ್ತು ಪ್ರಭೇದಗಳು

ಮಹಾಕಾವ್ಯ ಒಂದು ಸಾಹಿತ್ಯ ಪ್ರಕಾರ, ಕಾವ್ಯ ಪ್ರಕಾರದ ಅಂತಿಮ ಹಂತ ಎನ್ನಬಹುದು. ಸಾಹಿತ್ಯ ವಾಹಿನಿಯಲ್ಲಿ ಕಾವ್ಯ, ಕಥನಕಾವ್ಯ, ಖಂಡಕಾವ್ಯ, ಮಹಾಕಾವ್ಯ ಎಂದು ವಿಭಾಗೀಕರಣವನ್ನು ಕಾಣಬಹುದು. ಆದರೆ ವಸ್ತು, ಪಾತ್ರ, ಗಾತ್ರ, ಬೃಹತ್ತು, ಮಹತ್ತುಗಳ ಮಹಾಮಾಲೆಯೇ ಮಹಾಕಾವ್ಯವಾಗಿದೆ.

ಕಾವ್ಯವು ಭಾವ ಪ್ರಧಾನವಾಗಿದ್ದು, ಕವಿಯ ಬುದ್ಧಿವಿಲಾಸದಿಂದ ಸೃಜನೆಗೊಂಡಿದ್ದಾಗಿದೆ. ನಮ್ಮ ಪೂರ್ವಿಕರು ಕಾವ್ಯದ ಲಕ್ಷಣವನ್ನು ಹೇಳ ಹೊರಟು 'ಕಾವ್ಯಂ ಯಶಸ್ಸೇಽರ್ಥಕೃತೇ ವ್ಯವಹಾರವಿದೇ'[೧] ಎಂದು ಹೇಳಿದ್ದಾರೆ. ಈ ಲಕ್ಷಣಗಳಿಂದಾದ ಅನೇಕ ಕಾವ್ಯಗಳು ಇದ್ದರೂ, ಅವು ಸಾಮಾನ್ಯ ಕಾವ್ಯಗಳು. ಮಹಾಕಾವ್ಯವಾದರೋ ಮನುಷ್ಯನ ಅಂದರೆ ಜನಸಮುದಾಯದ ಸಾಂಸ್ಕೃತಿಕ ಗ್ರಹಿಕೆಗಳನ್ನು ಸಂವಹನಿಸಿ ಒಂದು ಸಾಂಸ್ಕೃತಿಕ ಪರಂಪರೆಯನ್ನು ದಾಖಲಿಸುತ್ತದೆ; ಹಾಗೂ ಪೀಳಿಗೆಯಿಂದ ಪೀಳಿಗೆಗೆ ರವಾನಿಸುತ್ತದೆ. ಅದಲ್ಲದೆ ಮನುಷ್ಯನ ಆಳ ನೀಳಗನ್ನು ಮೇಲಕ್ಕೆತ್ತಿ ತೋರಿಸುವ ಜೀವಶೋಧಕ ಗುಣ ಹೊಂದಿದೆ. ಅದನ್ನೇ 'ಮ್ಯಾಥ್ಯೂ ಆರ್ನಾಲ್ಡ್ ಕವಿಯು Poetry is the criticism of life (ಕಾವ್ಯವು ಜೀವನ ಪರಾಮರ್ಶೆ)'[೨] ಎಂದಿದ್ದಾರೆ.

ಇಂಥ ಮಹಾಕಾವ್ಯವು ಪುರಾಣವೂ ಆಗಬಲ್ಲದು. ರಾಮಾಯಣ, ಮಹಾಭಾರತಗಳು ಏಕಕಾಲಕ್ಕೆ ಮಹಾಕಾವ್ಯಗಳು ಹೌದು, ಪುರಾಣಗಳೂ ಹೌದು. ಇವು 'ವಾಕ್ಪರಂಪರೆಯಲ್ಲಿದ್ದು, ಅನಂತರ ಪ್ರತಿಭಾವಂತರಿಂದ ಅಕ್ಷರ ಪರಂಪರೆಗೆ ಸೇರಿವೆ ಎಂಬದು ಮುಖ್ಯವಾದ ಅಂಶವಾಗಿದೆ. ಇಲ್ಲಿ ವಾಕ್ಪರಂಪರೆ ಎಂದರೆ ಜಾನಪದವೇ ಆಗಿದ್ದು, ತರುವಾಯ ಶಿಷ್ಟ ಸ್ವರೂಪವನ್ನು ಪಡೆದವು. ಜನಪದವು ಶಿಷ್ಟಕ್ಕೆ ವಸ್ತು ಸತ್ವಗಳನ್ನು ನೀಡಿಯೂ ತನ್ನತನವನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳಬಲ್ಲದು. ಮಹಾಕಾವ್ಯಗಳ ವಿಷಯದಲ್ಲೂ ಈ ಮಾತು ಅನ್ವಯವಾಗುತ್ತದೆ'[೩] ಎನ್ನಲಾಗಿದೆ.

---

[೧] ಮಮ್ಮಟ – ಭಾರತೀಯ ಕಾವ್ಯ ಮೀಮಾಂಸೆ – (ತೀ.ನಂ.ಶ್ರೀ)

[೨] ತೌಲನಿಕ ಕಾವ್ಯ ಮೀಮಾಂಸೆ – ಎಚ್.ತಿಪ್ಪೇರುದ್ರಸ್ವಾಮಿ

[೩] ಮಹಾಕಾವ್ಯ ಲಕ್ಷಣ – ಡಾ. ಶ್ರೀ ಪಾದಭಟ್

ಜನಪದವಾಗಲಿ, ಶಿಷ್ಟವಾಗಲಿ ಆಯಾ ಮಹಾಕಾವ್ಯಗಳಿಗೆ ನಿರ್ದಿಷ್ಟ ಸ್ವರೂಪ-ಲಕ್ಷಣಗಳಿವೆ. ನಿರ್ದಿಷ್ಟ ಕರ್ತೃವನ್ನು ಹೊರತುಪಡಿಸಿದರೆ ಶಿಷ್ಟ ಹಾಗೂ ಜನಪದ ಮಹಾಕಾವ್ಯಗಳ ಲಕ್ಷಣಗಳಲ್ಲಿ ಅಷ್ಟೇನೂ ಹೇಳಿಕೊಳ್ಳುವ ವ್ಯತ್ಯಾಸವಿಲ್ಲವೆನ್ನಬಹುದು.

ಸಾಮಾನ್ಯವಾಗಿ ಮಹಾಕಾವ್ಯ, ಪುರಾಣಾದಿಗಳು ಹುಟ್ಟು ಸಾವು, ಪುನರ್ಜನ್ಮ, ಅಮರತ್ವ, ಪಾಪ ಪುಣ್ಯಗಳನ್ನು ಹೇಳುವುದನ್ನು ಮನಗಾಣಬಹುದು. ಮಹಾಕಾವ್ಯಗಳಲ್ಲಿ ಸತ್ಯಗಳು ಪ್ರಶ್ನಾತೀತ, ವಾಸ್ತವವೆನಿಸುವ ಅಂಶಗಳು ಅಲ್ಲಲ್ಲಿ ಇಣಿಕಿದರೂ ನಂಬಿಕೆಯನ್ನು ಹುಟ್ಟಿಸುವಂತಹದ್ದು ಮುಖ್ಯಗುಣವಾಗಿದೆ.

ಮಹಾಕಾವ್ಯಗಳನ್ನು ಕುರಿತಂತೆ ಭಾರತೀಯ ಹಾಗೂ ಐರೋಪ್ಯ ವಿದ್ವಾಂಸರು ಹಲವಾರು ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಮಹಾಕಾವ್ಯದ ಬಗ್ಗೆ ಚರ್ಚಿಸುವಾಗ ಪುರಾಣ, ಇತಿಹಾಸ, ಮಹಾಕಾವ್ಯ ಮತ್ತು ಪ್ರಬಂಧ ಎಂಬ ಪದಗಳನ್ನು ನಾವು ಕಾಣುತ್ತೇವೆ. ಇಂತಹ ಪುರಾಣ ಮತ್ತು ಇತಿಹಾಸಗಳ ಸಂಬಂಧವನ್ನು ಎ.ಆರ್. ಕೃಷ್ಣಶಾಸ್ತ್ರಿಗಳು ಈ ರೀತಿ ಗುರುತಿಸುತ್ತಾರೆ. 'ಪುರಾಣ ಎಂದರೆ ಹಳೆಯದು, ಪ್ರಾಯಶಃ ಯಾರೂ ಕಂಡು ಅರಿಯದ್ದು, ಹಿಂದಿನಿಂದ ಕೇಳಿ ಮಾತ್ರ ಬಂದದ್ದು. ಇತಿಹಾಸ ಅಂದರೆ (ಇತಿ ಹ ಆಸ) ಹೀಗೆ ಇತ್ತಂತೆ. ಹೀಗೆ ನಡೆಯಿತಂತೆ ಎಂದು ಹೇಳುವ ಗ್ರಂಥ: ಹಿಂದಿನ ಚರಿತ್ರೆ. ಆದರೆ ಈಗಿನ ಕಾಲದಲ್ಲಿ ನಮಗೆ ಪರಿಚಿತವಾಗಿರುವ ಚರಿತ್ರೆಯಲ್ಲ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅದರ ಅರ್ಥವನ್ನು ಹೀಗೆ ಹೇಳಿದೆ.

"ಪುರಾಣ ಇತಿವೃತ್ತಂ ಆಖ್ಯಾಯಿಕೋದಾಹರಣಂ!
ಧರ್ಮಶಾಸ್ತ್ರಂ ಅರ್ಥಶಾಸ್ತ್ರಂ ಚೇತೀತಾಹಾಸ:॥ (೧-೫)-

ಎಂದರೆ ಇತಿಹಾಸದಲ್ಲಿ ಪುರಾಣ, ಚರಿತ್ರೆ, ಕಥೆ, ಉದಾಹರಣೆ, ಧರ್ಮಶಾಸ್ತ್ರ, ಅರ್ಥಶಾಸ್ತ್ರ ಎಲ್ಲ ಸೇರುತ್ತವೆ ಎಂದು ಅರ್ಥ"[೧] ಎಂದಿದ್ದಾರೆ. ಇದಲ್ಲದೆ "ಶ್ರೀ ವಿಷ್ಣುಧರ್ಮೋತ್ತರ ಮಹಾಪುರಾಣ"ದಲ್ಲಿ 'ಮಹಾಕಾವ್ಯ ಲಕ್ಷಣ' ಎಂಬ ಅಧ್ಯಾಯವೇ ಇದ್ದು, ಅದು ಉಪದೇಶಾತ್ಮಕವಾಗಿರದೆ ಮಹಾಪುರುಷನ ಚರಿತ್ರೆಯಾಗಿರುವ ಗ್ರಂಥ ಕಾವ್ಯ"[೨] ಎಂದು ತಿಳಿಸುತ್ತದೆ.

---

[೧] ಎ.ಆರ್.ಕೃಷ್ಣಶಾಸ್ತ್ರೀ : ವಾಚನಭಾರತ, ಮುನ್ನುಡಿ, ಪು ೩೦-೩೧.

[೨] ಟಿ.ವಿ. ವೆಂಕಟಾಚಲಶಾಸ್ತ್ರೀ : ಮಹಾಕಾವ್ಯ ಲಕ್ಷಣ, ಪು-೨೭, ಡಿ.ವಿ.ಕೆ.ಪ್ರಕಾಶನ.

ಭಾಮಹ ತನ್ನ 'ಕಾವ್ಯಾಲಂಕಾರ'ದಲ್ಲಿ "ಮಹಾಕಾವ್ಯದಲ್ಲಿ ನಾನಾ ಅಲಂಕಾರ ರಸಗಳಿರಬೇಕು. ಮುಖ, ಪ್ರತಿಮುಖ ಗರ್ಭ, ಅವಮರ್ಶ, ಹಾಗೂ ನಿರ್ವಹಣ ಮುಂತಾದ ಪಂಚಸಂಧಿಗಳಿರಬೇಕು"[೧] ಎಂದಿದ್ದಾನೆ.

ದಂಡಿ ತನ್ನ 'ಕಾವ್ಯಾದರ್ಶ'ದಲ್ಲಿ ಮತ್ತೂ ವಿಸ್ತರಿಸಿ "ಒಂದಕ್ಕಿಂತ ಹೆಚ್ಚು ಸರ್ಗಗಳು ಸೇರಿ ಆಗುವ ಪ್ರಬಂಧವೇ ಮಹಾಕಾವ್ಯವೆನಿಸುತ್ತದೆ. ಅದರಲ್ಲಿ ರಸಭಾವಗಳು ನಿರಂತರವಾಗಿರಬೇಕು"[೨] ಎನ್ನುತ್ತಾನೆ.

ಜಿನಸೇನಾಚಾರ್ಯರು ತಮ್ಮ ಪೂರ್ವ ಪುರಾಣದಲ್ಲಿ "ಮಹಾ ಕವಿಗಳ ಕೃತಿಗಳಲ್ಲಿ (ಮಹಾಕಾವ್ಯಗಳಲ್ಲಿ) ಉತ್ತಮವಾದ ಪದವಿನ್ಯಾಸ, ಶ್ರವಣ ಹಿತವಾದ ಬಂಧ, ಆಹ್ಲಾದಕರ ಅರ್ಥಗಳು ಇದ್ದು, ಮಹಾಪುರಾಣವೆನಿಸಲು ಅದು ಮಹಾಪುರಾಣ ಸಂಬಂಧಿಯಾಗಿರಬೇಕು, ಮಹಾಪುರುಷರ ಚರಿತ್ರೆಯನ್ನು ಕುರಿತು, ತ್ರಿವರ್ಗ ಫಲ ಪ್ರಯೋಜಕವಾಗಿರಬೇಕು"[೩] ಎಂದಿದ್ದಾರೆ.

"**ವಾಮನ** 'ಕಾವ್ಯಾಲಂಕಾರ ಸೂತ್ರ'ದಲ್ಲಿ ನಾಟಕಗಳ ರಹಸ್ಯ ತಿಳಿಯದೆ ಮಹಾಕಾವ್ಯ ಆಗಮ್ಯ" ಎಂದಿದ್ದಾನೆ. ಅಲ್ಲದೆ **ರುದ್ರಟ**ನು 'ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಕಾವ್ಯಗಳಲ್ಲಿ ಯುಕ್ತ ರೀತಿಯಲ್ಲಿ ರಸ ಸಮ್ಮಿಶ್ರವಾಗಿ ವಿಸ್ತರಿಸಬೇಕು ಎಂದಿದ್ದಾನೆ. ಇವರಲ್ಲದೆ ಹೇಮಚಂದ್ರ, ವಿದ್ಯಾನಾಥ, ಆನಂದವರ್ಧನ, ಭೋಜದೇವ, ವಾಗ್ಭಟ, ಅಮರಚಂದ್ರಚೂರಿ, ವಿಶ್ವನಾಥ, ಶ್ರೀಕೃಷ್ಣ, ಕೆಳದಿ ಬಸವರಾಜ, ನರಸಿಂಹ ಕವಿ, ಕಾಂತಿಚಂದ್ರ ವಿದ್ಯಾರತ್ನ ಮುಂತಾದ ಲಾಕ್ಷಣಿಕರು ಮಹಾಕಾವ್ಯ ಕುರಿತು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಅಲ್ಲದೆ ಕವಿರಾಜಮಾರ್ಗ, ನಾಗವರ್ಮನ ಕಾವ್ಯಾವಲೋಕನ, ಉದಿಯಾದಿತ್ಯನ ಉದಿಯಾದಿತ್ಯಾಲಂಕಾರ, ಬಾಲಚಂದ್ರದೇವನ 'ತತ್ತ್ವರತ್ನ ಪ್ರದೀಪಿಕೆ' ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ, ಮಾಧವಾಲಂಕಾರ, ಮಂಗರಾಜನ ಅಭಿನವಾಭಿಧಾನಂ, ನಿಜಗುಣಶಿವಯೋಗಿಯ ವಿವೇಕ ಚಿಂತಾಮಣಿ"[೪]ಗಳಲ್ಲೂ ಮಹಾಕಾವ್ಯವನ್ನು ಕುರಿತು ಚರ್ಚಿಸಿರುವುದನ್ನು ಕಾಣಬಹುದು.

ಹೀಗೆ ಭಾರತೀಯ ಲಾಕ್ಷಣಿಕರಲ್ಲದೆ ಮಹಾಕಾವ್ಯವನ್ನು ಕುರಿತು ಐರೋಪ್ಯ ವಿದ್ವಾಂಸರು ಸಹ ತಮ್ಮ ಹೇಳಿಕೆಯನ್ನು ನೀಡಿರುವುದುಂಟು.

---

[೧] ಕೆ.ಕೃಷ್ಣಮೂರ್ತಿ : ಕನ್ನಡ ಕಾವ್ಯಾಲಂಕಾರ, ಪು-೧೦ (ಇಲ್ಲಿಯ ಅನುವಾದ)

[೨] ಅದೇ, ಪುಟ ೧೪೩.

[೩] ಟಿ.ವಿ. ವೆಂಕಟಾಚಲಶಾಸ್ತ್ರೀ – ಮಹಾಕಾವ್ಯ ಲಕ್ಷಣ, ಪುಟ ೪೩.

[೪] ಅದೇ, ಪುಟ ೪೫-೮೭.

ಹೀಗೆ ಈ ಎಲ್ಲಾ ಲಕ್ಷಣಗಳೂ ಅಥವಾ ಗುಣಗಳೂ ಮಹಾಕಾವ್ಯದ ಗುಣಲಕ್ಷಣಗಳಾಗಿವೆ. ಈ ಕಾರಣದಿಂದ ಕಾವ್ಯದ ಬೇರೆ ಬೇರೆ ಪ್ರಕಾರಗಳಲ್ಲಿಲ್ಲದ ಪದಗಳು ಸಮೀಕ್ಷೆಯಿಂದ ಕಂಡುಬಂದಿರುವುದನ್ನು ಕಾಣಬಹುದಾಗಿದೆ.

ಇದುವರೆಗಿನ ಸಮೀಕ್ಷೆಯಿಂದ ಕಂಡುಬರುವ ಮಹಾಕಾವ್ಯದ ಬಗೆಗಿನ ಭಾರತೀಯ ಮತ್ತು ಐರೋಪ್ಯ ವಿದ್ವಾಂಸರ ಅಭಿಪ್ರಾಯಗಳನ್ನು ಹೀಗೆ ಹೇಳಬಹುದು.

೧. ಹೆಚ್ಚು ಸಂಖ್ಯೆಯ ಸರ್ಗಗಳಿಂದ ಘಟಿತವಾದದ್ದು.

೨. ಸುಧೀರ್ಘವಾದ ಕಥನ ಕಾವ್ಯವಾಗಿರುತ್ತದೆ.

೩. ಕವಿಕಲ್ಪಿತವಾದ ಅವಕಾಶವಿದ್ದರೂ, ಇತಿಹಾಸದಿಂದ ಕಥೆಗಳಿಂದ ತನ್ನ ವಸ್ತುವನ್ನು ಪಡೆದುಕೊಂಡಿರುತ್ತದೆ.

೪. ಕ್ರಿಯಾಪೂರ್ಣ ಹಾಗೂ ವೈಭವೋಪೇತ ಘಟನೆಗಳಿರುತ್ತವೆ.

೫. ಉತ್ತಮ ಪದವಿನ್ಯಾಸದಿಂದ, ಶ್ರವಣಹಿತವೂ, ಆಹ್ಲಾದಕರ ಅರ್ಥಸ್ಫುರಿತ ಸಂಪನ್ನವಾಗಿರುತ್ತದೆ.

೬. ನಗರ, ಸಮುದ್ರ, ಪರ್ವತ, ಮಂತ್ರ, ದ್ಯೂತ, ಪ್ರಯಾಣ, ಯುದ್ಧ ಮುಂತಾದ ವರ್ಣನೆಗಳಿಂದ ಕೂಡಿರುತ್ತದೆ.

೭. ಒಂದು ನಿರ್ದಿಷ್ಟ ಜನಸಮುದಾಯದ ಸಾಂಸ್ಕೃತಿಕ ಪ್ರಜ್ಞೆಯಾಗಿರುತ್ತದೆ.

೮. ಬಗೆಬಗೆಯ ಛಂದಸ್ಸಿದ್ದು, ಏಕಕವಿ ಕರ್ತೃತ್ವವಿರುತ್ತದೆ.

೯. ಭಾಷೆ, ರೀತಿ-ನೀತಿ, ಕವಿ ಮನದ ಪರಿಪಕ್ವತೆ ಎದ್ದು ಕಂಡುಬರುತ್ತವೆ.

೧೦. ಅತಿಮಾನುಷ ಶಕ್ತಿಗಳ ಪ್ರಸ್ತಾಪ ಸಹಜವಾಗಿರುತ್ತದೆ.

೧೧. ಪಾತ್ರಗಳಲ್ಲಿ ಭವ್ಯತೆ, ನಾಟಕೀಯತೆ ಕಂಡುಬರುತ್ತದೆ.

೧೨. ಸಮಕಾಲೀನ ಪ್ರಜ್ಞೆ ನೀಡುವ ಸರ್ವಕಾಲಿಕ ಗುಣವಿರುತ್ತದೆ.

೧೩. ಅಷ್ಟಾದಶಾ ವರ್ಣನೆ ಸಾಮಾನ್ಯವಾಗಿರುತ್ತದೆ.

ಇಂಥ ‘‘ಮಹಾಕಾವ್ಯವು ಜೀವನ ಸಾರ್ಥಕವಾಗುವ ದಾರಿಯನ್ನು ನಾವಾಗಿ ಹುಡುಕಿ ಕಂಡುಕೊಳ್ಳುವಂತೆ ಪ್ರೇರೇಪಿಸುತ್ತದೆ. ನಮ್ಮ ಮನಸ್ಸಿನೊಳಗಿನ ನಾಳಗಳನ್ನು ಹೊಕ್ಕಿ ಧಾತುರಸವಾಗಿ ಹರಿದು ಒಳಗಿನ ಭಾವಾಣುಗಳನ್ನು ಕೆಣಕಿ ಕೆರಳಿಸುತ್ತದೆ. ಅಂತರಂಗದ ಈ ಸ್ವರೂಪ ವಿರೂಪಗಳನ್ನು ಕಾವ್ಯದಲ್ಲಿ ಕಂಡಾಗ ಅಂತರಂಗದ ಮೈಕೈಗಳನ್ನು ಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತೇವೆ. ನಮಗೂ ಅದರಲ್ಲಿ ಅನೇಕಾಂಶಗಳು ಕಾಡಿಸೀತೇನೋ, ಬಂದೀತೇನೋ

ಎಂದುಕೊಳ್ಳುತ್ತೇವೆ. ಈ ಆತ್ಮ ಪರೀಕ್ಷೆಯೇ ಮಹಾಕಾವ್ಯದ ಪರಮ ಪ್ರಯೋಜನ"[೧] ಎಂದಿದ್ದಾರೆ ಡಿ.ವಿ. ಗುಂಡಪ್ಪ ಅವರು.

ಹೀಗೆ ಮಹಾಕಾವ್ಯವು ಒಂದರ್ಥದಲ್ಲಿ ಒಂದು ಜನಾಂಗದ ಸಾಂಸ್ಕೃತಿಕ ಇತಿಹಾಸದ ದಾಖಲೆಯಾಗಿದ್ದು, ಸರ್ವಕಾಲಿಕವಾಗಿ ರಾಷ್ಟ್ರ ಮತ್ತು ಜನಾಂಗದ ಜೀವನವನ್ನು ಸತತವಾಗಿ ನಿರೂಪಿಸುವ ಮೂಲಮಾತೃಕೆಯಾಗಿದೆ ಎನ್ನಬಹುದು. ಇಂಥ ಮಹಾಕಾವ್ಯ ನಿರ್ದಿಷ್ಟ ಕಾಲದಲ್ಲಿ ರಚಿತವಾಗಬೇಕು; ಪ್ರಾಚೀನವಾಗಿರಬೇಕು ಎಂದೇನೂ ಇಲ್ಲ. ಕಾಲಘಟ್ಟಗಳ ಒತ್ತಡಗಳಿಂದ, ಭಾಷಿಕ ಸಮೃದ್ಧಿಯಿಂದ ಮಹಾಕಾವ್ಯ ರೂಪು ತಳೆಯುತ್ತಲಿರುವುದನ್ನು ಗಮನಿಸಿದರೆ, ಅವುಗಳ ರಚನೆಗೆ ಕಾಲಮಿತಿ ಇಲ್ಲ ಎಂಬುದು ನಮಗೆ ಅರಿವಾಗುತ್ತದೆ. ಇಂಥ ಮಹಾಕಾವ್ಯವು ಶಿಷ್ಟ ಮತ್ತು ಜನಪದದಲ್ಲಿ ಅಷ್ಟೇನೂ ಹೇಳಿಕೊಳ್ಳುವ ವ್ಯತ್ಯಾಸವಿಲ್ಲ ಎಂದು ಮೊದಲಿಗೆ ಹೇಳಿದೆ. ಆದರೂ ಸಹ ಜನಪದ ಮಹಾಕಾವ್ಯದ ಲಕ್ಷಣಗಳನ್ನು ಕುರಿತು ಅಲ್ಲಲ್ಲಿ ನಡೆದಿರುವ ಚರ್ಚೆಯನ್ನು ಕೇಂದ್ರವಾಗಿಟ್ಟು ನೋಡಿದಾಗ ಅದಕ್ಕೂ ತನ್ನದೇ ಆದ ಸ್ವರೂಪ ಚರ್ಯೆಗಳಿರುವುದನ್ನು ಮನಗಾಣಬಹುದು. ಇಲ್ಲಿ ಬಿ.ಎಂ.ಶ್ರೀ.ಯವರು ಹೇಳಿರುವ 'ಜನವಾಣಿ ಬೇರು ಕವಿವಾಣಿ ಹೂ" ಎಂಬ ಅರ್ಥ ಹೇಳಿಕೆಯಿಂದ ಶಿಷ್ಟ ಸಾಹಿತ್ಯದ ಸೃಷ್ಟಿಗೆ ಜಾನಪದ ಪ್ರೇರಕ, ಪ್ರಚೋದಕ, ಪೋಷಕ ಶಕ್ತಿಯಾಗಿ ಇರುವ ಸಂಬಂಧವನ್ನು ತಿಳಿಸುತ್ತದೆ. ಶಿಷ್ಟ ಸಾಹಿತ್ಯದಲ್ಲಿ ಕವಿ ಮತ್ತು ಸಹೃದಯ ಬೇರೆಯಾಗಿ ನಿಂತರೆ, ಇಲ್ಲಿ ಆ ಎರಡೂ ಅವಸ್ಥೆಯಲ್ಲಿ ಒಬ್ಬನೇ ವ್ಯಕ್ತಿ ಇರುತ್ತಾನೆ. ಶಿಷ್ಟ ಮಹಾಕಾವ್ಯಕ್ಕೆ ಕರ್ತೃ ಇರುವಂತೆ, ಜಾನಪದಕ್ಕೆ ಕರ್ತೃ, ರಚಿತವಾದ ಕಾಲ, ಸೃಷ್ಟಿಯಾದ ಪರಿಸರದ ಬಗ್ಗೆ ಖಚಿತವಾದ ನಿಲುವು ತಳೆಯಲು ಸಾಧ್ಯವಿಲ್ಲ. ಏಕೆಂದರೆ ಜಾನಪದವು ವ್ಯಷ್ಟಿಯಿಂದ ಆರಂಭಗೊಂಡು ಸಮಷ್ಟಿಯಲ್ಲಿ ಲೀನವಾಗಿ ಕರ್ತೃ ಅನಾಮಧೇಯನಾಗಿದ್ದಾನೆ. ಇಲ್ಲಿ ಸಮಷ್ಟಿ ಆಶೋತ್ತರವೇ ಮುಖ್ಯವಾಗಿದ್ದು ವ್ಯಷ್ಟಿಗೆ ಅಷ್ಟು ಮಹತ್ವವಿರುವುದಿಲ್ಲ. ಏಕೆಂದರೆ ಇದು ಸಮುದಾಯದ ಕಡೆಗೆ ಹೆಚ್ಚಿನ ಒಲವನ್ನು ಹೊಂದಿರುವುದನ್ನು ಕಾಣಬಹುದು. ಹೀಗೆ ಮೌಖಿಕ ಸಂಪ್ರದಾಯವನ್ನು ಆಶ್ರಯಿಸಿ ತಲೆಮಾರಿನಿಂದ ವಹನಗೊಂಡು ಬಂದಿರುವಂಥದ್ದು ಜನಪದ ಮಹಾಕಾವ್ಯದ ಮುಖ್ಯ ಲಕ್ಷಣ.

ಇದುವರೆವಿಗೂ ಸಂಸ್ಕೃತ ಮೀಮಾಂಸಕರು ಶಾಸ್ತ್ರೀಯವಾಗಿ ಶಿಷ್ಟ ಕಾವ್ಯದ ಸ್ವರೂಪವನ್ನು ನಿರೂಪಿಸಿರುವಂತೆ, ಜನಪದ ಕಾವ್ಯದ ಸ್ವರೂಪವನ್ನು ಯಾವ ಮೀಮಾಂಸಕರೂ ಶಾಸ್ತ್ರೀಯವಾಗಿ ನಿರೂಪಿಸುವಲ್ಲಿ ಪ್ರಯತ್ನಿಸಿದಂತಿಲ್ಲ. ಜನಪದ ಕವಿಗಳು ತಮ್ಮ ಕಾವ್ಯದ

---

[೧] ಡಿ.ವಿ.ಜಿ.-ಕಾವ್ಯ-ಸ್ವಾರಸ್ಯ, ಪುಟ ೨೯.

ಸ್ವರೂಪವನ್ನು ಕುರಿತು ಚರ್ಚಿಸಲು ಹೋಗೇ ಇಲ್ಲ. ಇದನ್ನು ನಿರೀಕ್ಷಿಸುವುದೂ ಕಷ್ಟವಾದದ್ದು. ಏಕೆಂದರೆ ಅವರಿಗೆ ಕಾವ್ಯದ ಅನುಭವದ ಪರಿಚಯವಿದ್ದರೂ ಶಾಸ್ತ್ರೀಯತೆ ಮುಖ್ಯವಾಗಿರಲಿಲ್ಲ.

ಇಲ್ಲಿ ಗಮನಿಸಬೇಕಾದ ಬಹುಮುಖ್ಯ ಸಂಗತಿ ಎಂದರೆ ಸಂಸ್ಕೃತ ಅಲಂಕಾರಿಕರಂತೆ ಜನಪದ ಕವಿಗಳು ಕಾವ್ಯಕ್ಕೆ ಕೇವಲ ಶಬ್ದಾರ್ಥಗಳೇ ಪ್ರಮುಖವೆಂಬ ಮಾತುಗಳನ್ನು ಆಡಿರುವುದು ಗಮನಕ್ಕೆ ಬರುವುದಿಲ್ಲ. ಬದಲಾಗಿ ಕಾವ್ಯದ ಹಿತಕಾರಕ ಗುಣದ ಬಗ್ಗೆ ಮಾತನಾಡುವುದನ್ನು ನೋಡುತ್ತೇವೆ.

ನಿಜವಾದ ಕಾವ್ಯ 'ಉಪಯೋಗಿಯಾದುದಾಗಿರಬೇಕು ಮತ್ತು ಹಿತವಾಗಿರಬೇಕು' ಎಂಬ ಮಾತು ಜನಪದ ಕವಿಗಳ ಕಾವ್ಯ ಕಲ್ಪನೆಯಾಗಿರಬೇಕು. ಏಕೆಂದರೆ ಅವರಿಗೆ ಅನುಭವ ಮುಖ್ಯವಾದದ್ದು. ಹೀಗೆ ಜನಪದ ಕಾವ್ಯವನ್ನು ಸಾದ್ಯಂತವಾಗಿ ಅಭ್ಯಾಸ ಮಾಡಿದಾಗ ನಮಗೆ ಕಂಡುಬರುವ ಗುಣಲಕ್ಷಣಗಳು ಅನೇಕ ಬಗೆಯವು. ಇವುಗಳನ್ನು ಒಟ್ಟಾಗಿ ವೀರಣ್ಣ ದಂಡೆಯವರು ತಮ್ಮ ಕನ್ನಡ ಜನಪದ ಕಾವ್ಯ ಮೀಮಾಂಸೆ[೧]ಯಲ್ಲಿ ಕಟ್ಟಿಕೊಟ್ಟಿದ್ದಾರೆ. ಅವುಗಳೆಂದರೆ;

೧. ಜನಪದ ಕಾವ್ಯ ಸಮೂಹ ಸಂದರ್ಭದ ಕೂಸು.
೨. ಜನಪದ ಕಾವ್ಯದಲ್ಲಿ ಸಾಂಸ್ಕೃತಿಕ ಸಂಗತಿಗಳು ಮುಂದಾಗಿ, ಶಬ್ದಾರ್ಥಗಳು ಹಿಂದಾಗುವುದನ್ನು ಕಾಣಬಹುದು.
೩. ನೈಸರ್ಗಿಕ ಗುಣ ಮತ್ತು ಬದುಕು ಒಂದೇ ಅಂಗವಾಗಿ ಜನಪದ ಕಾವ್ಯ ಸೃಷ್ಟಿಯಾಗುತ್ತದೆ.
೪. ಜನಪದ ಕಾವ್ಯ ಮುಖ್ಯವಾಗಿ ಹಾಡುವ ಕಾವ್ಯ ಮತ್ತು ನುಡಿಯುವ ಕಾವ್ಯವಾಗಿದೆ.
೫. ಜನಪದದಲ್ಲಿನ ಕಾವ್ಯವು ಪ್ರದರ್ಶನಾತ್ಮಕ ಗುಣವನ್ನು ಹೊಂದಿದೆ.
೬. ಇದು ಮೌಖಿಕ ಪರಂಪರೆಯನ್ನು ಅವಲಂಬಿಸಿದ್ದು, ಈ ಗುಣ ಕೇವಲ ಕಾವ್ಯಕ್ಕೆ ಮಾತ್ರ ಸೀಮಿತವಾಗದೆ, ಒಟ್ಟಾರೆ ಜನಪದ ಜೀವನದ ಮುಖ್ಯವಾದ ಗುಣವೇ ಆಗಿದೆ.
೭. ಗ್ರಾಮವಾಸಿ ನಿರಕ್ಷರಿಗಳ ಸೃಷ್ಟಿಯಾಗಿದ್ದು, ಅನಕ್ಷರರಲ್ಲಿಯೇ ಬೆರೆತು ಹೋದುದಾಗಿದೆ.
೮. ಸಮಷ್ಟೀ ಪ್ರಜ್ಞೆಯು ಬಹುಮಹತ್ವದ ಸಂಗತಿ, ವೈಯಕ್ತಿಕ ಅನುಭವವಾಗಿರದೆ, ಸಾರ್ವಜನಿಕ ಅನುಭವವಾಗಿ ಹರಿಯುತ್ತಿರುತ್ತದೆ.

---

[೧] ಡಾ.ವೀರಣ್ಣ ದಂಡೆ– ಕನ್ನಡ ಕಾವ್ಯ ಮೀಮಾಂಸೆ, ಪು. ೧೧೭. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೯. ನಿರಂತರ ಬದಲಾವಣೆ ಇದ್ದು, ತನ್ನದೆಂಬ ಭಾವ ಇರುವುದರಿಂದ ಬದಲಾವಣೆಯನ್ನು ಯಾವುದೇ ಹಿಂಜರಿಕೆ ಇಲ್ಲದೆ ಚಲಾಯಿಸುತ್ತಾರೆ.

೧೦. ಪುನರಾವರ್ತನೆ ಮುಖ್ಯವಾದ ಲಕ್ಷಣವಾಗಿದ್ದು, ಪ್ರತಿಸಲದ ಪುನರಾವರ್ತನೆ ಕಿವಿಗೆ ಕೇಳಲು ಹಿತವೆನಿಸುತ್ತದೆ. ಈ ಪುನರಾವರ್ತನೆ ಹೊಂದುತ್ತಲೇ ಇನ್ನರ್ಥ ಸಾಲನ್ನು ಹೊಸದಾಗಿ ಸೇರಿಸಿಕೊಳ್ಳುತ್ತ ಕಥೆಯನ್ನು ನೇಯುತ್ತ ಸಾಗುವ ತಂತ್ರವನ್ನು ಹೊಂದಿದೆ.

೧೧. ಪುನರ್‌ಸೃಷ್ಟಿ ಇದರ ಮುಖ್ಯ ಗುಣ. ಅದು ಪುನರ್ ಜನ್ಮವಲ್ಲ; ಜೀವಂತಿಕೆಯಲ್ಲಿನ ಬದಲಾವಣೆಯಾಗಿರುತ್ತದೆ.

೧೨. ಮೂರ್ತ ಕಲ್ಪನೆಯು ಮುಖ್ಯ ಅಂಶವಾಗಿದ್ದು, ದೃಶ್ಯಗುಣ ಮುಖ್ಯ ಲಕ್ಷಣವಾಗಿ ಕಂಡುಬರುತ್ತದೆ.

೧೩. ಪ್ರಸರಣದಿಂದ ಬದಲಾವಣೆಗಳೇರ್ಪಟ್ಟು ಭಿನ್ನ ಭಿನ್ನ ಪ್ರಯೋಗ ಪಡೆಯುತ್ತದೆ. ಅಲ್ಲದೆ ಪ್ರಾದೇಶಿಕತೆಯ ಅಂಶಗಳು ಮುಖ್ಯವಾಗಿ ಕಂಡುಬರುತ್ತವೆ.

ಹೀಗೆ ಜನಪದ ಮಹಾಕಾವ್ಯವೂ ತನ್ನದೇ ಗುಣಲಕ್ಷಣಗಳನ್ನು ಒಳಗೊಂಡಿರುವುದನ್ನು ಮನಗಾಣಬಹುದಾಗಿದೆ. ಇಂಥ ಮಹಾಕಾವ್ಯವು ಪುರಾಣ ಪಾತ್ರಗಳಿಗೆ, ಘಟನೆಗಳಿಗೆ, ವರ್ತನೆಗಳಿಗೆ ವರ್ತಮಾನದಲ್ಲಿ ನಿಂತು ವ್ಯಾಖ್ಯಾನಿಸುವ ಅಂಶವನ್ನು ಮುಖ್ಯವಾಹಿನಿಯಾಗಿ ಆವರಿಸಿಕೊಂಡಿದೆ ಎಂದು ಹೇಳಬಹುದಾಗಿದೆ.

ಅಧ್ಯಾಯ ೩

ಕನ್ನಡ ಮಹಾಭಾರತ ಪರಂಪರೆ

"ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ

ದೇವಿಂ ಸರಸ್ವತೀ ಚೈವ ತತೋ ಜಯಮುದೀರಯೇತ್

ರಾಮಾಯಣ, ಮಹಾಭಾರತಗಳು ಭರತಖಂಡದ ರಾಷ್ಟ್ರೀಯ ಮಹಾಕಾವ್ಯಗಳು; ಸಮಷ್ಟಿ ಮನಸ್ಸು ಸಮೆದ ವಿಕಾಸ ಶೀಲ ಮೇರು ಕೃತಿಗಳು. ಮಹಾಭಾರತ ರಾಮಾಯಣಕ್ಕಿಂತ ಭೂಮವಾದ, ಸಂಕೀರ್ಣವಾದ ಮತ್ತು ವೈವಿಧ್ಯಪೂರ್ಣವಾದ ಮಹಾಕಾವ್ಯ. ಇಡೀ ವಿಶ್ವಸಾಹಿತ್ಯದಲ್ಲೆ ಅದು ಅಪ್ರತಿಮವಾದ ಕೃತಿ; ಜೀವನ ಸಮಸ್ತಕ್ಕೊಡ್ಡಿದ ಮಹಾಪ್ರತಿಮೆ. ವ್ಯಾಸ ಎಂಬ ಕರ್ತೃ (ಸಂಪಾದಕ) ನಾಮವೆ ಸೂಚಿಸುವಂತೆ, ಅದರ ಜೀವನದರ್ಶನದ ಹಾಸುಬೀಸುಗಳು ವಿಸ್ತಾರವಾದವು. ಮಹಾಭಾರತ ಒಳಗು ಮಾಡಿಕೊಂಡಿರುವ ಶ್ರೀಮಂತ ಜೀವನಾನುಭವ ಮತ್ತು ಸಂದೇಶಗಳು ಇಂದಿಗೂ ಪ್ರಸ್ತುತ ಮತ್ತು ಎಂದಿಗೂ ಪ್ರಸ್ತುತ್ಯ-"[೧] ಎಂಬ ಸಿ.ಪಿ.ಕೆ.ಯವರ ಮಾತು ಸರ್ವಕಾಲಿಕವಾದುದಾಗಿದೆ.

"ಮಹಾಕಾವ್ಯ ಒಂದರ್ಥದಲ್ಲಿ ಜನಾಂಗದ ಸಾಂಸ್ಕೃತಿಕ ಇತಿಹಾಸವನ್ನು ದಾಖಲೀಕರಣಗೊಳಿಸುತ್ತ, ಅವರ ನಂಬಿಕೆ, ರೀತಿ-ರಿವಾಜುಗಳು, ಆಚಾರ-ವಿಚಾರಗಳು, ಆಸೆ-ಆಕಾಂಕ್ಷೆಗಳು, ಕನಸು-ಕಲ್ಪನೆಗಳು, ನೀತಿ-ಪ್ರೀತಿಗಳು, ಬದುಕಿನ ದಿಕ್ಕು-ದೆಸೆ, ಸ್ಥಿತ್ಯಂತರಗಳು ಅದರಲ್ಲಿ ನಿರೂಪಿತವಾಗಿವೆ"[೨] ಎಂಬ ಎಚ್.ಕೆ.ಲಕ್ಕಪ್ಪಗೌಡರ ಮಾತಿನಂತೆ ಸಾರ್ವಕಾಲಿಕ ಮೌಲ್ಯಯುಳ್ಳ ಮಹಾಕಾವ್ಯಗಳಲ್ಲಿ ಮಹಾಭಾರತವು ಬೃಹದ್ ಗ್ರಂಥ. ಜಗತ್ತಿನಲ್ಲಿ ಇರುವುದೆಲ್ಲವೂ ಇಲ್ಲಿದೆ. ಇಲ್ಲಿ ಇರದಿರುವುದು ಮತ್ತೆಲ್ಲಿಯೂ ಇಲ್ಲ ಎಂಬ ಅಭಿಪ್ರಾಯವೂ ಈ ಕಾವ್ಯದ ಮೇಲಿದೆ. ಏಕೆಂದರೆ ಕುಮಾರವ್ಯಾಸ ಹೇಳುವಂತೆ ಇದು "ಅರಸುಗಳಿಗೆ ವೀರ, ದ್ವಿಜರಿಗೆ ಪರಮವೇದದ ಸಾರ. ಯೋಗೀಶ್ವರರ ತತ್ತ್ವ ವಿಚಾರ, ಮಂತ್ರೀಜನಕೆ ಬುದ್ಧಿ ಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣತರಾಲಂಕಾರ, ಕಾವ್ಯಕ್ಕೆ ಗುರು"[೩]ವಾಗಿದೆ.

[೧] ಸಿ.ಪಿ.ಕೆ. ಕನ್ನಡ ಮಹಾಭಾರತ-ಆದಿಪರ್ವ ೨ (ಅನು-ಎಸ್.ಶೇಷಾಚಲ ಶರ್ಮ) ಮುನ್ನುಡಿಯಿಂದ.

[೨] ಶ್ರೀರಾಮಾಯಣದರ್ಶನಂ-ಒಂದು ವಿಮರ್ಶಾತ್ಮಕ ಅಧ್ಯಯನ-ಪು ೨೬.

[೩] ಕರ್ನಾಟಕ ಭಾರತ ಕಥಾಮಂಜರಿ. ಸಂ. ಕುವೆಂಪು ಮತ್ತು ಮಾಸ್ತಿ.

ಮೊದಲು ಇದಕ್ಕೆ "'ಜಯ' ಎಂಬ ಹೆಸರಿದ್ದು, ಕೇವಲ ೮೮೦೦ ಶ್ಲೋಕಗಳನ್ನು ಒಳಗೊಂಡಿದ್ದಿತಂತೆ. ಅನಂತರ ಅದು ೨೪೦೦೦ ಶ್ಲೋಕಗಳವರೆಗೆ ಬೆಳೆಯಿತು. ಕ್ರಮೇಣ ೧೦೦೦೦೦ ಶ್ಲೋಕಗಳ ಮಹಾವಿಸ್ತಾರವಾದ್ಧ ಗ್ರಂಥವಾಯಿತು. ಸರ್ವ ನೀತಿಧರ್ಮ ತತ್ತ್ವಗಳ ಮಹಾಭಂಡಾರವಾಯಿತು. ಪಂಚಮವೇದಾಯಿತು"[೧] ಎಂದಿದ್ದಾರೆ. ಎ.ಆರ್.ಕೃಷ್ಣಶಾಸ್ತ್ರಿಗಳು.

ಇಂತಹ ಮಹಾಭಾರತ ಕೃತಿಯು ಜಗತ್ತಿನ ಮಹಾಕಾವ್ಯಗಳಲ್ಲೇ ಅಗ್ರಸ್ಥಾನ ಪಡೆದಿದ್ದು, ಅದು ಗ್ರೀಕರ ಮಹಾಕಾವ್ಯಗಳಾದ ಇಲಿಯಡ್ ಮತ್ತು ಒಡೆಸ್ಸಿಗಳ ಮೊತ್ತದ ಎಂಟರಷ್ಟಾಗಿದೆ. ಅದು ಬೃಹತ್ತಿನಲ್ಲಿ ಮಾತ್ರವಲ್ಲ; ಮಹತ್ತಿನಲ್ಲಿ ಚಿರಂತನ ಮೌಲ್ಯಗಳುಳ್ಳ ಶ್ರೇಷ್ಠಕಾವ್ಯವಾಗಿದೆ ಎಂದು ವಿದ್ವಾಂಸರು ಪ್ರಶಂಸೆ ಮಾಡಿರುವುದನ್ನು ಕಾಣಬಹುದು.

ವ್ಯಾಸ ಮಹರ್ಷಿ ಇದರ ಕರ್ತೃವೆಂದು ಹೇಳಲಾಗಿದ್ದರೂ ಸಹ, ಅದು ವ್ಯಕ್ತಿಯ ಹೆಸರಲ್ಲ ಒಂದು ಪರಂಪರೆ ಅಥವಾ ಗುಂಪಿನದು ಎಂಬ ವಾದವೂ ಸಹ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಚರ್ಚೆಗೊಳಗಾಗಿದೆ. -ಈತನ ಅನಂತರ ವೈಶಂಪಾಯನ ಮತ್ತು ಸೂತಪುರಾಣಿಕರು ಅದನ್ನು ಹಿಗ್ಗಲಿಸಿದರೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಹೀಗೆ ಮಹಾಭಾರತವು ಕೌರವ ಪಾಂಡವರ ಕಥೆಯನ್ನು, ಕುರುಕ್ಷೇತ್ರ ಯುದ್ಧವನ್ನು ಶ್ರೀಕೃಷ್ಣ ನೀತಿಯನ್ನು ಒಳಗೊಂಡಂತಹ ಎರಡು ವಂಶಗಳ ಕಥೆಯಾದರೂ, ಭರತಖಂಡದ ಎಲ್ಲಾ ಜನಾಂಗಗಳ ಮಾನಸಿಕ ವಿಕಾಸದ ಹೆಜ್ಜೆಗಳನ್ನೊಳಗೊಂಡ ರಾಷ್ಟ್ರೀಯ ಮಹಾಕಾವ್ಯವಾಗಿ ಪರಿಣಮಿಸಿದೆ ಎನ್ನಬಹುದು.

ಮಹಾಭಾರತದ ಮಹತ್ತು ಸಮಗ್ರ ಭಾರತದ ಜನರ ಹೃದಯ ಪ್ರದೇಶವನ್ನು ವ್ಯಾಪಿಸಿಕೊಂಡು ತಮ್ಮೆಲ್ಲಾ ವ್ಯವಸ್ಥೆಗಳಿಗೆ ಇದರ ನಾಯಕರ ಮತ್ತು ಘಟನೆಗಳ ಹೆಸರನ್ನು ಅಂಟಿಸುತ್ತಿರುವುದೇ ಅದರ ಸರ್ವಪ್ರಿಯತೆಯ ವ್ಯಾಪಕತೆಯನ್ನು ಸಾದರಪಡಿಸುತ್ತದೆ. ಅಂದಿನಿಂದ ಇಂದಿನವರೆವಿಗೂ ಅದು ಸ್ಫೂರ್ತಿ ರೂಪವಾಗಿ ಜನರ ಜೀವನ ಸ್ಫೂರ್ತಿಯ ಮುಂದಿನ ನೆಲೆಯಾಗಿರುವುದು ಅದರ ಮಹತ್ತಿಗೆ ನಿದರ್ಶನದ ನಿಲುವುಗನ್ನಡಿಯಾಗಿದೆ ಎನ್ನಬಹುದು.

ಮಹಾಭಾರತವು ರಾಮಾಯಣದಂತೆ ಹಲವು ಭಾರತೀಯ ಭಾಷೆಗಳ ನಡುವಣ ಸಂಪರ್ಕವನ್ನು ಹೊಂದಿದೆ. ಭಿನ್ನ ಭಿನ್ನ ಪಾಠಾಂತರಗಳೂ, ಹೊಸ ಸೇರ್ಪಡೆಗಳು ಆಗಿರುವುದುಂಟು. ಇಂತಹ ಮಹಾಭಾರತ ಕನ್ನಡ ಸಾಹಿತ್ಯವು ರೂಪುಗೊಳ್ಳುವಂತಹ ಸಮಯದಲ್ಲೇ ಇದರ ಪ್ರಭಾವ ಆಗಿರಬೇಕೆಂಬುದರಲ್ಲಿ ಸಂದೇಹವಿರಲಾರದು. ಈಗ ಉಪಲಬ್ಧ

---

[೧] ಎ.ಆರ್.ಕೃಷ್ಣಶಾಸ್ತ್ರೀ : ವಚನಭಾರತ, ಪೀಠಿಕೆ, ಪು ೨೮.

ಗ್ರಂಥಗಳಲ್ಲಿ ಪಂಪನ ಕಾವ್ಯವಾದ 'ವಿಕ್ರಮಾರ್ಜುನವಿಜಯ'ವೇ ಆದಿಕಾವ್ಯ ಎನ್ನಲಾಗಿದೆ. ಇವನ ಹಿಂದಿನವರು ಭಾರತವನ್ನು ಕುರಿತು ಕಾವ್ಯ ರಚನೆಗೈದಿದ್ದರೂ ಅವು ನಮಗೆ ದೊರೆತಿಲ್ಲವಾದ್ದರಿಂದ ಇದೇ ಮೊದಲನೆಯದೆಂದು ನಾಡು ಸದ್ಯಕ್ಕೆ ಸ್ವೀಕರಿಸಿದೆ. ಏಕೆಂದರೆ ಆತನೆ 'ಮುನ್ನಿನ ಕಬ್ಬಮನೆಲ್ಲಮಿಕ್ಕಿ ಮೆಟ್ಟಿದವು ಸಮಸ್ತ ಭಾರತಮುಮಾದಿ ಪುರಾಣ ಮಹಾಪ್ರಬಂಧಮುಂ' ಎಂದಿರುವುದು ಹಿಂದೆ ಭಾರತ ವಸ್ತುವನ್ನು ಬಳಸಿಕೊಂಡಿದ್ದ ಕಾವ್ಯ ಅಥವಾ ಕಾವ್ಯಭಾಗಗಳು ಹುಟ್ಟಿರಬೇಕೆಂದು ಒಂದು ಬಾರಿ ಅಂದುಕೊಳ್ಳುವಂತೆ ಮಾಡುತ್ತವೆ.

ಮಹಾಭಾರತದ ವಸ್ತುವನ್ನು ಇಟ್ಟುಕೊಂಡು ಕಾವ್ಯವನ್ನು ಕನ್ನಡದಲ್ಲಿ ರಚನೆ ಮಾಡಿದ ಕವಿಗಳನ್ನು ದೇ.ಜ.ಗೌ. ಅವರು 'ಜೈನ ಮತ್ತು ಜೈನೇತರರು'[೧] ಎಂದು ಎರಡು ಗುಂಪಾಗಿ ವಿಂಗಡಿಸುತ್ತಾರೆ. ಅಂತಹ ಜೈನ ಕವಿಗಳಲ್ಲಿ ಪಂಪನೇ ಮೊದಲಿಗನಾಗುತ್ತಾನೆ. ಈತನಿಗಿಂತ ಮೊದಲು "ಸಂಸ್ಕೃತಗಳಲ್ಲಿ ಜೈನ ಪುರಾಣಗಳನ್ನು ಅದರಲ್ಲೂ ಸಂಸ್ಕೃತದಲ್ಲಿ ಮಹಾಪುರಾಣವನ್ನು ರಚಿಸಿದ ಜಿನಸೇನ ಗುಣಭದ್ರಾಚಾರ್ಯರು ನೇಮಿನಾಥ ತೀರ್ಥಂಕರನ ಚರಿತ್ರೆಯ ಭಾಗವಾಗಿ ಪಾಂಡವರ ಕಥೆಯನ್ನು ತಂತಮ್ಮ ದೃಷ್ಟಿ ಧ್ಯೇಯಗಳಿಗನುಗುಣವಾಗಿ ಮಾರ್ಪಾಡು ಮಾಡಿಕೊಂಡು ಬಳಸಿಕೊಂಡಿದ್ದುಂಟು."[೨] ಆದರೆ ಪಂಪನು 'ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ ವ್ಯಾಸನೆನೆಂಬ ಗರ್ವಮೆನಗಿಲ್ಲ'ವೆಂಬ ಹೇಳಿಕೆಯ ವಿನಮ್ರತೆಯಿಂದ ಮೂಲಕ್ಕೆ ಧಕ್ಕೆ ಬಾರದಂತೆ ಕೃತಿ ರಚಿಸುತ್ತಾನೆ. ಇಲ್ಲಿ ಕವಿ ತನ್ನ ಉದ್ದೇಶ ಸಫಲತೆಗಾಗಿ ಸನ್ನಿವೇಶ, ಕಥಾ ನಿರೂಪಣೆ, ಪಾತ್ರ ಪರಿಪೋಷಣೆಗಳಲ್ಲಿ ಹಲ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾನೆ. ಕೆಲವೆಡೆ ಅನವಶ್ಯವೆಂದು ತೋರುವ ಘಟನೆ, ವರ್ಣನೆಗಳನ್ನು ಬಿಟ್ಟು ಸಾಗುವುದನ್ನು ಕಾಣಬಹುದು. ಅರ್ಜುನ ಅರಿಕೇಸರಿ ಅಭೇದದ ದೃಷ್ಟಿಯಷ್ಟೇ ಆತನ ಮುಖ್ಯ ಉದ್ದೇಶವಾಗಿದ್ದು, ಅದನ್ನು ಈಡೇರಿಸುವಲ್ಲಿ ಯಶಸ್ವಿಯಾಗಿದ್ದಾನೆ. ಈ ಕಾರಣದಿಂದ ಇದೊಂದು ವಿನೂತನವೂ, ಸಾಹಿತ್ಯ ಲೋಕದ ಆಶಾಕಿರಣಮಣಿಯಾಗಿದೆ ಎನ್ನಬಹುದು.

ರನ್ನನ 'ಗದಾಯುದ್ಧ'ವೂ ಮಹಾಭಾರತ ಪರಂಪರೆಯಲ್ಲಿ ಬಂದ ಮತ್ತೊಂದು ಕಾವ್ಯ. ವ್ಯಾಸಭಾರತದ ಗದಾ ಸೌಪ್ತಿಕ ಪರ್ವಗಳ ಕಥೆ ಇದಾದರೂ ಪಂಪನ 'ವಿಕ್ರಮಾರ್ಜುನ ವಿಜಯ'ದ ಹದಿಮೂರನೇ ಅಶ್ವಾಸದಲ್ಲಿ ಬರುವ ಗದಾಯುದ್ಧವೇ ಇದರ ಕಥಾವಸ್ತು ಎನ್ನಲಾಗಿದೆ. ಈತ ಭಾರತದ ಕಥೆಯನ್ನು ಸಿಂಹಾವಲೊಕನ ಕ್ರಮದಿಂದ ಮೂಡಿಸುವುದಾಗಿ ತನ್ನ

---

೧ ದೇ.ಜ.ಗೌ.–ಪೂರ್ವ ಕವಿಗಳಿಗೆ ನಮನ, ಪ್ರಸಾರಾಂಗ, ಮೈ.ವಿ.ವಿ. ಪು ೨೮೦.

೨ ಅದೇ, ಪುಟ ೯೮೧.

ಕಾವ್ಯದಲ್ಲಿ ಹೇಳಿಕೊಳ್ಳುತ್ತಾನೆ. ತನ್ನ ಆಶ್ರಯದಾತ ಇರಿವಬೆಡಂಗ ಸತ್ಯಾಶ್ರಯವನ್ನು ಭೀಮನೊಡನೆ ಹೋಲಿಸಿ ಕಾವ್ಯ ರಚಿಸಿದ್ದಾನೆ. ಅಲ್ಲಲ್ಲಿ ತಕ್ಕ ಮಾರ್ಪಾಟುಗಳೊಂದಿಗೆ ಕಾವ್ಯದ ಮಹತ್ತನ್ನು ಸಾರುತ್ತಾನೆ. 'ವ್ಯಾಸಭಾರತ', 'ಪಂಪಭಾರತ'ಗಳನ್ನು ರನ್ನ ಅನುಸರಿಸಿದ್ದರೂ ತನ್ನ ಸ್ವಂತಿಕೆಯನ್ನು ಮೆರೆದಿರುವುದು ಕಾವ್ಯದಲ್ಲಿ ಕಂಡುಬರುತ್ತದೆ.

ವ್ಯಾಸಭಾರತವನ್ನು ಅನುಸರಿಸಿರುವ ಪಂಪರನ್ನರದು ಒಂದು ಸಂಪ್ರದಾಯವಾದರೆ, ಮತ್ತೊಂದು "ಸಂಪ್ರದಾಯದ ಪ್ರಕಾರ ಭಾರತದ ಕಥೆ 'ನೇಮಿನಾಥನ ತೀರ್ಥಂಕರ ಪುರಾಣದಲ್ಲಿ ಬರುತ್ತದೆ. ಇವನಲ್ಲದೆ, ಮೊದಲನೆಯ ಗುಣವರ್ಮ (೯೦೦)ನ 'ಹರಿವಂಶ' (ಸಿಕ್ಕಿಲ್ಲ), ಚಾಮುಂಡರಾಯನ 'ಚಾವುಂಡರಾಯ ಪುರಾಣ' (೯೭೮), ಕರ್ಣಾಪಾರ್ಯನ 'ನೇಮಿನಾಥ ಪುರಾಣ (೧೧೫೦), ನೇಮಿಚಂದ್ರನ 'ಅರ್ಧನೇಮಿ ಪುರಾಣ' (೧೨೦೦), ಬಂಧುವರ್ಮನ 'ಹರಿವಂಶಾಭ್ಯುದಯ' (೧೨೦೦), ಮಹಾಬಲಕವಿಯ 'ನೇಮಿನಾಥ ಪುರಾಣ' (೧೨೫೦) ಮೂರನೇ ಮಂಗರಸನ 'ನೇಮಿಜಿನೇಶ ಸಂಗತಿ', (೧೫೦೦), ಸಾಳ್ವನ 'ಭಾರತ' (೧೫೫೦)"[೧] ಹೀಗೆ ಹಲವು ಕವಿಗಳಲ್ಲದೆ ಮಹಾಭಾರತವನ್ನು ಕೃತಿವಸ್ತುವಾಗಿ ತೆಗೆದುಕೊಂಡು ಕೃತಿ ರಚಿಸಿದ ಇತರ ಕವಿಗಳೂ ಇದ್ದಾರೆ. ಬ್ರಹ್ಮಣಾಂಕನೂ ಸಹ 'ಜಿನಭಾರತ' (೧೮೦೦)ವನ್ನು ಜೈನದೃಷ್ಟಿಯಿಂದ ನಿರೂಪಿಸಿರುವುದನ್ನು ಕ್ಕಾಣಬಹುದು.

ಮೇಲಿನ ಅಂಶಗಳಿಂದ 'ಮಹಾಭಾರತ'ದ ಬಗ್ಗೆ ಜೈನಕವಿಗಳಿಗಿದ್ದ ಗೌರವವು ವ್ಯಕ್ತವಾಗುತ್ತದೆ. ಇಂಥ ಜೈನರನ್ನು ಬಿಟ್ಟು ಕಾವ್ಯ ರಚನೆಗೈದ ವೈದಿಕ ಕವಿಗಳಲ್ಲಿ ವ್ಯಾಸನನ್ನು ಪರಮಗುರುವಾಗಿ, ಶ್ರೀ ಕೃಷ್ಣನನ್ನು ಪರದೈವವೆಂದೇ ಭಕ್ತಿಯಿಂದ ಪೂಜಿಸಿದವನೆಂದರೆ ಕುಮಾರವ್ಯಾಸ. ಈತನಿಗೇ ವೈದಿಕ ಕವಿಗಳಲ್ಲಿ ಅಗ್ರಸ್ಥಾನ. ಈತನ ಭಾರತವು 'ಶ್ರೀ ಕೃಷ್ಣ ಚರಿತಾಮೃತ'. ಅದಕ್ಕೆ ಆತ 'ತಿಳಿಯ ಹೇಳುವೆ ಕೃಷ್ಣ ಕಥೆಯನ್ನು' ಎಂದಿದ್ದಾನೆ. ಈತನು ತನ್ನ ಭಾರತದಲ್ಲಿ ಕೆಲವು ವ್ಯತ್ಯಾಸಗಳನ್ನು ಅನಿವಾರ್ಯವಾಗಿ ತಂದರೂ, ಮೂಲದ ಸಾರವನ್ನು ಸಂಗ್ರಹಿಸುತ್ತಾನೆ. ಇಲ್ಲವೇ ಹೊಸ ಸಂಗತಿಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಪರ್ವಾನು ಕ್ರಮದಲ್ಲಿ ಮೂಲದ ಕಥೆಯನ್ನು ಅನುಸರಿಸಿದರೂ ಓಡಿಸಿಕೊಂಡು ಹೋಗುತ್ತಾನೆ.

ಕುಮಾರವ್ಯಾಸ ಬರೆಯದೆ ಬಿಟ್ಟ ಮಹಾಭಾರತದ ಎಂಟು ಪರ್ವಗಳನ್ನು "ತಿಮ್ಮಣ್ಣ ಕವಿಯು (೧೫೧೦) ಕೃಷ್ಣದೇವರಾಯನ ಆಜ್ಞೆಯ ಮೇರೆಗೆ ರಚಿಸಿದ್ದರಿಂದ ಕವಿ 'ಕೃಷ್ಣರಾಯಭಾರತ'ವೆಂದು ನಾಮಕರಣ ಮಾಡಿದ್ದಾನೆ. ವ್ಯಾಸಭಾರತದ ಜೊತೆಗೆ ತೆಲುಗು

---

[೧] ಗ್ರಂಥಋಣ – ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ ಸಂಪುಟಗಳು.

ಭಾರತಗಳನ್ನು ತನ್ನ ಅನುವಾದ ಕಾರ್ಯದಲ್ಲಿ ಬಳಸಿಕೊಂಡಂತೆ ತೋರುತ್ತದೆ. ಆದರೂ ಈತನ ಕಾವ್ಯ ಅಷ್ಟು ಪ್ರಸಿದ್ಧಿ ಪಡೆಯಲಿಲ್ಲ. ಭಾಗವತದ ಕರ್ತೃ ಚಾಟುವಿಠಲನಾಥ (೧೫೩೦)ನು ಕುಮಾರವ್ಯಾಸ ಭಾರತದಲ್ಲಿಲ್ಲದ ಪೌಲೋಮ ಮತ್ತು ಆಸ್ತಿಕ ಪರ್ವಗಳ ಕಥೆಯನ್ನು ಕನ್ನಡಿಸಿದ್ದಾನೆ"[೧] ಎನ್ನುವುದು ಸಹ ಭಾರತ ಕಥೆಯನ್ನೇ ಆಧರಿಸಿದ್ದಾಗಿದೆ.

ಇವರುಗಳ ಅನಂತರ ಲಕ್ಷ್ಮೀಶ (೧೫೫೦)ನ 'ಜೈಮಿನಿ ಭಾರತ' ಮುಖ್ಯವಾದುದಾಗಿದೆ. ಸಂಸ್ಕೃತದ 'ಜೈಮಿನಿ ಭಾರತ'ದ ೬೮ ಅಧ್ಯಾಯಗಳ ಕಥೆ ೩೪ ಅಧ್ಯಾಯಗಳಲ್ಲಿ ಸಂಗ್ರಹಿತವಾಗಿದೆ. ಮರುತ್ತನ ಯಾಗದಲ್ಲಿ ಬ್ರಾಹ್ಮಣರು ಬಿಸಾಡಿದ ದ್ರವ್ಯವನ್ನು ಧರ್ಮರಾಯ ತನ್ನ ಅಶ್ವಮೇಧಕ್ಕಾಗಿ ಬಳಸಿದನೆಂಬ ಸಂಗತಿಯನ್ನು ಈತ 'ವ್ಯಾಸಭಾರತ'ದಿಂದ ತೆಗೆದುಕೊಂಡಿದ್ದಾನೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

"ಸುಕುಮಾರ ಭಾರತಿ (೧೫೮೦) ಎಂಬ ಬಿರುದುಳ್ಳ ಚಾಯಣ ವಾರ್ಧಕ ಷಟ್ಪದಿಯಲ್ಲಿ 'ಭಾರತ'ವನ್ನು ರಚಿಸಿದ್ದಾನೆ. ಗೋಪ ಅಥವಾ ಗೋವಿಂದ (೧೫೮೧) ವಾರ್ಧಕ ಷಟ್ಪದಿಯಲಿ 'ಚಿತ್ರಭಾರತ' ಬರೆದಿದ್ದಾನೆ. ಲಕ್ಷ್ಮ (೧೭೨೩) ಕವಿಯ ಭಾರತವೂ ವಾರ್ಧಕ ಷಟ್ಪದಿಯಲ್ಲಿದೆ. ಕಳಲೆ ನಂಜರಾಜ (೧೭೪೦)ನ ಹೆಸರಲ್ಲಿಯೂ ಒಂದು ಭಾರತ ಕೃತಿ ಇದೆ ಎನ್ನಲಾಗಿದೆ. ಪರಮದೇವ (೧೭೮೦) ವಾರ್ಧಕ ಷಟ್ಪದಿಯಲ್ಲಿ 'ತುರಂಗಭಾರತ'ವನ್ನು ರಚಿಸಿದ್ದಾನೆ. 'ವ್ಯಾಸಭಾರತ'ವನ್ನು ಸಂಕ್ಷೇಪವಾಗಿ ಹೇಳುವುದೇ ಇವರ ಮುಖ್ಯೋದ್ದೇಶ. ೧೭ನೇ ಶತಮಾನದ ಚನ್ನಬಸವೇಶ್ವರ 'ರುದ್ರಭಾರತ'ವನ್ನೂ ೧೮ನೇ ಶತಮಾನದ ಚಂದ್ರಸಾಗರ ವರ್ಣಿ' 'ಪರಶುರಾಮಭಾರತ'"[೨]ವನ್ನು ಬರೆದಿರುವುದನ್ನು ಕಾಣಬಹುದು.

ಮಹಾಭಾರತದ ಕಥೆಯನ್ನು ಹಲವಾರು ಕವಿಗಳು ಸಂಗ್ರಹ ರೂಪದಲ್ಲೂ ರಚಿಸಿರುವುದನ್ನು ಕಾಣಬಹುದು. ಗದ್ಯದಲ್ಲಿ "ಜಕ್ಕಭೂಪಾಲ (೧೬೨೦) 'ಭಾರತ ಕಥಾ ಸಂಗ್ರಹ'ವೆಂದು ಸಂಗ್ರಹಿಸಿ, ಅದಲ್ಲದೆ ಚಿಕ್ಕದೇವರಾಜ ಒಡೆಯರ (೧೬೭೩-೧೭೦೪) ಕಾಲದಿಂದೀಚೆಗೆ ಇದು ಹೆಚ್ಚಾಯಿತು. ಈತ ಮಹಾಭಾರತದ ಶಾಂತಿಪರ್ವದಿಂದ ಮುಂದಿನ ಕಥೆಯನ್ನು ಗದ್ಯದಲ್ಲಿ ಸಂಗ್ರಹಿಸುತ್ತಾನೆ. ಮುಮ್ಮಡಿ ಕೃಷ್ಣರಾಜ (೧೭೯೪-೧೮೬೮) ಕೃಷ್ಣವೇಣಿವಿಲಾಸವೆಂಬ ಅಂಕಿತದಿಂದ ಮಹಾಭಾರತಕ್ಕೆ ಟೀಕೆ ಬರೆಯುತ್ತಾನೆ. ಇದು ಸಂಸ್ಕೃತ ಭಾರತದ ಪದಶಃ ಭಾಷಾಂತರ"[೩]ವಾಗಿದೆ ಎನ್ನಲಾಗಿದೆ.

---

೧ ರಂ.ಶ್ರೀ. ಮುಗಳಿ ಕನ್ನಡ ಸಾಹಿತ್ಯ ಚರಿತ್ರೆ (೬ನೇ ಆವೃತ್ತಿ) ಪು ೨೩೩.

೨ ಕರ್ಣಾಟಕ ಕವಿಚರಿತೆ, ಭಾಗ-೩, ಪು ೧೯, ಆರ್. ನರಸಿಂಹಾಚಾರ್ಯ.

೩ ದೇ.ಜ.ಗೌ. ಪೂರ್ವಕವಿಗಳಿಗೆ ನಮನ, ಪು ೯೯೦.

ಮಹಾಭಾರತವನ್ನು ಆಧರಿಸಿದ ಅನೇಕ ಕಂಡಿಕೆಯ ರೂಪದ ಕಥೆಗಳು ಕನ್ನಡಕ್ಕೆ ಬಂದಿವೆ. "೧೩ನೇ ಶತಮಾನದ ಚೌಂಡರಸನು 'ನಳನ ಕಥೆ'ಯನ್ನು ಕನ್ನಡಕ್ಕಿಳಿಸಿದ್ದಾನೆ. ಕನಕದಾಸರು 'ನಳೋಚರಿತ್ರೆ'ಯನ್ನು, ಬಸವಪ್ಪ ಶಾಸ್ತ್ರಿಗಳು 'ದಮಯಂತಿ ಸ್ವಯಂವರ'ವನ್ನು, ಶಿವಶಂಕರಶಾಸ್ತ್ರಿಗಳ 'ನಳೋಪಾಖ್ಯಾನ'ವು, ಮುಮ್ಮಡಿ ಕೃಷ್ಣರಾಜರ 'ನಳೋಪಾಖ್ಯಾನ', ಅಳಿಯ ಲಿಂಗರಾಜನ 'ನಳಚರಿತ್ರೆ'"[1]ಗಳು ಮುಖ್ಯವಾದವು. ಸಾಂಗತ್ಯದಲ್ಲಿ ಹೆಳವನ ಕಟ್ಟೆಗಿರಿಯಮ್ಮ', 'ಚಂದ್ರಹಾಸನ ಕಥೆ'ಯನ್ನೂ, ಚೆನ್ನಬಸವ 'ಶಿಬಿಚಕ್ರವರ್ತಿ' ಕಥೆಯನ್ನು ರಚಿಸಿದ್ದಾರೆ. ಬಸವಪ್ಪ ಶಾಸ್ತ್ರಿಗಳು 'ಸಾವಿತ್ರೀ ಚರಿತ್ರೆ'ಯನ್ನು ಷಟ್ಪದೀಕರಿಸಿದ್ದಾರೆ. ಷಡಕ್ಷರದೇವನ 'ಶಬರಶಂಕರ ವಿಲಾಸ' ಪಾಶುಪತಾಸ್ತ್ರ ಸಂಪಾದನೆಗಾಗಿ ಅರ್ಜುನ ಶಿವನನ್ನು ಕುರಿತು ಮಾಡಿದ ತಪದ ಕಥೆಯಾಗಿದೆ. ಇದೇ ಪ್ರಸಂಗದ ಭಾರವಿಯ' ಕಿರಾತಾರ್ಜುನೀಯ'ವಿದೆ. ವಿರೂಪಾಕ್ಷ ಪಂಡಿತನ 'ಚೆನ್ನಬಸವಪುರಾಣ'ದಲ್ಲಿಯೂ ಈ ಕಥೆ ಬರುತ್ತದೆ. ಅಲ್ಲದೆ ಭಾಗವತ ಸಂಪ್ರದಾಯದ ನಾಗರಸ (೧೬೫೦) 'ಭಗವದ್ಗೀತೆ'ಯನ್ನು 'ಕನ್ನಡ ಭಗವದ್ಗೀತೆ' ಎಂದು ಅನುವಾದಿಸಿದ್ದಾನೆ. ಅಲ್ಲದೆ ಮುಮ್ಮಡಿ ಕೃಷ್ಣರಾಜ ಮತ್ತು ನಂದಳಿಕೆ ಲಕ್ಷ್ಮೀನಾರಣಪ್ಪ ಒಂದೊಂದು 'ಭಗವದ್ಗೀತೆ'ಯನ್ನು ರಚಿಸಿರುವುದಾಗಿ ಕವಿಚರಿತೆಕಾರರು ತಿಳಿಸುತ್ತಾರೆ.

ಆಧುನಿಕ ಕಾಲದಲ್ಲಿಯೂ ಭಗವದ್ಗೀತೆಯನ್ನು ಕುರಿತು ಪು.ತಿ.ನ., ಡಿ.ವಿ.ಜಿ. ಮತ್ತೂರು ಕೃಷ್ಣಮೂರ್ತಿ ಅವರುಗಳ ಅನುವಾದಗಳಲ್ಲದೆ ೭೫೦ ಟೀಕು ಮತ್ತು ವಿಮರ್ಶೆಗಳು ಬಂದಿರುವುದನ್ನು ನೋಡಬಹುದು. ಹರಿದಾಸರ ಕೀರ್ತನೆಗಳಲ್ಲಿ ಮಹಾಭಾರತದ ಪ್ರಸಂಗದ ಎಳೆಗಳು ಬಂದಿರುವುದುಂಟು. ಅಲ್ಲದೆ ಪ್ರಧಾನ ಗುರುದತ್ತರ 'ಶ್ರೀಕೃಷ್ಣಕಥೆ ಉಗಮ' ಮತ್ತು ವಿಕಾಸ ಇವೆಲ್ಲಾ ಕೃಷ್ಣನ ಮಹಿಮೆಯನ್ನು ತಿಳಿಸುವಂತಹ ಸಂಗತಿಗಳಾಗಿ ಕಾಣಿಸಿಕೊಳ್ಳುತ್ತವೆ.

ಅಲ್ಲದೆ ೧೫ನೇ ಶತಮಾನದಿಂದೀಚೆಗೆ ಹಲವು ಯಕ್ಷಗಾನ ಬಯಲಾಟಗಳೂ ಮಹಾಭಾರತವನ್ನು ಕುರಿತು ಬಂದಿರುವುದನ್ನು ಕಾಣಬಹುದು. ಅವುಗಳನ್ನು ದೇ.ಜ.ಗೌ. ಗುರುತಿಸುತ್ತಾರೆ. "ವಿಷ್ಣು, ಅಳಿಯ ಲಿಂಗರಾಜ, ಅಜಪುರದ ಕೃಷ್ಣರ ಹೆಸರಿನಲ್ಲಿ ಮೂರು 'ಇಂದ್ರಕೀಲ' ಯಕ್ಷಗಾನಗಳಿವೆ. ಗೇರು ಸೊಪ್ಪೆಯ ಶಾಂತಯ್ಯ (೧೮೩೦) ಕರ್ಣಪರ್ವ, ಜರಾಸಂಧನ ಕಾಳಗ, ದ್ರೋಣಪರ್ವ, ಭೀಷ್ಮಪರ್ವ, ಸುಭದ್ರಾ ಕಲ್ಯಾಣ ಪ್ರಸಂಗಗಳನ್ನು ರಚಿಸಿದ್ದಾನೆ. ಬಬ್ರುವಾಹನ ಕಾಳಗ, ದ್ರೋಣಪರ್ವ, ಭೀಷ್ಮ ಪರ್ವ, ಸುಭದ್ರಾ ಕಲ್ಯಾಣ ಪ್ರಸಂಗಗಳನ್ನು ರಚಿಸಿದ್ದಾರೆ. ಬಭ್ರುವಾಹನ ಕಾಳಗ, ದ್ರೌಪದೀ ಸ್ವಯಂವರ, ವಿರಾಟಪರ್ವ ಅಳಿಯ ಲಿಂಗರಾಜನ ಹೆಸರಿನಲ್ಲಿಯೂ, ನಳಚರಿತ್ರೆ ಕೆಂಪಯ್ಯ (೧೮೪೦)ನ ಹೆಸರಿನಲ್ಲಿಯೂ

[1] ಅದೇ ಪು ೯೯೦

ಇವೆ. ವೀರನಗರೆ ಪುಟ್ಟಣ್ಣ ದುಶ್ಯಾಸನ ನಾಟಕ, ದ್ರೌಪದಿ ಸ್ವಯಂವರ ನಳಚರಿತ್ರೆಗಳ ಜೊತೆಗೆ ಅರ್ಜುನ ಜೋಗಿ ಹಾಡುಗಳನ್ನು ರಚಿಸಿದ್ದಾನೆ''[೧] ಎನ್ನಲಾಗಿದ್ದು. ಅವುಗಳ ಮಹತ್ತನ್ನು ಕೃತಿ ಅಭ್ಯಾಸದಿಂದ ಮನಗಾಣಬಹುದಾಗಿದೆ.

ವ್ಯಾಸಭಾರತದ ಭಾಗಗಳನ್ನು ನಾಟಕ ರೂಪಕ್ಕೆ ತಿರುಗಿಸಿದಾಗ ಭಾಸ, ಕಾಳಿದಾಸಾದಿ ನಾಟಕಕಾರರು ಕಥಾ ನಿರೂಪಣೆ ಮತ್ತು ಪಾತ್ರ ರಚನೆಯಲ್ಲಿ ಮಾರ್ಪಾಡುಗಳನ್ನು ಮಾಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಅವುಗಳಲ್ಲಿ ಕೆಲವು ಕನ್ನಡಕ್ಕೆ ಭಾಷಾಂತರಗೊಂಡಿವೆ. ಬಸವಪ್ಪಶಾಸ್ತ್ರಿ, ಬಿ.ಕೃಷ್ಣಪ್ಪ, ಚುರುಮುರಿ ಶೇಷಗಿರಿರಾವ್, ಬೆಳ್ಳಾವೆ ನರಹರಿಶಾಸ್ತ್ರಿಗಳು, ಪರಮೇಶ್ವರ ಭಟ್ಟರು ಕಾಳಿದಾಸನ 'ಶಾಕುಂತಲ ನಾಟಕ'ವನ್ನು ಕನ್ನಡಕ್ಕೆ ತಂದಿದ್ದಾರೆ. ಅಳಸಿಂಗರಾಚಾರ್ಯರು ಭಾಸನ 'ಪಂಚರಾತ್ರ ರೂಪಕ'ವನ್ನು ಬಿ. ರಾಮರಾವ್ ಅವರು 'ಕರ್ನಾಟಕ ಸುಭದ್ರಾಹರಣಂ' ನಾಟಕವನ್ನು ಭಾಷಾಂತರಿಸಿದ್ದಾರೆ. ಜಯರಾಯಾಚಾರ್ಯ ಮತ್ತು ಮೈಸೂರು ಸೀತಾರಾಮಶಾಸ್ತ್ರಿಗಳು ಭಟ್ಟ ನಾರಾಯಣನ 'ವೇಣೀಸಂಹಾರ' ನಾಟಕವನ್ನು ಕನ್ನಡಿಸಿದ್ದಾರೆ. ಎಲ್.ಗುಂಡಪ್ಪನವರು ಭಾಸನ 'ಮಧ್ಯಮವ್ಯಾಯೋಗ', 'ದೂತವಾಕ್ಯ', 'ದೂತಘಟೋತ್ಕಚ', 'ಕರ್ಣಭಾರ' ಮತ್ತು 'ಊರುಭಂಗ'ಗಳನ್ನು ಸರಳ ಕನ್ನಡದಲ್ಲಿ ರೂಪಾಂತರಿಸಿದ್ದಾರೆ. ಅಲ್ಲದೆ ಇಂಥ ಕೆಲವು ನಾಟಕಗಳ ಗದ್ಯಾನುವಾದಗಳು ಇವೆಯೆಂಬುದು ಮುಖ್ಯವಾದ ಅಂಶವಾಗಿದೆ.

ಈ ಭಾಷಾಂತರ ಕಾರ್ಯವು ೧೯ನೇ ಶತಮಾನದ ಈಚೆಗೆ ಹೆಚ್ಚು ಮಹತ್ವವನ್ನು ಪಡೆದುಕೊಂಡಿತೆನ್ನಬಹುದು. ಅವುಗಳಲ್ಲಿ ''ಸಮೇತನಹಳ್ಳಿ ರಾಮರಾಯರು, 'ಶಾಕುಂತಲಾ' ಎಂಬ ಬೃಹತ್ಕಾವ್ಯವನ್ನು ರಚಿಸಿದ್ದಾರೆ. ಆಳಸಿಂಗರಾಚಾರ್ಯರು ಅಮೂಲಾಗ್ರವಾಗಿ ಭಾರತವನ್ನು ಭಾಷಾಂತರಿಸಿದ್ದಾರೆ. ಅಲ್ಲದೆ ಎ.ಆರ್.ಕೃಷ್ಣಶಾಸ್ತ್ರಿಗಳ 'ವಚನಭಾರತ' ಸಪ್ರಮಾಣವೂ ಸಂಕ್ಷಿಪ್ತವೂ, ಸುರಮ್ಯವೂ ಆದ ಜನಪ್ರಿಯ ಕೃತಿ. ''ಇದು ಪದಶಃ ಭಾಷಾಂತರವಲ್ಲ. ಆದರೂ ಮೂಲದಲ್ಲಿನ ಸ್ವಾರಸ್ಯದ ವಾಕ್ಯವೊಂದನ್ನು ಬಿಟ್ಟಿಲ್ಲ. ಉಪಮಾನ ಬಿಟ್ಟಿಲ್ಲ; ಪ್ರಕ್ಷೇಪ ಸೇರಿಸಿಲ್ಲ. ಪುನರುಕ್ತಿಗಳನ್ನು ಪೇರಿಸಿಲ್ಲ. ಕನ್ನಡದ ಕನ್ನಡಿಯಲ್ಲಿ ದಿಗ್ಗಜವನ್ನು ತೋರಿಸುವಂತೆ ಸಾರವತ್ತಾಗಿ ಸಂಗ್ರಹಿಸಿದ್ದಾರೆ''[೨] ಎನ್ನಲಾಗಿದೆ. ಇವುಗಳಲ್ಲದೆ ಮಾಸ್ತಿಯವರ 'ಭಾರತ ತೀರ್ಥ'ವೂ ಮುಖ್ಯವಾದದ್ದು, ಸಿ.ಪಿ.ವೆಂಕಟರಾಮಯ್ಯನವರ 'ಸರಳಭಾರತ', ವಿಶ್ವಾಮಿತ್ರರವರ 'ಜನಪ್ರಿಯ ಭಾರತ', ಎಲ್.ಆರ್.ಹೆಗ್ಡೆಯವರ ಜೈನ ಮಹಾಭಾರತ ಮೊದಲಾದ ಸಂಕ್ಷಿಪ್ತ

---

[೧] ಅದೇ, ಪು ೯೯೪.

[೨] ದೇ.ಜ.ಗೌ. – ಪೂರ್ವಕವಿಗಳಿಗೆ ನಮನ, ಪು. ೯೯೫.

ಗದ್ಯಾನುವಾದಗಳು ಬಂದಿವೆ. ಪುಣೆಯ ಭಂಡಾರ್ಕರ್ ಪ್ರಾಚ್ಯ ಸಂಶೋಧನೆ ಸಂಸ್ಥೆ ಪ್ರಕಟಿಸಿದ 'ಮಹಾಭಾರತ'ದ ವಿಮರ್ಶಾತ್ಮಕ ಆವೃತ್ತಿಯನ್ನು ಮೊದಲ ಬಾರಿಗೆ ಕನ್ನಡಿಸುವ ಯೋಜನೆಯಡಿ ಕನ್ನಡ ಅಧ್ಯಯನ ಸಂಸ್ಥೆ ಪ್ರೊ.ಎಚ್.ಎಂ. ಶಂಕರನಾರಾಯಣರಾವ್, ಡಾ.ಸಿ.ಪಿ.ಕೆ. ಮತ್ತು ಡಾ.ಪ್ರಧಾನ ಗುರುದತ್ತ ಅವರ ಸಂಪಾದಕ ಸಮಿತಿಯ ಮೂಲಕ 'ಆದಿಪರ್ವ' (ಎರಡು ಸಂಪುಟದಲ್ಲಿ) ಮತ್ತು 'ವಿರಾಟಪರ್ವ'ದ ಸಂಪುಟಗಳನ್ನು ಹೊರ ತಂದಿರುವುದನ್ನು ಕಾಣಬಹುದು. (ಸಂಪುಟಗಳ ಮುನ್ನುಡಿ ಆಧರಿಸಿ). ಇತ್ತೀಚೆಗೆ ಡಾ.ಎಸ್.ಎಲ್.ಭೈರಪ್ಪನವರು ಕಾದಂಬರಿ ರೂಪದಲ್ಲಿ 'ಪರ್ವ' ಎಂಬ ಹೆಸರಿನಿಂದ ಮಹಾಭಾರತ ಕಥೆಯನ್ನು ನಿರೂಪಿಸಿದ್ದಾರೆ. ಇದು ಆಧುನಿಕ ದೃಷ್ಟಿಯ ವಿನೂತನತೆಯನ್ನು ಹೊಸ ಪರಂಪರೆಗೆ ತೋರಿಸುವಲ್ಲಿ ಮುಖ್ಯವಾದದ್ದು. ಇದಲ್ಲದೆ ಮುಖ್ಯವಾಗಿ ಶ್ರೀಯವರ 'ಅಶ್ವತ್ಥಾಮನ್', ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರ', 'ಬೆರಳ್‌ಗೆ ಕೊರಳ್', 'ಯಮನ ಸೋಲು', 'ಕಾನೀನ' ಮತ್ತು 'ಚಂದ್ರಹಾಸ', 'ಗೋವಿಂದ ಪೈಗಳ 'ಹೆಬ್ಬೆರಳು', ಕೈಲಾಸಂರ 'ಕೀಚಕ', ಕಾರ್ನಾಡರ 'ಯಯಾತಿ', ಸಿದ್ಧಲಿಂಗಯ್ಯನವರ 'ಏಕಲವ್ಯ' ಮುಂತಾದ ನಾಟಕಗಳಲ್ಲದೆ ಎಂ.ಎಸ್.ವೇದಾ ಅವರ 'ಜಯ' ಕಾದಂಬರಿ ಕೂಡ ಭಾರತ ಕಥೆಯನ್ನೇ ಮುಖ್ಯವಾಗಿಟ್ಟುಕೊಂಡು ರಚಿತವಾದ ಕೃತಿಗಳಾಗಿವೆ ಎನ್ನಬಹುದು.

ಈ ಮೇಲೆ ಕೊಟ್ಟಿರುವ ಅಂಶಗಳು ಶಿಷ್ಟ ಮಹಾಭಾರತದ ಪರಂಪರೆಯ ಅಲ್ಪ ಮಟ್ಟಿನ ಪರಿಶೀಲನೆಯನ್ನಷ್ಟೇ ನೀಡುತ್ತದೆ ಎಂಬುದು ನನ್ನ ಭಾವನೆ. ಅಂತೆಯೇ ಜನಪದ ಮಹಾಭಾರತವೂ ಪರಂಪರೆಯಲ್ಲಿ ಹೊಂದಿರುವ ಮಹತ್ತುಗಳನ್ನು ಹೀಗೆ ನೋಡಬಹುದಾಗಿದೆ. ಜನಪದ ಮಹಾಭಾರತವೇ ವ್ಯಾಸಭಾರತದ ಮೂಲ ಎನ್ನಲಾಗಿದೆ. ವಾಚಕ ಪರಂಪರೆಯ ಹಿನ್ನೆಲೆಯಲ್ಲಿ ಇದನ್ನು ನೋಡಲಾಗಿದೆ. "ವಿವಿಧ ಪಾಠ ಸಂಪ್ರದಾಯಗಳ ಮೂಲಕ ಮಹಾಭಾರತದ ಅಧಿಕೃತ ಪಾಠವನ್ನು ಪ್ರಕಟಿಸಿದ್ದು ಒಂದು ಮಹತ್ವದ ಘಟನೆ. ಸಂಪಾದಕ ವಿದ್ವಾಂಸರಾದ ಸುಕ್ತನಕರ್ ಅವರ ಈ ಸಾಧನೆ ಈಗ ಒಂದು ಇತಿಹಾಸ. ಭಾಷೆಗಳು ಬೇರೆಯಾದರೂ ಭಾರತ ಒಂದೇ ಆಗಿರುವುದರಿಂದ ಭಾರತದ ವಿವಿಧ ಭಾಷೆಗಳಲ್ಲಿನ ಜನಪದ ಮಹಾಭಾರತ ವಿವಿಧ ಸಂಪ್ರದಾಯಗಳು ಶೋಧಿತವಾಗುವುದು ಅವಶ್ಯಕ"[೧] ಎಂಬ ರಾಗೌ ಅವರ ನುಡಿಯಂತೆ ಜನಪದ ಮಹಾಭಾರತಗಳ ಬಗ್ಗೆಯೂ ಅಧ್ಯಯನ (ಸಂಶೋಧನೆ) ನಡೆಯಬೇಕಾದುದು ಮುಖ್ಯವಾದ ಅಂಶವೆನಿಸುತ್ತದೆ. ಅಂತಹ ಅಧ್ಯಯನಗಳು ಅಲ್ಲಲ್ಲಿ ನಡೆದಿರುವುದು ಸಮಾಧಾನದ ಸಂಗತಿಯಾಗಿ ಕಂಡುಬರುತ್ತವೆ. ಅವುಗಳಲ್ಲಿ ಮುಖ್ಯವಾಗಿ

---

[೧] ರಾಗೌ–ಜನಪದ ಮಹಾಭಾರತ (ಸಂ. ಪಿ.ಕೆ.ರಾಜಶೇಖರ) ಪು. ೨೮.

ಪ್ರಸ್ತುತ ಅಧ್ಯಯನದ ವಸ್ತುಗಳಲ್ಲೊಂದಾದ ಪಿ.ಕೆ.ರಾಜಶೇಖರ ಅವರು ಸಂಗ್ರಹಿಸಿರುವ 'ಜನಪದ ಮಹಾಭಾರತ' ರಾಷ್ಟ್ರೀಯ ಮಹಾಕಾವ್ಯದ ವ್ಯಾಪ್ತಿಯನ್ನು ಹೊಂದಿದೆ ಎನ್ನಬಹುದು. ಸುಮಾರು ೩೦ ವರ್ಷಗಳ ಅವಧಿಯಲ್ಲಿ ಅದು ಕತ್ತಲೆಯಲ್ಲಿದ್ದು ೨೦೦೪ರಲ್ಲಿ ಮುದ್ರಣಗೊಂಡು ಜಗತ್ತಿನ ಜನಪದ ಮಹಾಕಾವ್ಯಗಳ ಸಾಲಿನಲ್ಲಿ ಅಗ್ರಪಟ್ಟವನ್ನು ಪಡೆದಿದೆ ಎನ್ನಬಹುದು. ಇದು ಬೃಹತ್ತಿನಿಂದಲ್ಲದೆ, ಅದರೊಳಗಿನ ಹಲವು ವಿಷಯ-ವಿಚಾರಗಳ ಮಹತ್ತಿನಿಂದ ಎಂದರೆ ಅತಿಶಯವಾಗಲಾರದು. ಇದಲ್ಲದೆ ಜನಪದ ಮಹಾಭಾರತಕ್ಕೆ ಸಂಬಂಧಿಸಿದಂತೆ "ಎನ್.ಆರ್.ನಾಯಕ್ ಅವರ 'ಗಾಮೊಕ್ಕಲ ಭಾರತ', ರಾಮದೇವನಹಳ್ಳಿ ಬಿ.ರಾಮಯ್ಯ ಅವರ 'ಜನಪದ ಮಹಾಭಾರತ', ಸೋಮಶೇಖರ ಇಮ್ರಾಪುರ ಅವರ 'ಜನಪದ ಮಹಾಭಾರತ'ಗಳಲ್ಲಿ ತಕ್ಕಮಟ್ಟಿನ ವಿಶ್ಲೇಷಣೆ ಇದ್ದು ಇವು ಸ್ವಲ್ಪ ಮಟ್ಟಿನ ಬಿಡಿಬಿಡಿ ಪ್ರಸಂಗಗಳೇ ಆಗಿವೆ"[೧] ಎನ್ನಲಾಗಿದೆ. ಇನ್ನುಳಿದಂತೆ ಕ.ರಾ.ಕೃಷ್ಣಸ್ವಾಮಿ ಅವರ 'ಜನಪದ ಗೀತೆಗಳಲ್ಲಿ ಮಹಾಭಾರತ ಭಾಗ-೧, ಕ್ಯಾತನಹಳ್ಳಿ ರಾಮಣ್ಣ ಅವರ 'ಕೊಂತಿಪೂಜೆ ಒಂದು ಅಧ್ಯಯನ', ಜೀ.ಶಂ. ಪರಮಶಿವಯ್ಯ ಅವರ 'ದಕ್ಷಿಣ ಕರ್ನಾಟಕ'ದ ಜನಪದ ಕಾವ್ಯಗಳು', ಗೊ.ರು. ಚೆನ್ನಬಸಪ್ಪರ 'ಗ್ರಾಮಜ್ಯೋತಿ', ಮತಿಘಟ್ಟ ಕೃಷ್ಣಮೂರ್ತಿ ಅವರ 'ಕನ್ನಡ ಜನಪದ ಸಾಹಿತ್ಯ ಭಂಡಾರ', ತೀ.ನಂ. ಶಂಕರನಾರಾಯಣರ (ಸಂ) 'ಕರ್ನಾಟಕದ ಜನಪದ ಮಹಾಕಾವ್ಯಗಳು' ಮುಂತಾದವುಗಳಲ್ಲದೆ, ಜೋಗಿಪದ ಹಾಡುವ ಗಾಯಕರಿಂದ ಸಂಗ್ರಹಿಸಿದ 'ಅರ್ಜುನ ಜೋಗಿ ಹಾಡು' ಹೀಗೆ ಇನ್ನೂ ಕೆಲವರು ಜನಪದ ಮಹಾಭಾರತದ ಪಾತ್ರ, ವಸ್ತು ವಿಷಯಗಳನ್ನು ಕುರಿತು ತಮ್ಮ ಸುತ್ತ ಮುತ್ತಲಿನ ಪ್ರದೇಶದಲ್ಲಿ ಸಂಗ್ರಹಿಸಿ, ಅಧ್ಯಯನ ಮಾಡಿರುವುದನ್ನು ಕಾಣಬಹುದಾಗಿದೆ. ಇವುಗಳಿಂದಾಗಿ ಮೂಲತಃ ಭಾರತೀಯ ವಾಚಕ ಸಂಸ್ಕೃತಿಯೊಂದನ್ನು ಕಟ್ಟಿಕೊಡಲು ಇವುಗಳು ಶಿಷ್ಟ ಮಹಾಭಾರತಗಳಿಗೆ ಎಲ್ಲಿ ಸಾದೃಶ್ಯವಾಗಿದೆ; ಎಲ್ಲಿ ವೈದೃಶ್ಯವಾಗಿದೆ ಎಂಬುದನ್ನು ಗುರುತಿಸಲು ಸಹಕಾರಿಯಾಗುತ್ತದೆ ಎನ್ನಬಹುದು.

ಹೀಗೆ ಮಹಾಭಾರತವು ಕನ್ನಡದಲ್ಲಿ ಹೊಂದಿರುವ ಸ್ಥಾನ ಮಹತ್ತರವಾದದ್ದು; ಇಂದಿಗೂ ಅದು ಜನಮಾನಸದಲ್ಲಿ ಒಂದಲ್ಲ ಒಂದು ರೀತಿಯೊಳಗೆ ಬದುಕಿನ ಭಾಗವಾಗಿ ನಿರಂತರ ಪ್ರಕ್ರಿಯೆಯ ಸ್ವರೂಪದಲ್ಲಿ ಚಲಿಸುತ್ತಿದೆ ಎನ್ನಬಹುದು. ಆದ್ದರಿಂದಲೇ ಸಿ.ಪಿ.ಕೆ. ಅವರು "ಮಹಾಭಾರತದ ಕನ್ನಡ ಅವತಾರಗಳು ಹಲವು, ಆದಿಕವಿ ಪಂಪನಿಂದ ಇಲ್ಲಿಯವರೆಗೆ

---

[೧] ಪುಟ್ಟಸ್ವಾಮಿ – ಕನ್ನಡ ಜಾನಪದಲ್ಲಿ ರಾಮಾಯಣ ಮಹಾಭಾರತ, ಪು. ೩.

ಅವುಗಳಲ್ಲಿ ಅಪಾರ ವೈವಿಧ್ಯವಿದೆ, ಕೆಲವು ಭವಾಂತರಗಳಾದರೆ ಇನ್ನೇಷ್ಟೊ ಭಾಷಾಂತರಗಳು"[೧] ಎಂದಿದ್ದಾರೆ.

ಇಂಥ ಮಹಾಭಾರತ ಕಥೆಯಲ್ಲಿ ಅದರಲ್ಲಿನ ಪಾತ್ರಗಳಲ್ಲಿ ಅದು ಸಾರುವ ಜೀವನ ದರ್ಶನದಲ್ಲಿ ತಮ್ಮ ಪಾತ್ರ, ಕಥೆ, ಮೌಲ್ಯಗಳನ್ನು ಹಿರಿಮೆಯನ್ನು ಕಂಡುಕೊಂಡು ಕಾಲದಿಂದ ಕಾಲಕ್ಕೆ ಅದನ್ನು ತಾವು ಕಂಡಂತೆ ಭಾವಿಸಿ, ಕಲ್ಪಿಸಿ, ಅನುಭವಿಸುತ್ತಾ ಸಾಗಿದ್ದಾರೆ ಜನರು. ಇದು ಅದರ ಮಹತ್ತನ್ನು ಎತ್ತಿ ತೋರಿಸುವುದೊಂದೇ ಅಲ್ಲದೆ, ಬದುಕಿನ ಭಾಗವಾಗಿ ಕಂಡಿದೆ ಎನ್ನಬುಹುದಾಗಿದೆ.

[೧] ಸಿ.ಪಿ.ಕೆ. – ಕನ್ನಡ ಮಹಾಭಾರತ, ವಿರಾಟ ಪರ್ವ (ಮುನ್ನುಡಿಯಿಂದ)

ಅಧ್ಯಾಯ ೪

ಮಹಾಭಾರತಗಳ ವಸ್ತು ವಿನ್ಯಾಸ

ಜನಮಾನಸದಲ್ಲಿ ಅಚ್ಚೊತ್ತಿ ನಿಂತಿರುವುದರ ಜೊತೆಗೆ ಧರ್ಮ, ಸಂಸ್ಕೃತಿ, ಪರಂಪರೆಯ ಎಳೆಗಳನ್ನು ತನ್ನ ಒಳಗೆ ತುಂಬಿಕೊಂಡಿರುವ 'ಮಹಾಭಾರತ'ವು ರಚಿತವಾದ ಕಾಲವನ್ನು ನಿರ್ಧರಿಸುವಲ್ಲಿ ಭಿನ್ನಾಭಿಪ್ರಾಯಗಳಿರುವುದು ಸಾಮಾನ್ಯ ಸಂಗತಿ. 'ವಚನಭಾರತ'ದ ಪೀಠಿಕೆಯಲ್ಲಿ ಎ.ಆರ್.ಕೃಷ್ಣಶಾಸ್ತ್ರಿಗಳು ಇದನ್ನು ಚರ್ಚಿಸುತ್ತ ''ಸುಮಾರು ಒಂದು ಶತಮಾನದಿಂದ ಜರ್ಮನ್, ಅಮೇರಿಕನ್, ಇಂಗ್ಲೀಷ್, ಫ್ರೆಂಚ್ ವಿದ್ವಾಂಸರು, ಭಾರತೀಯ ವಿದ್ವಾಂಸರೂ ಸಂಶೋಧನೆ ನಡೆಸಿ ಇದು ಯಾರೊಬ್ಬರಿಂದಲೂ ಒಂದು ಜೀವಿತ ಕಾಲದಲ್ಲಿ ರಚಿತವಾದದ್ದಲ್ಲ ಎಂದು ಸಿದ್ಧಾಂತ ಮಾಡಿದ್ದಾರೆ. ಹೀಗೆಂದರೆ, ಅದರ ಕಾಲದ ವಿಚಾರವಾಗಿಯಾಗಲಿ, ಕರ್ತೃವಿನ ವಿಚಾರವಾಗಿಯಾಗಲಿ ಸರ್ವಸಮ್ಮತವಾದ ಒಂದು ಅಭಿಪ್ರಾಯ ಉಳ್ಳವರಾಗಿದ್ದಾರೆಂದಲ್ಲ. ಅವರ ಅಭಿಪ್ರಾಯಗಳೇನು, ಅವುಗಳ ಭಿನ್ನತೆಗೆ - ಕಾರಣಗಳೇನು ಎಂದು ಇಲ್ಲಿ ಚರ್ಚಿಸುವುದಾಗಲಿ, ತಿಳಿಸುವುದಾಗಲಿ, ಅನಾವಶ್ಯಕ, ಇದು ಎಷ್ಟು ದೊಡ್ಡ ಮತ್ತು ತೊಡಕಾದ ಸಮಸ್ಯೆಯೆಂದರೆ ಇಂದು ಉಪಲಬ್ಧವಾಗಿರುವ ಭಾರತದ ಕಾಲವನ್ನು ಒಂದು ನೂರು ವರ್ಷ ಕಡಿಮೆಯಾಗಿರುವಂತೆ ಸ್ಥೂಲವಾಗಿ ಹೇಳುವುದಕ್ಕೂ ಆಗುವುದಿಲ್ಲ. ಸಾಧಾರಣವಾಗಿ ಎಲ್ಲರೂ ಸಮ್ಮತಿಸಿರುವ ಇತ್ತೀಚಿನ ಅಭಿಪ್ರಾಯ ಡಾ.ಎಂ.ವಿಂಟರ್‌ನಿಟ್ಸ್ ಅವರದು. ಕ್ರಿ.ಪೂ. ೪೦೦ ರಿಂದ ಕ್ರಿ.ಶ. ೪೦೦ರ ವರೆಗೆ ಎಂಬುದು! ಸುಮಾರು ೮೦೦ ವರ್ಷ ಬೆಳೆದು ನಿಂತಿರುವ ಮಹಾವೃಕ್ಷ ಇದು! ಎಂದರೆ ಈಗ್ಗೆ ಸುಮಾರು ೧,೫೦೦ ವರ್ಷಗಳ ಕೆಳಗೆ ಅದು ಬೆಳೆದು ಇಂದಿರುವ ರೂಪವನ್ನು ತಾಳಿತು. ಇದಕ್ಕೆ ಬೀಜರೂಪದ ವೃತ್ತಾಂತವು ಎಂದರೆ ಕೌರವ ಪಾಂಡವರ ಯುದ್ಧವು ಕ್ರಿ.ಪೂ. ೪೦೦ಕ್ಕಿಂತ ಹಿಂದೆ ನಡೆದಿರಬೇಕು. ಇದು ಕ್ರಿ.ಪೂ. ೧೦ನೆಯ ಶತಮಾನಕ್ಕಿಂತ ಈಚೆ ಇರಲಾರದು ಎಂದು ಮೆಗ್ಡಾನಲ್‌ರವರು ಅಭಿಪ್ರಾಯ ಪಡುತ್ತಾರೆ'' ಎನ್ನುತ್ತಾರೆ.

ಅಂದರೆ 'ಮಹಾಭಾರತ'ದ ಕಥೆಯು ೫೦೦ ವರ್ಷಗಳ ದೀರ್ಘ ಪರಂಪರೆಯನ್ನು ಹೊಂದಿ ಸಾಗಿ ಬಂದಿರುವ ಮೌಲಿಕ ಕೃತಿಯಾಗಿದೆ ಎನ್ನಬಹುದು. ಇಂತಹ ಕೃತಿಯು ಹಲವು ಆಖ್ಯಾನ–ಉಪಖ್ಯಾನಗಳಲ್ಲಿ ಚಲ್ಲುವರಿದು ಇತಿಹಾಸನ್ನು ನಿರ್ದೇಶಿಸುವ ಪುರಾಣ ಪ್ರಕರಣಗಳಲ್ಲಿ ಶ್ರೇಷ್ಠವಾದುದೆನಿಸಿದೆ. ಇಂಥ ಮಹಾಭಾರತವು ಹಲವು ಅಭಿರುಚಿಗಳಿಗನುರೂಪವಾಗಿ ಸಂಗ್ರಹಗೊಂಡಿದೆ. ಅನುವಾದ ರೂಪವನ್ನು ಪಡೆದಿದೆ, ಜೊತೆಗೆ ಹಲವು ಬಿಡಿ ಪ್ರಸಂಗಗಳಲ್ಲಿ ಬಿತ್ತರವಾಗಿರುವುದನ್ನು ಗಮನಿಸಬಹುದು. ಕನ್ನಡದಲ್ಲಿ ಪಂಪ, ರನ್ನ, ಕುಮಾರವ್ಯಾಸ,

ಲಕ್ಷ್ಮೀಶರಂಥ ಕವಿಗಳ ಮನೋಭೂಮಿಕೆಯಲ್ಲಿ ಇಂಥ ಹಲವಾರು ಕೃತಿಗಳು ರೂಪುಪಡೆದು ರಾರಾಜಿಸಿರುವುದರೊಂದಿಗೆ ಕನ್ನಡ ಸಾಹಿತ್ಯದ ಗುಣಮೌಲ್ಯಕ್ಕೆ ಇಂಬು ನೀಡಿವೆ. ಅನಂತರದ ಸಾಹಿತ್ಯ ಚರಿತ್ರೆಯಲ್ಲಿ ಮಹಾಭಾರತದ ವಸ್ತು ಅಥವಾ ಪಾತ್ರಗಳನ್ನು ಕುರಿತೂ ಸಹ ಅಲ್ಲಲ್ಲಿ ವಿಚಾರಗಳು ಒಗೆದಿರುವುದನ್ನು ಕಾಣಬಹುದು. ಅಲ್ಲದೆ ಕನ್ನಡ ಭಾರತದ ಕನಸು ಕಂಡವರಲ್ಲೇ ಕುಮಾರವ್ಯಾಸನು ಮುಖ್ಯನಾಗಿದ್ದು, ಆತನ 'ಕರ್ಣಾಟಕ ಭಾರತ ಕಥಾ ಮಂಜರಿ'ಯು ಇಂದಿಗೂ ಮಹತ್ವವಾಗಿದೆ. ಹೀಗೆ ಕನ್ನಡ ಭಾರತದ ಅವಶ್ಯಕತೆಯನ್ನೇ ಅವಲಂಬಿಸಿದ ಎ.ಆರ್.ಕೃಷ್ಣಶಾಸ್ತ್ರಿಗಳ 'ವಚನ ಭಾರತ'ವು ಪ್ರಸ್ತುತ ಅಧ್ಯಯನದ ಮುಖ್ಯ ಆಕರವಾಗಿದ್ದು, ಅದು ಅವರ ವಿದ್ಯಾರ್ಥಿ ಜೀವನದ ಒತ್ತಾಸೆಯಾಗಿ ನಿಂತು ಅನಂತರ ರಚನೆಗೆ ಅಳುಕಿನಿಂದಲೇ ಕೈ ಹಾಕಿದ ವಿಚಾರವನ್ನು ಅವರೇ ಹೇಳಿಕೊಂಡಿದ್ದಾರೆ. ಇಂಥ ವಚನ ಭಾರತವು ೧೯೫೦ರಲ್ಲಿ ಮೊದಲ ಮುದ್ರಣಗೊಂಡು ಅನಂತರ ೧೯೫೩, ೧೯೫೮, ೧೯೬೬, ೧೯೭೧, ೧೯೮೧, ೧೯೮೯ರ ಅನಂತರವೂ ಹಲವಾರು ಮುದ್ರಣಗಳನ್ನು ಕಂಡು ತನ್ನ ಮೌಲ್ಯದ ಜೊತೆಗೆ ಶ್ರೇಷ್ಠತೆಯ ಸಾರತೆಗೆ ನಿದರ್ಶನವಾಗಿದೆ. ಇಂಥ 'ಮಹಾಭಾರತ'ವನ್ನು ಕುರಿತು 'ಮ್ಯಾಕ್ಸ್‌ಮುಲ್ಲರ್'ನು "ಆ ದೈತ್ಯಕಾವ್ಯವನ್ನು ಸಮಗ್ರವಾಗಿ ಓದುವುದಕ್ಕೆ ಬದುಕು ತುಂಬಾ ಕಿರಿದಾಗಿ ತೋರುತ್ತದೆ"[೧] ಎಂದಿದ್ದಾನೆ. ಅಂತೆಯೇ ಲಕ್ಷಾಂತರ ಶ್ಲೋಕಗಳಲ್ಲಿ ಮಿಳಿತಗೊಂಡಿರುವ ವಾರಿಧಿ ರೂಪದ ಭಾರತವನ್ನು "ಎ.ಆರ್.ಕೃಷ್ಣಶಾಸ್ತ್ರಿಗಳು ಆರು ತಿಂಗಳಲ್ಲಿ ತಿದ್ದದ ನಿರರ್ಗಳ ಶೈಲಿಯಿಂದ ಆರು ತಿಂಗಳಾವಧಿಯಲ್ಲೇ ರಚಿಸಿದರೆಂದು ತಿಳಿದು ಬರುತ್ತದೆ. ಇದು ವಾಸ್ತವವಿದ್ದಲ್ಲಿ ಆ ಮೂಲ ಆಶ್ಚರ್ಯವನ್ನು ಕಿಂಚಿದನುಭವಕ್ಕೆ ತರುವಂತಹ ಸಾಧನೆಯೇ ಸರಿ . . . . . ಅತ್ಯಂತ ಸರಳವಾಗಿ ತೋರುವ ಇದು ಅದೆಷ್ಟು ಕುದಿದು ಪಾಕಗೊಂಡಿಲ್ಲ? ಈ ಮಹಾ ವಿದ್ವಾಂಸರಸತಜ್ಞರು ೩೦-೪೦ ವರ್ಷಗಳು ನಿರಂತರವಾಗಿ ಮಾಡಿದ ಮಹಾಭಾರತ ವ್ಯಾಸಂಗ ಫಲಸಾರವೆ ಈ ವಚನಭಾರತ"[೨] ಎನ್ನುವ ಪ್ರೊ.ಸುಜನಾ ಅವರ ಮಾತು ಉಲ್ಲೇಖನೀಯ.

ಹೀಗೆ 'ವಚನಭಾರತ'ವು ತನ್ನದೇಯಾದ ಮಹತ್ತುಗಳನ್ನು ಮಡಲಲ್ಲಿರಿಸಿಕೊಂಡಿರುವ ಮೇರು ಕೃತಿಯಾಗಿದೆ. ಅಂತೆಯೇ ಪ್ರಸ್ತುತ ಅಧ್ಯಯನದ 'ಜನಪದ ಮಹಾಭಾರತ'ವೂ ಸಹ ಅಭ್ಯಾಸ ಯೋಗ್ಯವಾಗಿರುವುದರೊಂದಿಗೆ ಜಗತ್ತಿನ ಜನಪದ ಮಹಾಕಾವ್ಯಗಳ ಸಾಲಿನಲ್ಲಿ ಅಗ್ರಮಾನ್ಯತೆಗೆ ಪಾತ್ರವಾಗಿರುವಂತಹುದ್ದು. ಇಂಥ ಹಲವು ಜನಪದ ಮಹಾಭಾರತಗಳು ಕನ್ನಡದಲ್ಲಿ ಕಂಡುಬಂದಿದ್ದರೂ ಸಹ ಬೆಟ್ಟದಬೀಡು ಸಿದ್ಧಶೆಟ್ಟರು ಹಾಡಿ, ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ ಈ ಕೃತಿಯು ೧೯೭೨ ರಿಂದ ೧೯೮೬ರ ಅವಧಿಯವರೆಗೂ ಆಗಾಗ

---

[೧] ಸಂವಹನ - ಸುಜನಾ, ಪು. ೨೦೬

[೨] ಅದೇ, ಪುಟ ೨೦೬.

ಬರೆದುಕೊಂಡು ಬೆಳೆದು ಬಂದಿರುವುದನ್ನು ಅವರೇ ತಿಳಿಸುತ್ತಾರೆ. ಅದು ೨೦೦೪ರಲ್ಲಿ ಪ್ರಥಮ ಮುದ್ರಣ ಕಂಡಿದ್ದು ಭಾರತದ ಜಾನಪದ ಕ್ಷೇತ್ರಕ್ಕೆ ಮೌಖಿಕವಾದ ಗ್ರಂಥವಾಗಿದ್ದು, ರಾಗೌ ಅವರು ಗುರುತಿಸುವಂತೆ 'ಯುಗ ನಿರ್ಮಾಣ'ದ ಕೆಲಸವಾಗಿಯಲ್ಲದೆ; 'ಉಜ್ವಲ ಪರಿಶೋಧನೆ' ಆಗಿರುವುದನ್ನು ಆ ಕೃತಿ ಅಭ್ಯಾಸದಿಂದ ಅರಿಯಬಹುದಾಗಿದೆ. ಇಂತಹ ಎರಡೂ ಭಾರತಗಳ ವಸ್ತು ವಿನ್ಯಾಸ, ವಿಭಾಗಕ್ರಮ, ವ್ಯತ್ಯಾಸ-ಭಿನ್ನತೆ ಇವುಗಳನ್ನು ಕುರಿತು ಚರ್ಚಿಸುವುದು ಈ ಅಧ್ಯಯನದ ಮುಖ್ಯವಾದ ಒತ್ತಾಸೆಯಾಗಿರುವುದರೊಂದಿಗೆ, ಇದು ತುಲನಾತ್ಮಕ ನೋಟವೂ ಹೌದಾಗಿದೆ.

ಅ) ವ್ಯಾಸಭಾರತ ಮತ್ತು ಜನಪದ ಮಹಾಭಾರತಗಳ ವಿಭಾಗಕ್ರಮ

ವ್ಯಾಸ ವಿರಚಿತವಾಗಿರುವ 'ಮಹಾಭಾರತ'ವು ಮೇಲೆ ತಿಳಿಸಿದಂತೆ ಅನುವಾದದ ಹಲವು ಮಜಲುಗಳನ್ನು ದಾಟಿ ಬಂದಿರುವುದನ್ನು ಕಾಣಬಹುದು. ಅಂತೆಯೇ 'ವಚನಭಾರತ'ವೂ ಇಂತಹ ಒಂದು ಪ್ರಯತ್ನವಾಗಿದೆ. ಈ 'ವಚನಭಾರತ'ವು ಆದಿಪರ್ವ, ಸಭಾಪರ್ವ, ಅರಣ್ಯಪರ್ವ, ವಿರಾಟಪರ್ವ, ಉದ್ಯೋಗಪರ್ವ, ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ, ಶಲ್ಯಪರ್ವ, ಸೌಪ್ತಿಕಪರ್ವ, ಸ್ತ್ರೀಪರ್ವ, ಶಾಂತಿಪರ್ವ, ಅನುಶಾಸನಪರ್ವ, ಅಶ್ವಮೇಧಿಕ ಪರ್ವ, ಆಶ್ರಮವಾಸಿಕ ಪರ್ವ, ಮೌಸಲಪರ್ವ, ಮಹಾಪ್ರಸ್ಥಾನಿಕ ಪರ್ವ, ಸ್ವರ್ಗಾರೋಹಣ ಪರ್ವ ಎಂಬ ಹದಿನೆಂಟು ಪರ್ವಗಳನ್ನಲ್ಲದೆ, ಅನುಬಂಧದಲ್ಲಿ ಶಕುಂತಲೆ, ಯಯಾತಿ, ರಾಮೋಪಖ್ಯಾನಗಳೆಂಬ ಮೂರು ಉಪಖ್ಯಾನಗಳನ್ನು ಕೊಟ್ಟು ವಿಭಾಗಿಸಲಾಗಿದೆ. ಸಾಮಾನ್ಯವಾಗಿ ಎಲ್ಲ ಭಾಷೆಗಳಲ್ಲಿರುವ ಮಹಾಭಾರತಗಳಲ್ಲಿ ಈ ವಿಧವಾದ ವಿಭಾಗ ಕ್ರಮವೇ ಜರುಗಿರುವುದನ್ನು ಗಮನಿಸಬಹುದು. ಆದರೆ ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ 'ಜನಪದ ಮಹಾಭಾರತ'ದಲ್ಲಿ ಈ ಕ್ರಮವನ್ನು ಬಿಟ್ಟು ಬೇರೆ ರೀತಿಯಾದ ವಿಭಾಗಕ್ರಮ ಅನುಸರಿಸಿರುವುದು ಕಂಡುಬರುತ್ತದೆ. ಪ್ರತಿ ಪರ್ವವನ್ನು ಒಡೆದು, ಹೊಸ ಸೇರ್ಪಡೆಗಳೊಂದಿಗೆ ಜನಪದ ಜನಮಾನಸದಲ್ಲಿದ್ದಂತಹ ಕ್ರಮವನ್ನು ಲಕ್ಷಿಸಿರುವುದು ಈ ಕಾವ್ಯದಲ್ಲಿನ ವಿಭಾಗಕ್ರಮದ ದೃಷ್ಟಿಯಾಗಿದೆ. ಅವುಗಳು ಪ್ರಾರ್ಥನೆಯ ಪರ್ವ, ಭಾರತವನ್ನು ಬರೆದುಕೊಂಡ ಗಣಪತಿ ಪರ್ವ, ಶಿವಗಂಗೆ ಪರ್ವ, ಗಂಗಾಪುತ್ರ ಪರ್ವ, ದುರ್ಗಂಧಾದೇವಿ, ವ್ಯಾಸರುಜರಣವಾದ ಪರ್ವ, ಸುಗಂಧಿನಿ-ಶಾಂತರಾಜರ ಪರ್ವ, ಅಂಬೆಶಪಥ ಮಾಡಿದ ಪರ್ವ, ಚಿತ್ರವೀರ-ವಿಚಿತ್ರ ವೀರರ ಪರ್ವ, ನಾಗರುಸಿ ಪರ್ವ, ಪತಿಭಿಕ್ಷೆಯ ಪರ್ವ, ಧ್ರುತರಾಷ್ಟ್ರ-ಪಾಂಡುವಿಧುರರ ಪರ್ವ, ವೇದಗಳು ನೆಗಾಡಿದ ಪರ್ವ, ಬ್ರಹ್ಮ-ವಿಷ್ಣು ಕದನದ ಪರ್ವ, ಮಹಾಲಿಂಗೇಶ್ವರ ಲೀಲೆಯ ಪರ್ವ, ಬ್ರಹ್ಮಕಪಾಲಿ ಪರ್ವ, ಸಹಸ್ರ ಕವಚ ಡಂಬಕಾಸುರ ಪರ್ವ, ಭೂಮಿಯ ಮಗಳು ಕೊಂತಮ್ಮನ ಪರ್ವ, ಕರ್ಣ

ಹುಟ್ಟಿದ ಪರ್ವ, ಧೃತರಾಷ್ಟ್ರ ಮತ್ತು ಪಾಂಡುರಾಜರ ಮದುವೆ ಪರ್ವ, ಗಾಂಧಾರಿ ಗರ್ಭಿಣಿಯಾದ ಪರ್ವ, ಧರ್ಮರಾಯ ಜರಣವಾದ ಪರ್ವ, ಕೌರವರು ಹುಟ್ಟಿದ ಪರ್ವ, ಪಂಚಪಾಂಡವರ ಪರ್ವ, ಭೂದೇರನಾಥನಿಂದ ಶಕುನಿ ವರ ಪಡೆದ ಪರ್ವ, ಸೇಡಿನ ಶಕುನಿ ಪರ್ವ, ಪಾಂಡುರಾಜನ ಮರಣ ಪರ್ವ, ತ್ರಿಕಾಲಜ್ಞಾನಿ ಸಾದೇವನ ಪರ್ವ, ದಾನಶೂರ ಕರ್ಣನ ಪರ್ವ, ಕರ್ಣ ಸೊಯಂಪ್ರಭೆಕಲ್ಯಾಣ ಪರ್ವ, ಕರ್ಣ ಪರಶುರಾಮರ ಪರ್ವ, ದ್ರೋಣ–ದ್ರುಪತರ ಪರ್ವ, ನೂರ್ರೈವರಿಗೆ ಗುರು ದ್ರೋಣರಾದ ಪರ್ವ, ಅರ್ಜುನ ಕಾಶೀತೀರ್ಥ ತಂದ ಪರ್ವ, ಕರ್ಣ ದುರ್ಯೋಧನರ ಪರಿಚಯ ಪರ್ವ, ಕರ್ಣ ಅಂಗದೇಶದ ದೊರೆಯಾದ ಪರ್ವ, ಧರೆಗೊಬ್ಬನೆ ದಾನಶೂರ ಕರ್ಣ ಎಂದಾದ ಪರ್ವ, ದ್ರುಪತ್ರಾಜನ ಗರ್ವಭಂಗದ ಪರ್ವ, ಆದಿಶಕ್ತಿ ದ್ರೋಪತಿ ಜರಣದ ಪರ್ವ, ಗಾಂಧಾರಿ ಮಾಡಿದ ಗಜನೋಂಪಿ ಪರ್ವ, ಅಪೂರ್ಣ ವಜ್ರಕಾಯ ಪರ್ವ, ಅರ್ಜುನನು ಐರಾವತ ತರಲು ಹೊರಟ ಪರ್ವ, ಐರಾವತ ಧರೆಗಿಳಿದ ಪರ್ವ, ಗಜನೋಂಪಿಗೆ ಗಾಂಧಾರಿಯನ್ನು ಕರೆಯುವ ಪರ್ವ, ಗಜನೋಂಪಿ ಮಾಡಿದ ಪರ್ವ, ಸತ್ತವರು ಕಾಗೆಯಾಗಿ ಬರಲು ಶಾಪ ಕೊಟ್ಟ ಪರ್ವ, ಅರಗಿನ ಮನೆಯಿಂದ ಪಾಂಡವರು ಪಾರದ ಪರ್ವ, ಭೀಮ–ಇಡಂಬೆ ಕಲ್ಯಾಣ ಪರ್ವ, ಸಾಂಬ್ರಾಸುರ ಪರ್ವ, ಏಕಚಕ್ರ ನಗರದ ಕುಂಬಾರ ಗುಂಡಯ್ಯನ ಪರ್ವ, ಭೀಮಣ್ಣ ಮುದ್ದೇಗೌಡರ ದರಕಾಸ ಭೂಮೀಲಿಗೇದ ಪರ್ವ, ಬಕಾಸುರನನ್ನು ಕೊಂದ ಪರ್ವ, ಮಾರೀಚ ಕಾಗೆ ಪರ್ವ, ಅಂಗಗೊರಬನ ಪರ್ವ, ದ್ರೋಪತಿ ಸೊಯಂಬರ ಪರ್ವ, ದ್ರೋಪತಿ ಐವರಿಗೂ ಸತಿಯಾದ ಪರ್ವ, ಭೀಷ್ಮರಿಗೆ ಜತಿಶಾಪ ಕೊಟ್ಟ ಪರ್ವ, ನಾಯಿಗಳಿಗೆ ಭೀಮ ಶಾಪ ಕೊಟ್ಟ ಪರ್ವ, ಪುರುಷರಿಗೆ ವರುಷ ನಿಯಾಮಕದ ಪರ್ವ, ಜರಾಸಂಧ ಹುಟ್ಟಿದ ಪರ್ವ, ಜರಾಸಂಧ ತಪಸ್ಸು ಮಾಡಿದ ಪರ್ವ, ರಾಜಸೂಯ ಮಾಡಲು ನಾರದರು ಹೇಳಿದ ಪರ್ವ, ಜರಾಸಂಧನ ಸಮ್ಮಾರದ ಪರ್ವ, ಪುರುಷಾಮೃಗವನ್ನು ತಂದ ಪರ್ವ, ದಂತುವ ಸಿಸುಪಾಲರ ಸಮ್ಮಾರ ಪರ್ವ, ಐಶ್ವರ್ಯ ಅಕ್ಷಯ ಪರ್ವ, ಪಾಂಡುರಾಜನಿಗೆ ಸೊರಗ ಪ್ರಾಪ್ತಿ ಪರ್ವ, ಬಲರಾಮನ ಹೆಣ್ಣೊಪ್ಪಿತ ಶಾಸ್ತ್ರ ಮಾಡಿದ ಪರ್ವ, ಅರ್ಜುನ ತೀರ್ಥಯಾತ್ರೆ ಹೊರಟ ಪರ್ವ, ಚಿತ್ರಕುಸುಮಾಲೆಯರ ಪರ್ವ, ಸುಭದ್ರಾ ಕಲ್ಯಾಣ ಪರ್ವ, ಭಾನುಮತಿ ಕಲ್ಯಾಣ ಪರ್ವ, ಅಭಿಮನ್ಯು ಜರಣವಾದ ಪರ್ವ, ಅರ್ಧಕ್ರಿಷ್ಣನ ಪರ್ವ, ದ್ರೋಪತಿ ಸೆರಗು ಕಟ್ಟಿದ ಪರ್ವ, ಚಿತ್ರಕುಸುಮಾಲೆಯರ ತ್ರಬಸಿನ ಪರ್ವ, ಗಿಣಿಯ ಹಾಡಿನ ಪರ್ವ, ಮಣಿಪುರದಲ್ಲಿ ಗಿಣಿಗಳು ಹಾಡಿದ ಪರ್ವ, ಚಿತ್ರಕುಸುಮಾಲೆಯರು ಡಂಗೂರ ಸಾರಿಸಿದ ಪರ್ವ, ಅರ್ಜುನ ದ್ರೋಪತಿಯರ ಪಗಡೆ ಪಂಥದ ಪರ್ವ, ಅರ್ಜುನನು ಜೋಗಿ ಬಿರುದುಗಳನ್ನು ಪಡೆದ ಪರ್ವ, ಜೋಗಿಯು ದ್ರೋಪತಿಯಲ್ಲಿ ಈಳ್ಯ ಕೇಳದ ಪರ್ವ, ಅರ್ಜುನ ಜೋಗಿ ಕೇರಿ ಕೇರಿಗಳನ್ನು ಸುತ್ತಿದ ಪರ್ವ, ಅರ್ಜುನನಿಂದ ಒಕ್ಕಲಿಗರು ಹೆಸರು ಪಡೆದ ಪರ್ವ, ಜೋಗಿಯು ಧರ್ಮರಾಯರನ್ನು ಕಂಡ

ಪರ್ವ, ಅರ್ಜುನ ಜೋಗಿ ತಾಯಿ ಕೊಂತಮ್ಮನನ್ನು ಕಂಡ ಪರ್ವ, ಅರ್ಜುನ ಜೋಗಿಯ ಪಂಕ್ತಿ ಭೋಜನದ ಪರ್ವ, ಚಿತ್ರಕುಸುಮಾಲೆಯರು ಅರ್ಜುನನ್ನು ಕೂಡಿದ ಪರ್ವ, ಒಕ್ಕಲಿಗರಿಗೆ ಜೋಗಿ ಬಿರುದುಗಳನ್ನು ಕೊಟ್ಟ ಪರ್ವ, ಬಬ್ರುವಾಹನ ಮತ್ತು ನಾಗಾರ್ಜುನರ ಜರಣ ಪರ್ವ, ಧರ್ಮರಾಜ ಜೂಜಿನಲ್ಲಿ ಸೋತ ಪರ್ವ, ವನವಾಸ–ಮರೆವಾಸಕೆ ಈಡುಕಟ್ಟಿದ ಪರ್ವ, ವನವಿಯಾರ ತಂತ್ರ ಪರ್ವ, ದುರ್ಯೋಧನನಿಗೆ ದ್ರೋಪತಿ ಒದ್ದ ಪರ್ವ, ಸೇಂದುವನ ಮಾನಭಂಗ ಪರ್ವ, ಅಂತರಾಳ ಪರೀಕ್ಷೆ ಪರ್ವ, ನಾಗಾರ್ಜುನ ಪರ್ವ, ಅಕ್ಷಯ ಪಾತ್ರೆ ಪಡೆದ ಪರ್ವ, ತ್ರೈಮೂರ್ತಿಗಳ ದರ್ಶನ ಪರ್ವ, ದೂರ್ವಾಸರು ಧೈರ್ಯಗೆಟ್ಟ ಪರ್ವ, ಇಂದ್ರಿಕೀಲದಲ್ಲಿ ಅರ್ಜುನ ತ್ರಬಸು ಮಾಡಿದ ಪರ್ವ, ಮಹದೇವದೇವನಿಂದ ಮಯುತ್ತಿನ ಅಸ್ತ್ರಗಳ ಪಡೆದ ಪರ್ವ, ಅರ್ಜುನನಿಗೆ ಊರೋಸಿ ಶಾಪಕೊಟ್ಟ ಪರ್ವ, ಭೀಮೇಶಲಿಂಗ ಪರ್ವ, ಕ್ರಿಷ್ಣಾರ್ಜುನ ಕಾಳಗ ಪರ್ವ, ಮಲೆಯಾಳಿ ಮಂತ್ರವಾದಿ ಕೊನುಗಯ್ನ ಪರ್ವ, ಕೊನುಗಯ್ಯನ ಪೆಡಂಭೂತ ಪರ್ವ, ಪಾಂಡವರು ವನವಾಸ ಮುಗಿಸಿದ ಪರ್ವ, ಪಾಂಡವರು ಮರೆವಾಸಕೆ ವಿರಾಟನಗರ ಸೇರಿದ ಪರ್ವ, ಶ್ರೀಕೃಷ್ಣ ಈರುಳ್ಳಿಯನ್ನು ತ್ರಿಷ್ಣೆ ಮಾಡಿದ ಪರ್ವ, ಕೀಚಕನು ದ್ರೋಪತಿಯನ್ನು ನೋಡಿದ ಪರ್ವ, ದ್ರೋಪತಿಯು ಕೀಚಕನ ಕಿರುಕುಳವನ್ನು ಭೀಮನಿಗೆ ಹೇಳೀಕೊಂಡ ಪರ್ವ, ಕೀಚಕ ಸಮ್ಮಾರ ಪರ್ವ, ಉಪಕೀಚಕರು ನಾಶವಾದ ಪರ್ವ, ಕೌರವನು ಕಳಿಸಿದ ಜಟ್ಟಿಗಳ ಪರ್ವ, ಗೋವುಗಳನ್ನು ಸೆರೆ ಮಾಡಿದ ಪರ್ವ, ದನಗಳ ಸೆರೆ ಬಿಡಿಸಿದ ಪರ್ವ, ಉತ್ತರನ ಗೆಲುವಿನ ಪರ್ವ, ಮರೆವಾಸ ಮುಗಿಸಿದ ಪರ್ವ, ಅಭಿಮನ್ಯು ಉತ್ತರೆ ಕಲ್ಯಾಣ ಪರ್ವ, ವಿಧುರನ ಭಕ್ತಿಯ ಪರ್ವ, ಶ್ರೀಕೃಷ್ಣ ರಾಯಭಾರ ಪರ್ವ, ಕರ್ಣನ ಜನ್ಮರಹಸ್ಯ ಪರ್ವ, ಕರ್ಣನು ಕೊಂತಿಗೆ ಕೈ ಭಾಷೆಕೊಟ್ಟ ಪರ್ವ, ಯುದ್ಧ ಸಮ್ಮತಿ ಪರ್ವ, ಕೌರವನ ಕಡೆಯ ವೀರರ ಸಾಮರ್ಥಿಕ ಪರ್ವ, ಬಲರಾಮನ ಭೂಪ್ರದಕ್ಷಿಣೆ ಪರ್ವ, ಕ್ರಿಷ್ಣ ಒಂದು ತೂಕ ಬಲರಾಮನ ಸೈನ್ಯ ಒಂದು ತೂಕವಾದ ಪರ್ವ, ಭದ್ರಬಾಹು ಭೂಲೋಕಕ್ಕೆ ಬಂದ ಪರ್ವ, ಭದ್ರಬಾಹುವಿನ ಪರಾಕ್ರಮದ ಪರ್ವ, ಭದ್ರಬಾಹು ಬಲೀ ಪರ್ವ, ಭೀಷ್ಮರನ್ನು ಸೇನಾಧಿಪತಿಯಾಗಲು ಒಪ್ಪಿಸಿದ ಪರ್ವ, ಭೀಷ್ಮರಲ್ಲಿ ದ್ರೋಪತಿಯು ವಾಲೆಭಾಗ್ಯವನ್ನು ಬೇಡಿದ ಪರ್ವ, ವಿಶ್ವರೂಪ ಪರ್ವ, ಹದಿನೆಂಟು ಚೋಣಿ ಸೇನ್ಯಕ್ಕೆ ಹದಿನೆಂಟು ಜಿನ ಯುದ್ಧಕ್ಕೆ ಕಾರಣನಾದ ಮಾರ್ಕಂಡೇಯನ ಪರ್ವ, ಭೀಷ್ಮಾಪರ್ವ, ಚಿತ್ರಮೂಲ ಕ್ವಾಟೆಯಲ್ಲಿ ಅಭಿಮನ್ಯು ಪರ್ವ, ಸೈಂಧವ ಸಮ್ಮಾರ ಪರ್ವ, ದ್ರೋಣರು ಐಕ್ಯವಾದ ಪರ್ವ, ಕರ್ಣಪರ್ವ, ಗದಾಯುದ್ಧ ಪರ್ವ, ಕೌರವರು ಕೊನೆಯಾದ ಪರ್ವ, ಧ್ರುತರಾಷ್ಟ್ರನ ಭೀಮದ್ವೇಷ ಪರ್ವ, ಧರ್ಮರಾಯ ಪಟ್ಟಾಭಿಷೇಕ ಪರ್ವ, ಭದ್ರಬಾಹು ತೀರ್ಪು ನೀಡಿದ ಪರ್ವ, ಹಸ್ತಿನಾವತಿಗೆ ಗಾರುಡಿಗ ಬಂದ ಪರ್ವ, ಭೀಮರ್ಜುನರು ಮಾಯಾಜಾಲಕ್ಕೆ ಸಿಕ್ಕಿಕೊಂಡ ಪರ್ವ, ಗಾರುಡಿಗನಿಂದ ಭೀಮಾರ್ಜುನರ

ಗರ್ವಭಂಗ, ನಿಜತಾಯಿ ಪರ್ವ, ಕಲಿಪ್ರಭಾವ ಪರ್ವ, ಪಾಂಡವರ ಆತುಮಶಕ್ತಿ ಪರ್ವ, ವೈಕುಂಟವಾಸಿ ಪರ್ವ, ಪಾಂಡವರು ಅವರೆ ಪರ್ವ, ಸೀಲಾನದಿ ಪರ್ವ, ಸೊರ್ಗಾರೋಣ ಪರ್ವ, ಗಣಪತಿಗೆ ಮೊದಲ ಪೂಜೆ ಪರ್ವ ಎಂಬ ನೂರ ಐವತ್ತೊಂಬತ್ತು ಪರ್ವಗಳಲ್ಲದೆ ಅನುಬಂಧದಲ್ಲಿ ಬಬ್ರುವಾಹನ ಪರ್ವ ಹಾಗೂ ಬಿಡಿಗೀತೆಗಳನ್ನು ಕಟ್ಟಿಕೊಡಲಾಗಿದೆ.

ಆ) ಪ್ರಸ್ತುತ ಕಾವ್ಯಗಳ ಆರಂಭ, ವ್ಯತ್ಯಾಸ ಮತ್ತು ನಿರೂಪಣಾ ಭಿನ್ನತೆ

'ಮಹಾಭಾರತ'ಕ್ಕೂ ಆದಿಕಾಲದಲ್ಲಿ 'ಭಾರತ'ವೊಂದಿದ್ದಿರಬೇಕೆಂಬ ಕೆಲವರ ಅಭಿಪ್ರಾಯದಂತೆ ಇದು ಎಲ್ಲ ಭಾರತ ಕಥೆಗಳಿಗೂ ಮೂಲವೆನ್ನಲಾಗಿದೆ. ವ್ಯಾಸರ ಕಾಲವು ಇತಿಹಾಸ ಪುರಾಣದ ಕಾಲವಾದರೆ, ಅನಂತರದಲ್ಲಿ ಭಾರತವನ್ನು ವಸ್ತುವನ್ನಾಗಿಸಿಕೊಂಡ ಕವಿಗಳು ಆ ಕಥೆಯನ್ನೇ ತಮಗೆ ಬೇಕಾದಂತೆ ಮಾಡಿಕೊಂಡು ಅಥವಾ ಅನುಸರಿಸಿಕೊಂಡು ಅಲ್ಲಲ್ಲಿ ತಕ್ಕ ಮಾರ್ಪಾಡು ಏರ್ಪಾಡುಗಳ ಕುಸುರಿ ನಡೆಸಿರುವುದು ಸರ್ವವೇದ್ಯವಾಗಿರುವಂಥವುಗಳು. ಇಂತಹ ಪರಿಧಿಯೊಳಗೆ ಸಾಗಿ ಬರುವ 'ವಚನಭಾರತ' ಗದ್ಯರೂಪದಲ್ಲಿ ಕಟ್ಟಿಕೊಡುವ 'ಮಹಾಭಾರತ'ವಾಗಿದೆ. ಆದರೆ 'ಜನಪದ ಮಹಾಭಾರತ'ವು ಜನಪದ ತುಡಿತದ ಸಮಾನ ಅಂಶಗಳನ್ನು ಹೊಸ ವ್ಯಾಖ್ಯಾನ ರೂಪದಲ್ಲಿ ಮೂಲಭಾರತದ ಕಥಾವಸ್ತುವಿಗೆ ಹಚ್ಚಿ ನೋಡುವ, ವ್ಯಾಖ್ಯಾನಿಸಿ, ತರ್ಕಿಸಿ ಉತ್ತರಗಳನ್ನು ಕಂಡುಕೊಳ್ಳುವ ತುಡಿತವನ್ನು ಹೊಂದಿದೆ ಎನ್ನಬಹುದು.

'ವಚನಭಾರತ'ವು ಶಿಷ್ಟ 'ಮಹಾಭಾರತ'ದ ಕ್ರಮದಂತೆಯೇ ವ್ಯಾಸರು ತಮ್ಮ ಶಿಷ್ಯನಾದ ವೈಶಂಪಾಯನನಿಗೆ ಹೇಳಿದ ಕಥೆಯನ್ನು ವೈಶಂಪಾಯನನು ಜನಮೇಜಯ ರಾಯನಿಗೆ ಹೇಳಿದ್ದು, ಅದನ್ನು ಕೇಳಿದ್ದ ಉಗ್ರಶ್ರವನೆಂಬ ಸೂತಪೌರಾಣಿಕನು ನೈಮಿಷಾರಣ್ಯರಲ್ಲಿ ಶೌನಕನೆಂಬ ಕುಲಪತಿಯು ನಡೆಸುತ್ತಿದ್ದ ದ್ವಾದಶ ವಾರ್ಷಿಕ ಯಜ್ಞಕ್ಕೆ ಹೋಗಿದ್ದಾಗ, ಅಲ್ಲಿ ನೆರೆದಿದ್ದ ಋಷಿಗಳ ಅಪೇಕ್ಷೆಯಂತೆ ಆ ಕಥೆಯನ್ನು ಹೇಳಿದನೆಂದು ಆರಂಭವಾಗುತ್ತದೆ. ಆದರೆ 'ಜನಪದ ಮಹಾಭಾರತ'ದಲ್ಲಿ ಗಣಸ್ತುತಿಯಿಂದ ಮೊದಲಾಗುವುದು ವಿಶೇಷವಾಗಿದೆ. ಅಲ್ಲದೆ ಜಗತ್ತಿನ ಅಸ್ತಿತ್ವಗಳೆನಿಸಿದ ಶಕ್ತಿ, ಸಂಪತ್ತು, ಜ್ಞಾನ ಇವುಗಳ ಪ್ರತೀಕವಾದ ಪಾರ್ವತಿ, ಲಕ್ಷ್ಮೀ, ಸರಸ್ವತಿ ಇವರನ್ನು ತಮ್ಮ ನೆಲೆಯೊಳಗೊದಗುವ ವಸ್ತುಗಳಲ್ಲಿ ಕಾಣುತ್ತ, ಅವುಗಳನ್ನೇ ಎಡೆಯಿಟ್ಟು ತನಗೆ ಅಕ್ಷರ ಕಲಿಸಲಿಕ್ಕಿರುವ ಪರಿಯಂತೂ ಜನಪದರ ಋಣಿಭಾವದ ರೂಪವನ್ನು ಪ್ರಕಟಪಡಿಸುತ್ತದೆ. ಅವರು 'ಮಹಾಭಾರತ'ವನ್ನು ಧರೆಗೆ ಬಿದ್ದ ಬೀಜವು ವೃಕ್ಷ ರೂಪ ತಾಳಿ, ಅದು ನೀಡಿರುವ ಸವಿ ಫಲ ರುಚಿಯನ್ನು ನೆನೆಯುತ್ತಾರೆ. ಜನಪದ ಮಹಾಭಾರತದ ಪ್ರಸ್ತಾವನೆಯಲ್ಲಿ ಸಂಪಾದಕರಾದ ಪಿ.ಕೆ. ರಾಜಶೇಖರ ಅವರು ತಿಳಿಸುವ 'ವ್ಯಾಸರು ಹಾಡಿದ

ಮಹಾಭಾರತದ ಕಥೆಯನ್ನು ಗಣಪತಿಯಿಂದ ಬರೆಸಲಾಯಿತು ಎಂಬುದು ತಿಳಿದ ವಿಚಾರವಾದರೂ, ಗಣಪತಿಯೇ ಏಕೆ ಇದನ್ನು ಬರೆದುಕೊಳ್ಳಬೇಕಾಯಿತು ಎಂಬುದಕ್ಕೆ ಕಲ್ಪಿತವಾಗಿರುವ ಕಥೆ ಈ ಹಿಂದೆ ರೂಢಿಯಲ್ಲಿದ್ದ ಕಥೆಗೆ ಹೊಸ ತಿರುವನ್ನು ಕೊಟ್ಟಿರುವ ರೀತಿ ವಿಶಿಷ್ಟವಾಗಿದೆ' ಎಂಬ ಮಾತುಗಳು ಭಾರತ ಕಥೆಯೊಂದಿಗೆ ಗಣಪತಿ ಅಧಿನಾಯಕನಾಗಲಿಕ್ಕೆ ದೊರೆತ ಮನ್ನಣೆಯನ್ನು ಜನಪದ ಮನಸ್ಸು ಒಪ್ಪಿಕೊಳ್ಳುವಂತೆ ನೀಡಿರುವುದು ಕಂಡುಬರುತ್ತದೆ.

ಹೀಗೆ 'ಜನಪದ ಮಹಾಭಾರತ' ಮಹಾಕಾವ್ಯವು ಆರಂಭದಲ್ಲೇ ತನ್ನ ಮೂಲ ಸೊಗಡನ್ನು (ಜನಪದ ಆಶಯ) ಉಳಿಸಿಕೊಂಡಿರುವುದು ವೇದ್ಯವಾಗುತ್ತದೆ. ಮಹಾಭಾರತದ ಕಥೆಯು ಶಂತನುವಿನಿಂದ ಶುರುವಾಗುವ ಕ್ರಮವನ್ನು ಅನೇಕ ಆಖ್ಯಾನ – ಉಪಖ್ಯಾನಗಳಲ್ಲಿ ಕಂಡಿದ್ದೇವೆ. ಮೂಲದಲ್ಲೂ ಇದೇ ಕ್ರಮವನ್ನು ಕಾಣಬಹುದು. ಆದರೆ 'ಜನಪದ ಮಹಾಭಾರತ'ದಲ್ಲಿ ಇದಕ್ಕೊಂದು ತಾತ್ವಿಕವಾದ ಸಕಾರಣವನ್ನು ನೀಡುವುದು ಮುಖ್ಯವಾದ ವಿಚಾರ. ಅಂದರೆ ಪರಶಿವನು ಶಂತನಾಗಿಯೂ, ಲಕ್ಷ್ಮೀ, ಸರಸ್ವತಿ, ಪಾರ್ವತಿಯರಿಂದ ನಿಂದೆಗೊಳಪಟ್ಟು, ಶನಿದೇವರಿಂದ ಶಾಪಕ್ಕೀಡಾಗಿ, ಬ್ರಹ್ಮನ ಮಾತಿನಂತೆ ಭುವಿಗೆ ಬಂದ ಗಂಗೆಯೇ ಇಲ್ಲಿ ಭೀಷ್ಮನ ತಾಯಿ ಗಂಗೆಯಾಗುವ ಪರಿಯು ಜನಪದ ಮಿಥ್‌ನ್ನು ಒಳಗೊಳ್ಳುವಂತಹದ್ದು. ಇಲ್ಲಿ ಮೊದಲಿಗೆ ಶಿವಗಂಗೆ ಪರ್ವದಲ್ಲಿ ನಡೆಯುವ ಗಂಗೆ, ಪಾರ್ವತಿ, ಲಕ್ಷ್ಮೀ, ಶಾರದೆಯರ ಜಗಳವು ಮಹಾಭಾರತದ ಮುಂದಿನ ಕಾಳಗಕ್ಕೆ ಬರೆದ ಮುನ್ನುಡಿಯಂತೆ ಗೋಚರಿಸುತ್ತದೆ. ಇಲ್ಲಿ ಹೆಣ್ಣಿಂದ ನಡೆದ ಕದನ ಕುತೂಹಲಕ್ಕೆ ಹಿಡಿದ ಕನ್ನಡಿಯಂತೆ ಕಾಣಿಸಿಕೊಳ್ಳುತ್ತದೆ. ಮತ್ಸ್ಯ ಗಂಧಿ ಇಲ್ಲಿ ದುರ್ಗಂಧಾದೇವಿಯಾಗಿ, ಯೋಜನಾಗಂಧಿಯಾಗದೆ ಸುಗಂಧಿನಿಯಾಗುತ್ತಾಳೆ. ಅಲ್ಲದೆ ಭೀಷ್ಮನ ಹುಟ್ಟು, ಚಿರಂಜೀವಿ ಪಟ್ಟ, ಪರಾಶರಮುನಿ ಕಥೆ, ವೇದವ್ಯಾಸರ ಜನನ, ಮಂಜಿನ ತೆರೆ, ಶಂತು–ಸುಗಂಧಿನಿಯರ ವಿವಾಹದಲ್ಲಿನ ತೊಡಕು, ಅದು ಭೀಷ್ಮನಿಂದ ನಿವಾರಣೆಯಾದಾಗಿನ ಆತನ ಪ್ರತಿಜ್ಞೆ, ಇವೆಲ್ಲಾ ಮೂಲದಲ್ಲಿರುವಂತೆಯೇ ಕಂಡುಬರುತ್ತವೆ. ಆದರೆ ಅಲ್ಲೇ - ಬರುವ 'ಕಾಮದಹನ' ಕಥೆ ಹೊಸ ಸೇರ್ಪಡೆಯೆಂದೆನ್ನಬಹುದು.

'ವ್ಯಾಸ ಭಾರತ'ದ ಚಿತ್ರಾಂಗದ, ವಿಚಿತ್ರವೀರ ಇಲ್ಲಿ ಶಾಂತರಾಜ ಮತ್ತು ಸುಗಂಧಿನಿಯರ ಹೊಟ್ಟೆಯಲ್ಲಿ ಚಿತ್ರವೀರ ಮತ್ತು ವಿಚಿತ್ರವೀರರಾಗಿ ಹುಟ್ಟಿರುವುದನ್ನು ಕಾಣಬಹುದು. ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಸ್ವಯಂವರದಲ್ಲಿ ಗೆದ್ದು ತರುವ ಭೀಷ್ಮನು ಆ ಕನ್ಯೆಯರನ್ನು ತಮ್ಮಂದಿರಾದ ಚಿತ್ರಾಂಗದ, ವಿಚಿತ್ರವೀರರಿಗೆ ಮದುವೆ ಮಾಡಲು ಯೋಜಿಸುವಾಗ, ಅಂಬೆ ತಾನು ಶಾಲ್ವ ರಾಜನನ್ನು ಮನಸ್ಸಿನಲ್ಲಿಯೇ ಪತಿಯಾಗಿ ವರಿಸಿದ್ದಾಗಿಯೂ, ತನ್ನ ತಂದೆಯ ಇಷ್ಟವೂ

ಅದೇ ಆಗಿತ್ತೆಂದೂ, ವಿಚಾರವಂತ ಭೀಷ್ಮ ಅದರಂತೆ ನಡೆಯಬೇಕೆಂದು ಪ್ರಾರ್ಥಿಸುತ್ತಾಳೆ. ಆಗ ಭೀಷ್ಮನು ಶಾಲ್ವನ ಹತ್ತಿರಕ್ಕೆ ಅವಳನ್ನು ಕಳುಹಿಸಿಕೊಟ್ಟು, ಉಳಿದಿಬ್ಬರನ್ನು ತಮ್ಮಂದಿರಿಗೆ ಮದುವೆ ಮಾಡಿಸುತ್ತಾನೆ. ಶಾಲ್ವನಾದರೂ ಅಂಬೆಯನ್ನು ತಿರಸ್ಕರಿಸಿ, ಆಕೆ ಪರಶುರಾಮನನ್ನು ಆಶ್ರಯ ಬೇಡಲು ಭೀಷ್ಮ ಪರಶುರಾಮರಿಗೆ ಯುದ್ಧ ನಡೆದು, ಪರಶುರಾಮರು ಭೀಷ್ಮರಿಗೆ ಶಸ್ತ್ರಾಸ್ತ್ರಗಳನ್ನು ನೀಡುತ್ತಾರೆ. ಇದರಿಂದ ಕುಪಿತಳಾದ ಅಂಬೆ ಕೊಂಡಕೆ ಹಾರುವಾಗ ಮುಂದಿನ ಜನ್ಮದಲ್ಲಿ ಸೇಡು ತೀರಿಸಿಕೊಳ್ಳುವುದಾಗಿ ತಿಳಿಸುವ ಚಿತ್ರ 'ಜನಪದ ಮಹಾಭಾರತ'ದಲ್ಲೂ ಮೂಡಿಬಂದಿದೆ. ಸುವರ್ಣಕೇಶಿ, ಸ್ವೇತುಕೇಶಿ, ಓಂಕಾರಕೇಶಿ ಎಂಬ ಹೆಸರಿನ ಗುರುಶಿಷ್ಯರು ಮೂರು ಲೋಕ ಗೆಲ್ಲುವ ಆಸೆಯಿಂದ ದೇವಲೋಕಕ್ಕೆ ನುಗ್ಗಲು, ನಾರಾಯಣ ಮೋಹಿನಿ ರೂಪ ತಾಳುವ, ತಾನು ಕನಕರಾಜನ ಮಗಳೆಂದೂ, ಸುವರ್ಣಕೇಶಿಯ ಐದು ಜನ ಮಕ್ಕಳಲ್ಲಿ ಮೋಹ ಉಂಟು ಮಾಡಿ, ಬಡಿದಾಡಿ ಸಾಯಲು ಕಾರಣವಾಗುವ ಚಿತ್ರವಿದೆ. ಇದರಿಂದಾಗಿ ಸುವರ್ಣಕೇಶಿ ಕುಪಿತನಾಗಿ ಬ್ರಹ್ಮನಿಂದ ನೂರೊಂದು ಮಕ್ಕಳ ವರಪಡೆದು ನಾಗರುಸಿಗಳ ಕಣ್ಣನ್ನು ಕಿತ್ತ ಶಾಪದಿಂದ ಮುಂದಿನ ಜನ್ಮದಲ್ಲಿ ಕುರುಡನಾಗಲು ಮತ್ತು ಆತನ ಪತ್ನಿ ಚಿತ್ರಾಂಗಿ ಹೊಟ್ಟೆಯಲ್ಲಿ ಸೇರಿದ ನಾಗಸರ್ಪದ ನೂರೊಂದು ಮೊಟ್ಟೆಯಿಂದ ಮಕ್ಕಳಾಗುವುದು. ಆತನ ತಮ್ಮನಾದ ಸ್ವೇತುಕೇಶಿ ನಾಗವೇಣಿಯನ್ನು ಬಯಸಲಾಗಿ 'ಮಾನವರಾಗಿ ಹುಟ್ಟಿ ಪರರ ಹೆಂಡತಿ ಬಯಸಿದ ನಿಮಗೆ ಸಂಸಾರ ಸುಖ ಇಲ್ಲದಾಗಲಿ' ಅಂತ ಶಾಪ ನೀಡುವ ಚಿತ್ರ ಹೊಸತಾಗಿದ್ದು ಕೌರವ-ಪಾಂಡವರ ಮುಂದಿನ ವೃತ್ತಾಂತದ ಸೂಚನಾಫಲಕವಾಗಿ ಅನಾವರಣವಾಗುತ್ತದೆ.

ಹೀಗೆ ಹೊಸ ಸೇರ್ಪಡೆಗಳು ಮೂಲಕ್ಕೆ ನವೀನ ರೀತಿಯ ಅಭಿವ್ಯಕ್ತಿಯನ್ನು ನೀಡುತ್ತಾ ಸಾಗುವ ಪ್ರಕ್ರಿಯೆಯ 'ಜನಪದ ಮಹಾಭಾರತ'ದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಇಂತಹ ವೃತ್ತಾಂತಗಳಲ್ಲಿ ಕುಂತಿ ಜನ್ಮವೂ ಒಂದು. 'ಕುಂತಿಯು ಭೂಮಿಯ ಮಗಳು ಎಂದು ಕಲ್ಪಿಸಿರುವುದು ಹೊಸದು' ಎಂಬ ಪ್ರೊ.ರಾಗೌ ಅವರ ಅಭಿಪ್ರಾಯಕ್ಕೆ ಸಕಾರಣವಾಗಿಯೇ 'ವಚನಭಾರತ'ದಲ್ಲಿ ಶೂರರಾಜಮಗಳು; ವಸುದೇವ ತಂಗಿ; ಕುಂತಿಭೋಜನ ಸಾಕು ಮಗಳು-ಪೃಥೆ ಎಂಬ ವಿವರಣೆಯನ್ನು ಕೊಟ್ಟಿರುವುದರಿಂದಾಗಿ ಇಲ್ಲಿ 'ಪೃಥೆ' ಎಂಬುದು ಭೂಮಿಯ ಮತ್ತೊಂದು ರೂಪವನ್ನೇ ತಿಳಿಸುವಂತಹದ್ದಾಗಿದ್ದು, ಹೊಸತಾಗಿಯೂ ಹಳೆಯದನ್ನೇ ಕಟ್ಟಿಕೊಡುವಂತಹುದಾಗಿದೆ ಎನ್ನಬಹುದು. ಅಲ್ಲದೆ ಆಕೆ 'ನೇಗಿಲ ಕುಳಕ್ಕೆ ಸಿಕ್ಕಿದವಳು' ಎಂಬ ಸಂದರ್ಭ ವಿವರಣೆಯೂ ಮತ್ತಷ್ಟು ಪುಷ್ಟಿಯನ್ನೀಯುತ್ತದೆ. ಹೀಗೆ 'ಜನಪದ ಮಹಾಭಾರತ'ವು ಕೊಂತಮ್ಮನ ಜನನವನ್ನು ಇಡೀ ಒಂದು ಒಕ್ಕಲುತನದ ಆಚರಣೆಯ ಮೂಲಕ ಕಟ್ಟಿಕೊಡುತ್ತದೆ. ಭೂಮಿಯನ್ನು ಹದಮಾಡುವುದರಿಂದ ಅಲ್ಲಿ ನಡೆಯುವ ನೆನಕೆಯು ರೈತನ ಬದುಕಿನ ಒಟ್ಟು ಸಾರವನ್ನೇ ಪ್ರತಿಬಿಂಬಿಸುತ್ತದೆ. ಇನ್ನು ರೋಗಗ್ರಸ್ತ ಗಂಡನೊಂದಿಗೆ ಸಂಸಾರ ನಡೆಸಿಯೂ

ಪೂರ್ವಾಚಾರದ ಕರ್ಮಫಲವೋ, ಸುಫಲವೋ ಆದ ದೂರ್ವಾಸರ ವರದ ಸಹಾಯದಿಂದ ಮಕ್ಕಳನ್ನು ಪಡೆಯುವುದು ಅವುಗಳ ಫಲದ ನಿಜಕ್ಕಾಗಿ ಅಲ್ಲದೆ ಪಾಂಡುವಿನ ಕೊರಗಿಗೆ ಎಂಬುದು ಮುಖ್ಯವಾದ ಅಂಶ. ಕಾರಣ ಪಾಂಡುವು ಶಿಕಾರಿಗೆ ಹೋಗಿದ್ದು, ಅಲ್ಲಿ ಎರಡು ಹುಲ್ಲೆಗಳು ಸುಖದಲ್ಲಿರಲು ಪಾಂಡುವು ಅವುಗಳ ಮೇಲೆ ಬಾಣ ಪ್ರಯೋಗ ಮಾಡುತ್ತಾನೆ. ಆಗ ಗಂಡು ಹುಲ್ಲೆ ಸತ್ತು ಹೋಗುತ್ತದೆ. ಇದರಿಂದ ಹೆಣ್ಣು ಹುಲ್ಲೆಯು ಶಾಪಕೊಡುವುದು. ಈ ಹುಲ್ಲೆಗಳು ಶಿವ-ಪಾರ್ವತಿಯರಾಗಿದ್ದು, ಪಾರ್ವತಿಯೇ ಶಾಪ ಕೊಡುವ ಚಿತ್ರ ಕಥಾಕಾರನ ಶಿವ-ಪಾರಮ್ಯವನ್ನು ಪ್ರದರ್ಶಿಸುತ್ತದೆ.

ಹೀಗೆ ಕುಂತಿಯು ಗಂಡನನ್ನು ಕಳೆದುಕೊಂಡು ಮಕ್ಕಳ ಮೇಲಿನ ಮಮತೆಯಿಂದ ಕಾಡುಮೇಡು ಅಲೆದು ಅನುಭವಿಸಿದ್ದನ್ನು ಹೇಳಲಾರದೇ ತೊಳಲಾಟ, ಸಂಕಟಗಳಿಂದಲೇ ಬದುಕುವವಳಾಗಿದ್ದಾಳೆ. ಇಡೀ ಕಾವ್ಯದೊಳಗೆ ಒಂದು ಮೂಲೆಯಲ್ಲಿ ಅತ್ಯಂತ ಮಾನವೀಯ ನಡವಳಿಕೆಗಳನ್ನು ಪ್ರಚುರಪಡಿಸುತ್ತಲೇ ಆಪ್ತಳಾಗುವ ಚಿತ್ರ ಕಾವ್ಯದಲ್ಲಿ ಸಾಕಷ್ಟು ಸಿಗುವುದುಂಟು.

'ಮಹಾಭಾರತ'ದ ಪ್ರಮುಖ ಘಟನೆಗಳಿಗೆ ಮೂಲ ಪ್ರೇರಣೆಯನ್ನು ನೀಡುವ ಪ್ರಸಂಗವು ಶಕುನಿ ಮತ್ತು ಅವನ ಸಹೋದರನನ್ನು ಸೆರೆಯಲ್ಲಿಟ್ಟ ಸನ್ನಿವೇಶವಾಗಿ ಬರುತ್ತದೆ. ಇದೇ 'ಮಹಾಭಾರತ' ನಡೆಯಲು ಮೂಲ ಬೀಜಾಣುವಾಗುವುದು ಎನ್ನಬಹುದು. ಇದನ್ನು ಜನಪದರು ತಮ್ಮದೇ ಆದ ದಾಟಿಯಲ್ಲಿ 'ಮೂಲ ಮಹಾಭಾರತ'ದಲ್ಲಿ ಇಲ್ಲದ ಅನೇಕ ಹೊಸ ಅಂಶಗಳನ್ನು ಹಾಗೂ ಭಿನ್ನ ಆಶಯಗಳನ್ನು ಕಟ್ಟುತ್ತ ದುರ್ಯೋಧನನ ಮೇಲೆ ಸೇಡಿನ ಕಿಡಿಯನ್ನು ಶಕುನಿ ತುಂಬಿಸಿಕೊಳ್ಳಬೇಕಾಗಿ ಬಂದ ಬಗೆಯನ್ನು ಸ್ವಾರಸ್ಯಪೂರ್ಣವಾಗಿ ನಿರೂಪಿಸಿರುವುದು ಜನಪದ ಮಹಾಭಾರತದಲ್ಲಿ ಗೋಚರಿಸುತ್ತದೆ. ಗಾಂಧಾರ ರಾಜನ ನೂರೊಂದು ಜನ ಗಂಡು ಮಕ್ಕಳಲ್ಲಿ ಶಕುನಿ ಕಿರಿಯವನೂ ಎಂಬುದಲ್ಲದೆ ಆತ ಚಿಕ್ಕಂದಿನಲ್ಲಿಯೇ ಕುಲಗೇಡಿ ಕೆಲಸದಲ್ಲಿ ನಿರತನಾಗಿ ತಂದೆಯಿಂದಲೇ ತಿರಸ್ಕೃತನಾಗಿ, ಕೊನೆಗೆ ಊರುಬಿಟ್ಟು ಬರುವ ವೇಳೆಯಲ್ಲಿ ಮಂತ್ರವಾದಿ ಭೂದೇರನಾಥನ ಸಾಮೀಪ್ಯ ಒದಗಿಬಂದು ಕೊನೆಗೆ ತನ್ನ ತಂದೆ-ತಾಯಿ-ಕುಟುಂಬದವರನ್ನು ಕಾಣಬೇಕೆಂಬ ಬಯಕೆಯಿಂದ ಆ ಮಂತ್ರವಾದಿಯ ಮಾಯಗನ್ನಡಿಯಲ್ಲಿ ಅವರು ಕಷ್ಟದಲ್ಲಿರುವುದನ್ನು ಕಂಡು ತಾನು ವಾಪಸ್ಸಾಗುವ ಮೊದಲು, ಆ ಮಂತ್ರವಾದಿಯ ಕೃಪೆಯು ತನ್ನ ಆಟದ ಪಗಡೆಯ ಕಾಯಿಗಳಾಗಿ ದೊರೆಯುವುದು, ಅನಂತರ ತಂದೆಯನ್ನು ಕಾಣಲು ಬಂದಾಗ ಅವನನ್ನು ಕಂಡು ಗಾಂಧಾರ ಪ್ರಾಣ ಬಿಡುವನು. ಹೀಗೆ ಶಕುನಿ ತನ್ನ ಹಿರಿಯ ಸಹೋದರರೊಂದಿಗೆ ತನ್ನ ಅಕ್ಕನ ಮಕ್ಕಳಾದ ನೂರೊಂದು ಜನ ಕೌರವರ ನಾಮಕರಣಕ್ಕಾಗಿ

ಬಂದು ಹುಟ್ಟುಕುರುಡ ಭಾವ ಧೃತರಾಷ್ಟ್ರ, ಕಟ್ಟು ಕುರುಡಿ ಅಕ್ಕ ಗಾಂಧಾರಿಯರ ಮಕ್ಕಳನ್ನೆಲ್ಲಾ ತಮ್ಮ ಅಧೀನಕ್ಕೆ ಒಳಗಾಗಿಸಿ ತಾವೇ ಮೆರೆಯಬೇಕೆಂಬ ಕನಸಿಗೆ ಶ್ರೀಕೃಷ್ಣನ ಕಲ್ಲುಮೊಳೆ ಪ್ರಸಂಗವು ಶಕುನಿ ಅನಂತರದಲ್ಲಿ ತನ್ನ ಎಲ್ಲ ಕಾರ್ಯಗಳನ್ನು ನಡೆಸುವ ವೇಳೆಯಲ್ಲಿ ಅಡೆತಡೆಯಾಗುವ ಸೂಚನೆಯಾಗಿಯೇ ಕಾಣಬರುವುದು.

ಶಕುನಿ ಮತ್ತು ಆತನ ಸಹೋದರರ ಕುತಂತ್ರವರಿತ ಕೌರವರು ಅವರನ್ನು ನೆಲಮಾಳಿಗೆಯಲ್ಲಿ ಕೂಡಿ ಅಗಳು ಅನ್ನ ನೀಡುವುದು, ಅದನ್ನೆಲ್ಲಾ ಶಕುನಿ ಒಬ್ಬನಿಗೇ ನೀಡುವ ಚಿತ್ರ ಮೂಲದಲ್ಲಿದ್ದರೂ, ಏಕೆ ಅವನಿಗೇ ನೀಡಬೇಕಾಯಿತು ಎನ್ನುವುದಕ್ಕೆ 'ಜನಪದ ಮಹಾಭಾರತ' 'ನೆಲ್ಲೀಮೂಳೆ'ಗೆ ದಾರ ಪೋಣಿಸುವ ಪ್ರಸಂಗವನ್ನು, ಭೂದೇರನ ಪ್ರೇರಣೆಯ ಮಂತ್ರದಿಂದ ಶಕುನಿಯು ದಾರ ಪೋಣಿಸಲು ಇರುವೆಯೊಂದು ಅನುವಾಗಿ ಅದು ಮಜ್ಜೆಯನ್ನು ಕೊರೆಯುವ ಚಿತ್ರವು ಶಕುನಿಯು ಕೌರವರ ನಾಶಕ್ಕಾಗಿ ಕೊರಗುವ, ನಿತ್ಯವೂ ಒಂದೊಂದು ಕುತಂತ್ರವನ್ನೇರ್ಪಡಿಸುವ ಚಿತ್ರಕ್ಕೆ ಬರೆದ ಹೊಸ ಭಾಷ್ಯವಾಗಿ ಗೋಚರಿಸುತ್ತದೆ. ಅಲ್ಲಿಯೇ ಭೂದೇರನಾಥನಿಂದ ಪಗಡೆ ಆಟಕ್ಕೆ ವರವನ್ನು ನೆನೆದು ಅಣ್ಣಂದಿರ ಮೂಳೆಗಳನ್ನೆ ಪಗಡೆ ಕಾಯಿಗಳನ್ನಾಗಿ ಮಾಡಿಕೊಂಡು ಇಡೀ ಜೀವಮಾನವೇ ಕೌರವರ ಅಧಃಪತನಕ್ಕೆ ಕಾಯುವ ಚಿತ್ರವು ಕಂಡುಬರುತ್ತದೆ.

ಹೀಗೆ ತನ್ನ ನೂರು ಸಹೋದರರು ತನ್ನ ಕಣ್ಮುಂದೆ ಸತ್ತ ದೃಶ್ಯ ಇನ್ನೂ ಹಸಿಯದಾಗಿದ್ದರೂ ಕೌರವನ ಮೇಲೆ ಸೇಡಿನ ಭಾವನೆ ಇದ್ದರೂ ಅದಾವುದನ್ನೂ ತೋರ್ಪಡಿಸದೆ ಆತ ದುರ್ಯೋಧನನೊಂದಿಗೇ ಬೆರೆಯುವುದು, ಹಾಗೆಯೇ ದುರ್ಯೋಧನನೂ ಅವನು ಹೇಳುವಂತೆ ನಡೆದುಕೊಳ್ಳುವ ರೀತಿ ಮುಂದೆ ಘಟಿಸುವ ಅನೇಕ ಘಟನೆಗಳಿಗೆ ಆರಂಭದಲ್ಲೇ ಭೂಮಿಕೆಯನ್ನು ಜನಪದರು ಸಿದ್ಧಪಡಿಸುವ ಬಗೆ ಗಮನಾರ್ಹವಾದುದು. ಆದರೆ ಅಲ್ಲಿಂದ ಮುಂದಕ್ಕೆ ಶಕುನಿ ಅನೇಕ ತಂತ್ರಗಳನ್ನು ಹೂಡುತ್ತಲೇ ಕೊನೆಗೆ ಮಂತ್ರವಾದಿ ಕೊನುಗಯ್ಯನ ಪರ್ವದಲ್ಲಿ ಆತನ ಮಾಯದ ಮೋಡಿಗೆ 'ಗುಳ್ಳೇನರಿ'ಯಾಗುವ ಪ್ರಸಂಗವು ಶಕುನಿಯ ಪೂರ್ಣಾವೃತ್ತಿಯ ಅಭಿವ್ಯಕ್ತಿಯನ್ನು ಅನಾವರಣಗೊಳಿಸುವ ಹೊಸ ತಂತ್ರವಾಗಿದ್ದು ಇದು ಹೊಸತಾಗಿಯೂ, ಮಂತ್ರವಾದಿಗಳ ಜೊತೆಗಿನ ಒಡನಾಟವೂ ಕಥಾಕಾರನ ಸೇರ್ಪಡೆಯಾಗಿಯೂ ಜನಪದರು ನಂಬುವ ಮಾಟ-ಮಂತ್ರಗಳ ಚಿತ್ರಣವಾಗಿಯೂ ಕಂಡುಬರುತ್ತದೆ.

ದ್ರೌಪದಿ ಸ್ವಯಂವರಕ್ಕೂ ಒಂದು ತಾತ್ವಿಕ ನೆಲೆಯನ್ನು 'ಜನಪದ ಮಹಾಭಾರತ' ಕಟ್ಟಿಕೊಡುತ್ತದೆ. ಅಂಗಗೊರಬನ ಪರ್ವವೇ ಅದನ್ನು ಸೂಚಿಸುತ್ತದೆ. ವಚನಭಾರತದಲ್ಲಿ ಒಬ್ಬ ಬ್ರಾಹ್ಮಣನಿಂದ ದ್ರೌಪದಿ ಸ್ವಯಂವರದ ವಿಚಾರ ತಿಳಿದರೆ, ಜನಪದ ಮಹಾಭಾರತದಲ್ಲಿ

ನಾರದರಿಂದ ತಿಳಿದುಬರುತ್ತದೆ. ಅನಂತರದಲ್ಲಿ ಪಾಂಡವರು ಏಕಚಕ್ರನಗರ ಬಿಟ್ಟು ಪಾಂಚಾಲನಗರಕ್ಕೆ ಬಂದು ಕುಂಬಾರನ ಕಾರ್ಯಶಾಲೆಯಲ್ಲಿ ಉಳಿದುಕೊಳ್ಳುವ ಚಿತ್ರ 'ವಚನಭಾರತ'ದಲ್ಲಿ ಕಂಡುಬಂದರೆ 'ಜನಪದ ಮಹಾಭಾರತ'ದಲ್ಲಿ ಏಕಚಕ್ರನಗರಕ್ಕೆ ಬರುವ ಮೊದಲೇ ಕುಂಬಾರ ಗುಂಡಯ್ಯನ ಮನೆಯಲ್ಲಿ ಉಳಿದುಕೊಳ್ಳುವ ಪ್ರಸಂಗ ಚಿತ್ರಿತವಾಗಿದೆ. ಅರ್ಜುನ ಯಂತ್ರದಲ್ಲಿ ರಂಧ್ರವನ್ನು ಭೇದಿಸುವುದರ ಮೂಲಕ 'ವಚನಭಾರತ'ದಲ್ಲಿ ದ್ರೌಪದಿಯನ್ನು ಗೆದ್ದರೆ, ಜನಪದದಲ್ಲಿ ಕಣ್ಣಿಗೆ ಕಾಣದ, ಕಿವಿಗೆ ಕೇಳುವ ಮಾರೀಚ ಕಾಗೆಯನ್ನು ಶಬ್ಧವೇದಿಯಿಂದ ಕೊಲ್ಲುವ ಚಿತ್ರದಿಂದ ದ್ರೌಪದಿ ಒಲಿಯುವಳು. ದ್ರೋಪತಿ ಐವರಿಗೂ ಸತಿಯಾದದ್ದು ಎರಡರಲ್ಲೂ ಒಂದೇ ತೆರನಾಗಿ ಕಂಡುಬಂದಿದೆ.

'ಮಹಾಭಾರತ'ದ ಕಥಾಂತರಗಳು ಹೆಚ್ಚಾಗಿ ಪುರಾಣಕಾವ್ಯದ ವಿಸ್ತಾರತೆ ಪಡೆದುಕೊಂಡಿರುವುದಲ್ಲದೆ, ಅಲ್ಲಲ್ಲಿನ ನಿಷ್ಕ್ರಿಯವಾದ ಭಾಗವನ್ನು ತುಂಬಲೇ ಇವೆಯೇನೂ ಎಂಬಂತೆ ಉಪಕಥೆಗಳನ್ನು ಕಾಣಬಹುದು. 'ವಚನಭಾರತ'ದಲ್ಲಿ ನಳ,ಸಾವಿತ್ರಿ, ಋಷ್ಯಶೃಂಗ, ಶಿಬಿ, ಪ್ರಸಂಗಗಳು ಪಾಂಡವರ ದುಃಖಕ್ಕೆ ಸಮಾನಾಂಶಗಳಾಗಿ ಒದಗಿಬಂದು ಅವರಲ್ಲಿನ ದುಃಖ ಹಿಂಗಿತಕ್ಕೆ ಕಾರಣವಾಗುವಂತೆ 'ಜನಪದ ಮಹಾಭಾರತ'ದಲ್ಲಿ ಅನೇಕ ಉಪಕಥೆಯ ಬಿಳಲುಗಳು ಕಾಣಿಸಿಕೊಳ್ಳುವುದುಂಟು. ಭೀಷ್ಮರಿಗೆ ಓತಿ ಶಾಪ ಕೊಡುವುದು, ಭೀಮ ನಾಯಿಗಳಿಗೆ ಶಾಪ ಕೊಡುವುದು, ಶ್ರೀಕೃಷ್ಣ ಈರುಳ್ಳಿ ಸೃಷ್ಟಿಸುವುದು, ನಿಜತಾಯಿ ಪರ್ವ, ಸೀಲಾನದಿ ಪ್ರಸಂಗ, ಭೀಮಣ್ಣ ಗೇಯುವುದು, ಉಪಕೀಚಕರ ಪರಸಂಗ, ಅರ್ಧಕೃಷ್ಣನ ಪರ್ವ, ತ್ರಿಕಾಲಜ್ಞಾನಿ ಸಹದೇವನ ಪರ್ವ ಹೀಗೆ ಅನೇಕ ಹೊಸ ಸೇರ್ಪಡೆಗಳು ಕಾವ್ಯದಲ್ಲಿ ಕಂಡುಬರುತ್ತವೆ. ಇಂಥ ಸೇರ್ಪಡೆಗಳಲ್ಲಿ 'ವೇದಗಳು ನೆಗಾಡಿದ' ಪ್ರಸಂಗವೊಂದು ಬ್ರಹ್ಮನಿಗೇ 'ನಾನು' ಎಂಬ ಅಹಂಕಾರ ಹೆಚ್ಚಾಗಿ ಎಲ್ಲವೂ ನನ್ನಿಂದಲೇ ಎಂದುಕೊಳ್ಳುವಾಗ ವೇದಗಳು ನೆಗಾಡಿದವಂತೆ. ಇದರಿಂದ ತನ್ನ ಅರಿವನ್ನು ಕಾಣಲು ವಿಷ್ಣುವಿನೊಡನೆ ಹೋರಾಡಿ ಶಿವನಿಂದ ಶಿರಸ್ಛೇದನವಾಗಿ ಭೂಮಿಯಲ್ಲಿ ಪೂಜೆಗೊಳ್ಳದಿರುವಂತೆಯೂ ಅದೇ ಶಿವನ ಬ್ರಹ್ಮಕಪಾಲಕ್ಕೆ ಕಾರಣವಾಗುವ ಚಿತ್ರವನ್ನು ಕಟ್ಟಿಕೊಡುತ್ತದೆ.

'ಜನಪದ ಮಹಾಭಾರತ'ದ ಜೋಗಿ ಪ್ರಸಂಗವು 'ವ್ಯಾಸಭಾರತ'ದಲ್ಲಿ ಇಲ್ಲದಿದ್ದರೂ ಜನಪದ ಕಥನಕಾರನು ಹೊಸ ಸೇರ್ಪಡೆಯೊಂದನ್ನು ಅದಕ್ಕೆ ಸಕಾರಣಗಳನ್ನೂ ನೇಯ್ದು ಮೂಲಕ್ಕೆ ಧಕ್ಕೆ ಬಾರದ ಹಾಗೆ ನೇರ್ಪುಗೊಳಿಸಿದ್ದಾನೆ. ಅರ್ಜುನ ಜೋಗಿಯಾಗುವುದು ಏತಕ್ಕೆ? ಅದಕ್ಕಿದ್ದ ತಾತ್ವಿಕತೆಗಳೇನು? ಅವನ ಆ ವೇಷದಿಂದ ಆಗುವಂಥ ಕಾರ್ಯಗತಿಗಳೇನು? ಎಂಬುದಕ್ಕೆ ಕವಿ ತಕ್ಕ ಮಾರ್ಪಾಟುಗಳೊಡನೆ ಸಿದ್ಧ ಉತ್ತರಗಳನ್ನು ಕಾವ್ಯದಲ್ಲಿ

ನೀಡಲಾಗಿದ್ದರೂ, ಇದರ ಅವಶ್ಯಕತೆ ಇತ್ತೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. 'ಈ ಎಲ್ಲ ಕಥೆಗಳು ಮಧ್ಯಪ್ರವೇಶಿಸಿದ್ದರಿಂದ ಕಾವ್ಯದ ಪ್ರಧಾನ ವಸ್ತುವಿನ್ಯಾಸಕ್ಕೆ ಅಡ್ಡಿಯುಂಟಾಗಿದೆ' ಎಂಬ ರಾಗೌ ಅವರ ನುಡಿಗಳು ಉಚಿತವೆನಿಸಿದರೂ ಕವಿ(ಗಾಯಕ)ಯ ಉದ್ದೇಶವು ಸ್ಥಳೀಯತೆಯ ಮಹತ್ವ ಸಾರುವ ಉದ್ದೇಶದೊಡನೆ, ಎಲ್ಲವೂ ಒಂದೇ ಎಂಬ ಭಾವವೂ ಮುಖ್ಯವೆಂದೇ ತಿಳಿಯುವುದು ಸರಿಯೇನೊ ಎನಿಸುತ್ತದೆ. ಅಂದರೆ ತನ್ನ ಸುತ್ತಲಿನ ಪ್ರದೇಶಗಳಲ್ಲಿಯೇ ಆತನನ್ನು (ಜೋಗಿಯನ್ನು) ಸುತ್ತಾಡಿಸುವುದಲ್ಲದೆ, ಪೌರಾಣಿಕ ಕಲ್ಪನೆಯೊಳಗೆ ಆತನನ್ನು ಕಟ್ಟುವ ಯತ್ನವನ್ನು ಗಮನಿಸಿದರೆ ಮೂಲಕ್ಕೆ ಅಥವಾ ಕಾವ್ಯದ ದೃಷ್ಟಿಯಿಂದ ಆತನಿಗೆ ಯಾವುದು ಮುಖ್ಯವೆಂಬ ಅರಿವಿಗಿಂತಲೂ ತಿಳಿದ ವಿಚಾರವನ್ನು ಬಿತ್ತರಿಸುವ ಕಾತುರವೇ ಎದ್ದು ಕಂಡುಬರುತ್ತದೆ. ಇದರಿಂದಾಗಿ, ಸಂಪ್ರದಾಯ–ನಂಬಿಕೆ ಆಚರಣೆಗಳ ಬಗೆಗಿನ ಜನಪದ ಅಭಿವ್ಯಕ್ತಿಯೊಂದು ಅನಾವರಣಗೊಂಡಿದೆ ಎಂದು ಅರಿಯುವುದು ಮುಖ್ಯವೆನಿಸುತ್ತದೆ.

ಮೂಲದಂತೆಯೇ ಕೃಷ್ಣನನ್ನು ಕಾವ್ಯದಲ್ಲಿ ಹೆಚ್ಚು ಕ್ರಿಯಾಶಾಲಿಯಾಗಿಸುವುದನ್ನು ಜನಪದ ಕಥನಕಾರ ಮರೆಯುವುದಿಲ್ಲ. ಕರ್ಣಭೇದನ, ಸಂಧಾನ, ಸಾರಥಿತನ, ಪಾಂಡವರ ಪಕ್ಷಪಾತಿತನ, ದ್ರೌಪದಿಯ ರಕ್ಷಾಕವಚವಾಗಿ, ವಿಶ್ವರೂಪದರ್ಶನ, ಈರುಳ್ಳಿ ಸೃಷ್ಟಿಸಿದ ಪರ್ವ ಹೀಗೆ ಅನೇಕ ಪ್ರಸಂಗಗಳಲ್ಲೂ ಅವನನ್ನು ಉತ್ತಮವಾಗಿಯೇ ಚಿತ್ರಿಸುವುದರೊಂದಿಗೆ ಅಲ್ಲಲ್ಲಿ ಆತನ ಕುಚೇಷ್ಟೆಯನ್ನು ಸಕಾರಣವಾಗಿಯೇ ತೆರೆದು ತೋರುವುದನ್ನು ಕವಿ ಮರೆತಂತಿಲ್ಲ. ಅಂತಹ ಪ್ರಸಂಗಗಳಾಗಿ ಅರ್ಧಕೃಷ್ಣನ ಪರ್ವ, ಕೃಷ್ಣಾರ್ಜುನ ಕಾಳಗ, ಭದ್ರಬಾಹು ಕಾಳಗಗಳಲ್ಲಿನ ಆತನ ಧೋರಣೆಗಳನ್ನು ತರುತ್ತಾನೆ. ಮತ್ತೆಲ್ಲೋ ಶ್ರೀಕೃಷ್ಣನೇ ಕವಿಗೆ ಹೆಚ್ಚು ಆಪ್ತನಾಗಿಯೂ, ಅವನ ಲೀಲಾವಿನೋದವೇ ಕಥೆಗೆ ಕಾರಣ ಎಂಬುದು, ವಿಧಿ ನಿಯಮವೆಂಬ ಆಪ್ತ ನಂಬಿಕೆಯೂ ಅಲ್ಲಲ್ಲಿ ಸುಳಿಯುವುದನ್ನು ಕಾಣಬಹುದು. ಅದನ್ನು ಕೃಷ್ಣನ ಬಾಯಿಯಿಂದಲೇ "ಕೊಲ್ಲುವವನು ನೀನಲ್ಲ, ಕೊಲ್ಲಿಸುವವನೂ ನಾನಲ್ಲ, ಅದಕ್ಕೆಲ್ಲ ಆ ಮೇಲಿರೋ ವಿಧಿ ಕಾರಣ; ಭಗವಂತನಾದ ನಾನೂ ಅದರ ಅಧೀನ, ನಾನೇ ಆ ಶಕ್ತಿ ಆ ಶಕ್ತಿಯೇ ನಾನು" ಎನ್ನುವುದರೊಂದಿಗೆ ಬೆಸೆಯುತ್ತಾನೆ. ಆದರೂ ಅಲ್ಲಲ್ಲಿ ಶಿವಪಾರಮ್ಯವನ್ನು ತರುವುದು ಸ್ಥಳೀಯತೆಯೆಡೆಗೆ ಆತ ವಾಲಿದಾಗ ಉಂಟಾದದ್ದು ಎಂದೆನ್ನಬಹುದಾಗಿದೆ.

"ಪ್ರಾಚೀನ ಮಹಾಕೃತಿಗಳು ಬೇರೆ ಬೇರೆ ಯುಗದ ಮಹಾಕವಿಗಳ ಅಂತರಂಗವನ್ನು ಹೊಕ್ಕು ಹೊರ ಬರುವುದರಿಂದ ಆಯಾ ಯುಗದ ಪ್ರಮುಖ ಮಿಡಿತ ತುಡಿತಗಳನ್ನು ದಾಖಲಿಸಿಕೊಂಡು ನಿತ್ಯನೂತನವಾಗುತ್ತದೆ."[೧] ಎಂಬಂತೆ ಜನಪದ ಕವಿಯು ತನ್ನ ತುಡಿತಗಳನ್ನು

[೧] ಎಚ್.ಜೆ.ಲಕ್ಕಪ್ಪಗೌಡ, ಶ್ರೀರಾಮಾಯಣದರ್ಶನಂ : ಒಂದು ವಿಮರ್ಶಾತ್ಮಕ ಅಧ್ಯಯನ, ಪು. ೧೨೦.

ಹೊಸ ವಿನ್ಯಾಸ-ವ್ಯಾಖ್ಯಾನಗಳ ರೂಪದಲ್ಲಿ ಚಿತ್ರಿಸಿರುವ ಎಷ್ಟೋ ಘಟನೆಗಳು ಕಾವ್ಯದಲ್ಲಿ ಗೋಚರಿಸುತ್ತವೆ. ಅವೆಲ್ಲವುಗಳೂ ಕಾವ್ಯದಲ್ಲಿ ಬರುವ ಪಾತ್ರ. ಸ್ಥಳಗಳೊಡನೆ ಮಿಳಿತವಾಗಿ ವಿವರಣಾತ್ಮಕವಾಗಿ ನೇಯ್ಗೆಗೊಂಡಿರುವುದುಂಟು. ಅಂದರೆ ಅವನ ಕಾಲದಲ್ಲಿ, ಬದುಕಿನಲ್ಲಿ ಕಂಡ, ಕೇಳಿದ ಎಷ್ಟೋ ಜಟಿಲತೆಗಳನ್ನು ಅಭಿವ್ಯಕ್ತಿಸಲಾಗದೇ ಅದೃಶ್ಯವಾದ ಸಂಗತಿಗಳಿಗೆ ಹೊಸ ರೂಪ ಕೊಡುವ ತುಡಿತವೂ ಕವಿಗಿರುವ ಸಾಧ್ಯತೆಯನ್ನು ನಮ್ಮ ಪೂರ್ವಿಕರು ಗಮನಿಸಿರುವಂತೆ, ತನಗೆ ಆಪ್ತವಾದೆಡೆಯಲ್ಲಿ ಮೈಮರೆಯುವ ಮಟ್ಟಿಗೂ ಆತ ಏರಬಲ್ಲವನೆಂಬುವುದು ಸತ್ಯದ ಸಂಗತಿಯಾಗಿರುವುದು. ಇಂಥ ಸಂಗತಿಯೂ ಕವಿಯನ್ನು ಕಾಡಿದ್ದಿರಬಹುದು. ಅಂಥ ಸಂದರ್ಭಗಳಲ್ಲಿ ತನ್ನ ಅಭಿರುಚಿಗೆ ಅನುಗುಣವಾಗಿ ಇರುವುದಕ್ಕೆ ಹೊಸ ರೂಪ ಕೊಟ್ಟಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಇದಕ್ಕೆ ಪೂರಕವೆಂಬಂತೆ ಪ್ರಸ್ತಾಪನೆಯಲ್ಲಿ ಪಿ.ಕೆ.ರಾಜಶೇಖರ ಅವರ 'ಗಾಯಕ ಬೆಟ್ಟದಬೀಡು ಸಿದ್ದಶೆಟ್ಟರು ತಮಗೆ ಆಶ್ರಯಕೊಟ್ಟ ಬೆಟ್ಟದಬೀಡಿನ ಗೌಡಜನಾಂಗದ ಬಗೆಗೆ ಅಪಾರ ಪ್ರೀತಿ ವಿಶ್ವಾಸವಿಟ್ಟುಕೊಂಡಿದ್ದವರು. ಆ ಕಾರಣದಿಂದ ಒಕ್ಕಲಿಗರ ವಿಚಾರ ಬಂದ ಕೂಡಲೇ ಅವರ ಔದಾರ್ಯ, ಪ್ರೀತಿ-ಅಭಿಮಾನಗಳನ್ನು ಕಲಾವಿದ ತುಂಬು ಹೃದಯದಿಂದ ಕೊಂಡಾಡುತ್ತಿರಬಹುದೇನೋ ಎನಿಸುತ್ತದೆ'' ಎಂಬ ಮಾತುಗಳು ಕಥನಕಾರನು ಅನೇಕ ತುಡಿತಗಳನ್ನು ಕಾವ್ಯದಲ್ಲಿ ತೊಡಗಿಕೊಂಡಿರುವುದರ ಸಾಧ್ಯತೆಯನ್ನು ಊಹಿಸುವುದಕ್ಕೆ ಅನುವಾಗುತ್ತವೆ.

ಕೃತಿಯ ವಿಭಾಗಕ್ರಮದಲ್ಲೆ ವಾಲುವ ಜನಪದ ಗಾಯಕನು ಮೂಲದ ಮಾದರಿಯನ್ನು ಅಲ್ಲಲ್ಲಿ ಹೊಂದುತ್ತಾ ಸಾಗಿದರೂ ಮೊದಲಿಗೆ ತನ್ನ ಉದ್ದೇಶವನ್ನು ತಿಳಿಸುವುದನ್ನು ಮರೆಯುವುದಿಲ್ಲ. ವಚನಭಾರತದಲ್ಲಿ ಆದಿಪರ್ವ, ಸಭಾಪರ್ವ, ಅರಣ್ಯಪರ್ವ, ವಿರಾಟಪರ್ವ ಹೀಗೆ ಪಾತ್ರಗಳ ಮುಖೇನ ಪರ್ವವನ್ನು ಮಾಡಿಕೊಂಡು ಅವರ ಮನೋಭೂಮಿಕೆಯಲ್ಲಿನ ಚಿತ್ತರಂಗದ ದರ್ಶನವನ್ನು ತೋರಿಸಿದರೆ, ಜನಪದ ಕವಿ ತನ್ನ ಅನುಕೂಲತೆಗೆ ತಕ್ಕಂತೆ ಪ್ರತಿಯೊಂದು ಘಟನಾಕೇಂದ್ರಿತವಾದ ನೆಲೆಯಲ್ಲಿ ಪಾತ್ರವನ್ನು ಚಿತ್ರಿಸತೊಡಗಿದ್ದಾನೆ. 'ವಚನಭಾರತ'ವು ಕೇವಲ ಸಂಗ್ರಹವಲ್ಲದೆ ಅನುವಾದ ರೂಪವಾಗಿರುವುದರಿಂದ ಅನೇಕ ಪ್ರಸಂಗಗಳು ಸಂಕುಚಿತತೆಯೆಡೆಗೆ ಸಾಗಿರುವುದುಂಟು. ಆದರೂ ಕಿರಿದರಲ್ಲಿಯೇ ಅದರ ಮಹತ್ತು-ಮಹತ್ವಗಳನ್ನು ಇಡಿಕಿರಿಸುವಲ್ಲಿನ ಕೃಷ್ಣಶಾಸ್ತ್ರಿಗಳ ಶ್ರಮ ಮೆಚ್ಚುವಂತಹದ್ದು.

'ಜನಪದ ಮಹಾಭಾರತ' ಕಾವ್ಯದ ಆರಂಭದಲ್ಲೇ ಅತ್ಯಂತ ಅರ್ಥಪೂರ್ಣವಾದ ತಿರುವನ್ನು ದೃಷ್ಟಿಯನ್ನು ಕಾವ್ಯಕ್ಕೆ ತರುವ ಕಥನಕಾರನು ಗಣಪತಿ ಭಾರತವನ್ನು ಬರೆದುಕೊಂಡ ಚಿತ್ರವನ್ನು ತಂದು ಮೊದಲಿಗೆ ಪ್ರಾರ್ಥಿಸುವುದು ಅವನನ್ನೇ, ಜೊತೆಗೆ 'ಮಹಾಭಾರತ' ಕಥೆಯ

ಬೀಜ ಭೂಮಿಗೆ ಬಿದ್ದು ಮರವಾಗಿ ಬೆಳೆದು ಬಗೆಬಗೆ ರುಚಿಯ ಫಲಗಳ ಕೊಟ್ಟಿತು' ಎಂಬ ಮಾತು ಅದಾಗಲೇ ಅನೇಕ ರೀತಿಯಲ್ಲಿ ಪ್ರಚಲಿತವಿದ್ದ 'ಮಹಾಭಾರತ'ದ ಕಥೆಯನ್ನು ತಾನು ತಿಳಿದಿದ್ದು ಅದಕ್ಕೊಂದು ಸ್ಥಳೀಯ ಸ್ಪರ್ಶದ ಆವರಣವನ್ನು ಕಟ್ಟಿಕೊಟ್ಟಿರುವುದು ಗೋಚರಿಸುತ್ತದೆ. ಕಾವ್ಯದೊಳಗೆ ಪ್ರತಿಪಾತ್ರಕ್ಕೂ ತನ್ನದೇ ಆದ ತೊಡಗನ್ನು ತೊಡಿಸುತ್ತಾ ಹೋಗುತ್ತದೆ. ಹೀಗಾಗಿ ಇದೊಂದು ಪರಿವರ್ತಿತವಾದರೂ ಅಲ್ಲಲ್ಲಿ ಅರ್ಥಪೂರ್ಣವಾದ ತಿರುವನ್ನು, ದೃಷ್ಟಿಯನ್ನೂ ಹಾಯಿಸಿರುವುದನ್ನು ಕಾಣಬಹುದಾಗಿದೆ. ದ್ರೋಣ-ದ್ರುಪತರ ಪರ್ವದಲ್ಲಿನ ಅವರಿಬ್ಬರ ಪ್ರತಿಜ್ಞೆಗಳ ಸ್ವೀಕಾರ-ತಿರಸ್ಕಾರ ಇವೆಲ್ಲಾ ಮಾಮೂಲಾಗಿ ಬಂದಿದ್ದರೂ ಸಹ ಅದಕ್ಕೊಂದು ಪೂರ್ಣಪ್ರಮಾಣದ ನೆಲೆಯನ್ನು ಜನಪದ ಕವಿ ನೀಡಿರುವುದನ್ನು ಕಾಣಬಹುದು.

'ಮಹಾಭಾರತ'ವನ್ನು ಮೊದಲಿಗೆ ವ್ಯಾಸರು ಶಿಷ್ಯರಿಗೆ ಹೇಳಿದರು, ಅವರಲ್ಲಿನ ಶಿಷ್ಯರಲ್ಲೊಬ್ಬರಾದ ಲೋಮಮಹರ್ಷಣ ಅದನ್ನು ಬ್ರಾಹ್ಮಣರಿಗೆ ಹೇಳಿದ, ಸೂತ ಪುರಾಣಿಕನಾದ ಉಗ್ರಶ್ರವ ಅದನ್ನು ತನ್ನ ತಂದೆಯಿಂದ ಕಲಿತು ಶೌನಕಾದಿ ಮುನಿಗಳಿಗೆ ಹೇಳಿದ, ಅದನ್ನು ವೈಶಂಪಾಯನ ಸರ್ಪಯಾಗ ಕಾಲದಲ್ಲಿ ಜನಮೇಜಯನಿಗೆ ಹೇಳಿದ ಎಂಬುದು ಕೃತಿಯೊಳಗಿಂದಲೇ ದೊರೆಯುವ ಮಾಹಿತಿ. ಅಂದ ಮೇಲೆ ಸಾವಿರಾರು ವರ್ಷಗಳಲ್ಲಿ ಇನ್ನಷ್ಟು ಬಾಯಿಗಳನ್ನು, ಕಿವಿಗಳನ್ನು, ತಲೆಗಳನ್ನು, ಕೈಗಳನ್ನು ಹಾದು ಈ ರೂಪಕ್ಕೆ ಇಳಿದಿರಬಹುದೆಂದು ಊಹಿಸಲು ಸಾಧ್ಯ. ಹಾಗೆಯೇ ವಾಚಕ ಮೂಲವುಳ್ಳ ಈ ಕೃತಿಗೆ ಜನಪದ ಸಂಪ್ರದಾಯದ ಕವಚವಿದ್ದು, ಕಾಲ ಪ್ರವಾಹದಲ್ಲಿ ಮೂಲಕೃತಿಗೆ ಅದೆಷ್ಟೋ ಹೊಸ ಹೊಸ ಸಂಗತಿಗಳು ಬಂದು ಸೇರಿರುವುದು ಸ್ವಾಭಾವಿಕವಾಗಿದೆ. 'ಇತಿಹಾಸ'ವೇ ಆದ 'ಮಹಾಭಾರತ'ಕ್ಕೆ ಹೆಚ್ಚು ಕಥಾನಿರಂತರದಿಂದ ಅನೇಕ ಹೊಸ ಅಂಶಗಳು ಸೇರಿಕೊಂಡಷ್ಟು ಪ್ರಮಾಣದಲ್ಲಿ ಮಿಕ್ಕ ಕಾವ್ಯಗಳಿಗೆ ಸೇರ್ಪಡೆಯಾಗಲಿಲ್ಲವೆನ್ನಬಹುದೇನೊ. ಇಂತಹ ಪ್ರಸಂಗಗಳಲ್ಲಿ ಕೆಲವು ಕಡೆ 'ಶಿಷ್ಟ ಮಹಾಭಾರತ'ಕ್ಕೆ ಸಾದೃಶ್ಯವಿದ್ದರೂ ಹಲವೆಡೆ ಭಿನ್ನತೆಯು ತನ್ನದೇ ಆದ ಆಶಯಗಳೊಂದಿಗೆ ರೂಪುಗೊಳ್ಳುವ ಸಂದರ್ಭಗಳುಂಟು. ಇಂತಹ ಕಡೆಯಲ್ಲೇ ಪಾಂಡವರು ರಾಜ್ಯಕೋಶಾಧಿಗಳನ್ನೆಲ್ಲ ಗಳಿಸಿಕೊಂಡು ಸ್ವಲ್ಪ ದಿನ ರಾಜ್ಯಭಾರ ಮಾಡಿ ಕೃಷ್ಣವಸಾನದ ಅನಂತರ ಕೊನೆಗೆ ಬೇಸರಗೊಂಡು ಸ್ವರ್ಗಾರೋಹಣಕ್ಕೆ ಹಿಮಾಲಯದ (ಸೀಲಾನದಿ) ಕಡೆಗೆ ತೆರಳುವ ಮುನ್ನ ಹಾಗೂ ನ್ಯಾಯ ನೀತಿಗಳಿಗಾಗಿ ಬದುಕಿದ ಪಾಂಡವರು ಇನ್ನೂ ಈ ಲೋಕದಲ್ಲಿ ಇದ್ದಾರೆಂದು ಜನರು ಭಾವಿಸಿಕೊಳ್ಳಲಿ ಎಂದು ಧರ್ಮರಾಯ 'ಅವರೆ'ಸಾಲನ್ನು ಬಿತ್ತಿದನೆಂದು ಹೇಳುವ ಗೀತೆ.

'ಸತ್ಯವಂತ ಪಾಂಡವರು ಸತ್ತರೆಂದೆನಬೇಡಿ

ಸತ್ತಾರೆ ಈ ಲೋಕ ಉಳಿಯಾವು । ಪಾಂಡವರು

ಅವರು ಬಿತ್ತಿ ಹೋಗುವರೆ ಅವರೆಯಾ' – ಎನ್ನುವುದು ರೈತಾಪಿ ಜನರು ಇಂದಿಗೂ ಆಚರಿಸುವ ಆಚರಣೆಯನ್ನು ನೆನಪಿಗೆ ತರುವಂಥದ್ದಾಗಿದೆ.

'ವಚನಭಾರತ'ದ ಆದಿ ಪರ್ವದಲ್ಲಿ ಬ್ರಾಹ್ಮಣರ ಹುಡುಗ ನುಡಿಯುವ "ಅಪ್ಪ ಅಳಬೇಡ! ಅಮ್ಮಾ ಅಳಬೇಡ! ಅಕ್ಕಾ ಅಳಬೇಡ!" ಎಂದು ಸಮಾಧಾನಿಸುತ್ತ ಒಂದು ಕಡ್ಡಿಯನ್ನು ಹಿಡಿದುಕೊಂಡು 'ಮನುಷ್ಯನನ್ನು ತಿನ್ನುವ ರಾಕ್ಷಸನನ್ನು ನಾನು ಇದರಿಂದ ಹೊಡೆದು ಹಾಕುತ್ತೇನೆ! ಅಳಬೇಡಿ' ಎನ್ನುವ ಚಿತ್ರವು ಜನಪದ ಕವಿ ತರುವ 'ಮರುಜವಳಿಕಡ್ಡಿ' ಪ್ರಸಂಗವಷ್ಟೇ ಹೆಚ್ಚು ಮೌಲ್ಯಯುತವಾದದ್ದು ಎನಿಸುವುದರೊಂದಿಗೆ ಸಮಯದಲ್ಲಿ ಹುಲ್ಲೂ ಕೂಡ ಹಾವಾಗುವ ಅಂದರೆ ಯಾವುದೂ ತೃಣವೆಂದು ತೆಗಳುವುದಲಿಕ್ಕೆ ಬರಲಾಗದು ಎಂಬ ನಿಯಮವನ್ನು ನಿರೂಪಿಸುವಂತಿದೆ.

ಹೀಗೆ ಎರಡೂ ಭಾರತಗಳಲ್ಲೂ ಧರ್ಮ, ನೀತಿ, ಪ್ರೀತಿ-ಸ್ನೇಹ, ತ್ಯಾಗಗಳಲ್ಲದೆ ವ್ಯಕ್ತಿಯ ಶೀಲ, ಪ್ರೇಮ, ವಾತ್ಸಲ್ಯ, ಭಕ್ತಿ, ಗೌರವ ಇವೆಲ್ಲವೂ ಸ್ವಲ್ಪ ಸ್ವಲ್ಪ ವ್ಯತ್ಯಾಸಗೊಂಡು ಬೇರೆ ಬೇರೆ ಆಕಾರ ತಳೆದಿರುವುದು ಅಧ್ಯಯನದಿಂದ ಗೋಚರಿಸುತ್ತದೆ. 'ಮಹಾಭಾರತ'ವು ಅನೇಕ ಕಥಾನಕಗಳ ಭರಣಿಯಾಗಿರುವುದರಿಂದಲೇ ಅದರಲ್ಲಿನ ವೈವಿಧ್ಯಕ್ಕೆ ಕೊರತೆಯೊಂದಿಗೆ ಕೊನೆಯೂ ಇಲ್ಲವೆಂಬ ಮಾತಿದೆ. ಅಂತೆಯೇ ಅವುಗಳಲ್ಲಿ ಎಲ್ಲವೂ ಮಿಳಿತವಾಗುವ ನಿಯಾಮಕಗಳು ಸಾಮಾನ್ಯವಾಗಿಯೇ ಬಿಂಬಿತವಾಗಿರುವುದುಂಟು. ಕುವೆಂಪು ಹೇಳಿರುವಂತೆ "ಮಹಾಕಾವ್ಯಗಳಿಗೆಲ್ಲ ಈ (ರಾಮಾಯಣ ಕುರಿತಂತೆ) ಕಾವ್ಯ ಹೆಗಲೆಣೆಯಾಗಿದೆ ಮಾತ್ರವೇ ಅಲ್ಲ! ಒಂದೊಂದು ಕಡೆ ಅವುಗಳನ್ನು ಮೀರಿಸಿದೆ. ಅಂದರೆ, ಇದು ಅಹಂಕಾರದ ಮಾತಲ್ಲ. ಅಜ್ಜನ ಹೆಗಲ ಮೇಲೆ ನಿಂತ ಮೊಮ್ಮಗ ಅಜ್ಜನಿಗಿಂತಲೂ ವಿಸ್ತಾರವಾದ ಜಗತ್ತನ್ನೂ, ದಿಗಂತವನ್ನೂ ನಿರೀಕ್ಷಿಸುವುದು ಸಹಜವೂ, ಸ್ವಾಭಾವಿಕವೂ, ನ್ಯಾಯವೂ ಆಗಿದೆ"[೧] ಎಂಬ ನುಡಿಯಂತೆ ಅನೇಕ ಕಾಲದಲ್ಲಿ ಸಾಗಿಬಂದ ಭಾರತವನ್ನು ಅನೇಕ ದೃಷ್ಟಿಯಲ್ಲಿ ಅನಂತರದವರು ವಿಸ್ತಾರತೆಯನ್ನು ಹೆಚ್ಚಿಸಿರುವ, ಕುಗ್ಗಿಸಿರುವ ಸಾಧ್ಯತೆಗಳು ಸಾಧಾರಣವಾಗಿಯೇ ಜರುಗಿರುವ ಸಂಭವವಿರುವುದುಂಟು. ಇಂತಹುದರಲ್ಲೇ 'ಜನಪದ ಮಹಾಭಾರತ'ವೂ ನಡೆದು ಬಂದಿರುವ ಸಾಧ್ಯತೆಯಿದೆ. 'ವ್ಯಾಸಭಾರತ'ಕ್ಕೆ 'ಜನಪದ ಮಹಾಭಾರತ'ವೇ ಮೂಲವೆಂಬ ಅನೇಕ ಸಾಧ್ಯ

[೧] ಕೋ.ಚೆನ್ನಬಸಪ್ಪ (ಸಂ.) : ಶ್ರೀ ಕುವೆಂಪು ಸಂದರ್ಶನ, ಪು. ೬೫ ('ದಿವ್ಯಜೀವನ' : ಮಹಾಕಾವ್ಯ ಸಮೀಕ್ಷೆ)

ಅಭಿಪ್ರಾಯಗಳ ನಡುವೆಯೂ ಪ್ರಸ್ತುತ ಕಥನಕಾರನು ಹಿಂದಿನದನ್ನು ತನ್ನ ಕಾಲಮಾನದ ಅಭಿವ್ಯಕ್ತಿ ಮಾರ್ಗದ ಮೂಲಕ ಚಿತ್ರಿಸಿರುವುದರಿಂದ ಹಿಂದಿನದನ್ನು ಗಮನಿಸಿಯೇ ತಕ್ಕ ಮಾರ್ಪಾಡುಗಳನ್ನು ಸೇರ್ಪಡೆಗಳನ್ನು ಮಾಡಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಶಿಷ್ಟ 'ಮಹಾಭಾರತ'ದಲ್ಲಿ ಒಂದು ಪಾತ್ರ, ಸನ್ನಿವೇಶವನ್ನೇ ಹೆಚ್ಚು ಮೌಲ್ಯೀಕರಣಗೊಳಿಸುವ ಮಾರ್ಪಾಟುಗಳು ಹೆಚ್ಚಾಗಿ ಕಂಡುಬರುತ್ತವೆ. ಇದು ಅಲ್ಲಲ್ಲಿ ಸಾಧಿತವಾಗಿರುವ ವಿಚಾರವೇ ಆಗಿದೆ. ಆದರೆ ಜನಪದರು ಎಲ್ಲರನ್ನೂ ತಮ್ಮವರನ್ನಾಗಿ ಸಮಾನತೆಯಿಂದ ಮನಗಾಣುವ ಸಾಮಾನ್ಯ ಆವೃತ್ತಿಯಾಗಿ ಕಂಡುಬಂದರೂ, ಅಲ್ಲಲ್ಲಿ ಅವುಗಳ ಮೌಲ್ಯವನ್ನು ತೂಗುವೆಡೆಗೂ ಗಮನಹರಿಸಿರುವುದನ್ನು ಪ್ರಸ್ತು 'ಜನಪದ ಮಹಾಭಾರತ'ವು ತೆರೆದು ತೋರುತ್ತದೆ. ಇದು ಅವರ ಭಾವನೆಗಳ ಅನಾವರಣವಾಗಿ ಕಂಡುಬರುತ್ತದೆ. ಇದರ ಜೊತೆಗೆಯೇ ಸಾಮಾನ್ಯರನ್ನೂ ಕಾವ್ಯದೊಳಗೆ ಪ್ರಧಾನ ಪಾತ್ರದ ಮಟ್ಟಿಗೆ ತಂದು ತೆರೆದು ತೋರುವ ಕೌಶಲವನ್ನು ಮೆರೆದಿರುವುದುಂಟು. ಇದರಿಂದ ಅವರು ತಮ್ಮ ನಡುವೆ ಹೊಂದುವ ಆಪ್ತತೆಯ ಬಗೆಯನ್ನು ತೋರಿಸುತ್ತದೆ.

ಪ್ರತಿ ಪ್ರಸಂಗಕ್ಕೂ ಸಕಾರಣತೆಯ ಆವರಣವನ್ನು ಒದಗಿಸುವುದರೊಂದಿಗೆ ಎಲ್ಲೂ ಜಾಳು ಜಾಳು ಎನ್ನಿಸದ ಹಾಗೆ ಅವುಗಳ ಮೌಲ್ಯವನ್ನು ಕಟ್ಟಿಕೊಳ್ಳುತ್ತಾ ಸಾಗುವ 'ಜನಪದ ಮಹಾಭಾರತ' ಸರ್ವರ ಪಾಲಿಗೂ ಸಮಾನತೆಯನ್ನು ಸಾರಿದ ಒಂದು ಸಾಮಾನ್ಯವಾದರೂ ಅಸಾಮಾನ್ಯತೆಯನ್ನು ಮೆರೆದ ಒಂದು ಮನುಷ್ಯ ಸಹಜಪ್ರೇಮ ಪ್ರತೀಕದ ಕಾವ್ಯವಾಗಿ ಗೋಚರಿಸುವುದರೊಂದಿಗೆ ತಳ ಸಮುದಾಯದ ಕ್ರಿಯೆಗಳಲ್ಲಿನ ಅನೇಕ ಅಪರೂಪದ ಅಂಶಗಳನ್ನು ದಾಖಲಿಸುವುದರೊಂದಿಗೆ ಅವುಗಳ ಮಹತ್ವವನ್ನೂ ಸಾರುವ ಒಂದು ನಿಲುವನ್ನು ತಳೆದಿರುವುದು ಮತ್ತು ಹೊಸ ಆಯಾಮವನ್ನು ಶಿಷ್ಟದೊಂದಿಗೆ ಅವಾಹನೆಗೊಳಿಸಿಕೊಳ್ಳುವಲ್ಲಿ ಅದರೊಂದಿಗೆ ಪರಸ್ಪರಾಭಿಮುಖವಾಗಿ ನ್ಲಿಲ್ಲುವ ಸೂಚನೆಯನ್ನೂ ಸಹ ನೀಡುತ್ತದೆ. ಆದರೆ ಮೂಲಕ್ಕಿರುವ ಮಾದರಿಯನ್ನು ಕಡೆಗಣಿಸದೇ ಅದರೊಟ್ಟಿಗೇ ಅನೇಕ ಭಿನ್ನತೆಯನ್ನು, ಪೂರಕತೆಯನ್ನೂ ಮೆರೆದಿರುವ 'ಜನಪದ ಮಹಾಭಾರತ' ಪ್ರಸ್ತುತ ಕಾಲದಲ್ಲಿ ತನ್ನ ತನವನ್ನು ಉಳಿಸಿಕೊಳ್ಳುವ ಮಾರ್ಗದ ನಿಟ್ಟಿನಲ್ಲಿ ಸಾಗಿರುವ ಸೂಚನೆಗಳು ಎದ್ದು ಕಾಣುತ್ತವೆ.

'ವಚನಭಾರತ'ವೂ ಒಟ್ಟು ಕಥೆಯನ್ನು ದೃಷ್ಟಿ ವಿಶಿಷ್ಟ್ಯತೆಯಿಂದಾಗಿ ಅನುವಾದ ಮಾಡಿರುವ ಕೃಷ್ಣಶಾಸ್ತ್ರಿಗಳ ಶ್ರಮವೂ ಮೆಚ್ಚುವಂತಹದ್ದು. ಅವರೇ ಉಪೋದ್ಘಾತದಲ್ಲಿ ಹೇಳಿರುವಂತೆ "ವಚನಭಾರತವನ್ನು ಓದಿಯೇ ಮೂಲದ ಮಹತ್ವವನ್ನು ಪೂರ್ಣವಾಗಿ ಗ್ರಹಿಸಬಹುದೆಂದು ನಾನೇನೂ ತಿಳಿದುಕೊಂಡಿಲ್ಲ. ನಾಲ್ಕು ಕಿತ್ತಳೆಯ ತೊಳೆಯ ಕುಸುಮಗಳನ್ನು

ಬಾಯಿಗೆ ಹಾಕಿಕೊಂಡರೆ, ಅಖಂಡವಾದ ಕಿತ್ತಳೆಯ ಹಣ್ಣಿನ ಸ್ವರೂಪ ಗೊತ್ತಾಗುವುದಿಲ್ಲ. . ." ಎಂಬ ವಿನಯದ ಮಾತುಗಳು ಪಂಪನ 'ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ ವ್ಯಾಸನೆನೆಂಬ ಗರ್ವಮೆನಗಿಲ್ಲ' ಎಂಬ ಮಾತಿಗಿಂತಲೂ ಮೌಲ್ಯಯುಳ್ಳಂತಹುದು ಎಂದರೆ ಅತಿಶಯವಾಗಲಾರದು. ಅದು (ಭಾರತಮಂಜರಿ) ಸಾರ ಸಂಗ್ರಹವನ್ನು 'ಕನ್ನಡಿಯಲ್ಲಿ ದಿಗ್ಗಜವನ್ನು ತೋರಿದ ಹಾಗೆ ಕಿರಿದಾಗಿ ಆದರೆ ಎಲ್ಲಾ ಭಾಗಗಳೂ ಇರುವಂತೆ ಸಂಗ್ರಹಿಸಿದ್ದೇನೆಂದು ಹೇಳುವ ಕ್ಷೇಮೇಂದ್ರನ ಮಾತನ್ನು ಅನುಸರಿಸುವ ಕೃಷ್ಣಶಾಸ್ತ್ರಿಗಳು ಅದನ್ನೇ ಓದುಗರಿಂದ ಬಯಸುವ ವಿಶಾಲ ಹೃದಯದವರಾಗಿದ್ದಾರೆ. ಅದರ ಮುನ್ನುಡಿಯನ್ನು ಕುರಿತಂತೆ ಸುಜನಾ "೭೫ ಪುಟದಷ್ಟು ಇರುವ ಪಾಂಡಿತ್ಯ ಪೂರ್ಣ ರಸದೀಪ್ತ ಉಪೋದ್ಘಾತವೆ ಸಂಗ್ರಹಾತ್ಮವಾದ ಒಂದು ಪ್ರೌಢಗ್ರಂಥದಂತಿದೆ. ಆದರೆ ಸಾರ ಭಾರವಾಗಿದ್ದರೂ ಹೊರೆಯಾಗಿಲ್ಲ, ಆಳವಾಗಿದ್ದರೂ ಮುಳುಗಿಸುವಂತಿಲ್ಲ. ಇದನ್ನು ಓದುವುದೆ ಒಂದು ಸುಂದರ ಕಾವ್ಯ ಓದಿದಂತಾಗುತ್ತದೆ"[೧] ಎಂಬ ನುಡಿಯನ್ನು ಇಡಿಯಾಗಿ ವಚನಭಾರತಕ್ಕೆ ಅನ್ವಯಿಸಬಹುದಾದಷ್ಟು ಅನುವಾದ ಸ್ವರೂಪವು ಅದರದಾಗಿರುವುದು ಸುಸ್ಪಷ್ಟ.

ಈ ಎಲ್ಲಾ ಹಿನ್ನೆಲೆಯಲ್ಲಿ ನೋಡಿದಾಗ 'ವಚನಭಾರತ'ವು ವ್ಯಾಸಭಾರತ'ದ ಎಲ್ಲಾ ಸಾಧ್ಯತೆಗಳನ್ನೂ ತೆರೆದು ತೋರುವ ಕೈದೀವಿಗೆಯಾಗುವುದರೊಂದಿಗೆ, ಪ್ರತಿ ಪ್ರಸಂಗದ ಚಿತ್ರವನ್ನು ಸಾಕ್ಷೀಕರಿಸುವ ನಿಟ್ಟಿನಲ್ಲಿ ಸಾಗಿ ಬಂದಿರುವುದುಂಟು. ಅದು ವಿಶಾಲತೆಯಿಂದಲ್ಲದೆ ಕಿರಿತನದಲ್ಲೂ ಮೆರೆದಿರುವುದು ಗೋಚರಿಸುತ್ತದೆ. ಸ್ಪಷ್ಟವಾಗಿ ಕೆಲವೊಂದು ಸನ್ನಿವೇಶ, ಪಾತ್ರಗಳನ್ನು ಇಡಿಯಾಗಿ ನೋಡಲು ಅಲ್ಲಲ್ಲಿ ಅಡಚಣೆ ಎನಿಸಿದರೂ, ಅದು ಮೌಲ್ಯವಾಗಿ ನಿಲ್ಲುವುದಿಲ್ಲ. ಭಾರತವನ್ನು ಓದಿದವರು ತಮ್ಮ ಪರಿಭಾವನೆಗೆ ಅನುಗುಣವಾಗಿ, ಸೂಚಿಸಬೇಕಾದುದನ್ನು, ತಿಳಿಸಬೇಕಾದುದನ್ನು ಸಾದ್ಯಂತವಾಗಿ ಚಿತ್ರಿಸಿರುವುದರಿಂದ ಇದರ ಮೌಲ್ಯ ನಿರ್ಣಯ ಅಷ್ಟು ಸೂಕ್ತವೆನಿಸುವುದಿಲ್ಲ. ಆದ್ದರಿಂದ ವಚನಭಾರತಕ್ಕಿರುವ ಮಹತ್ತು ಬೃಹತ್ತಾದುದು ಎಂದು ತಿಳಿಯಬಹುದಾಗಿದೆ.

ಹೀಗಾಗಿ ಒಂದು ಕಾಲದ ಸಾಹಿತ್ಯ ಒಂದು ಜನಾಂಗದ, ಸಮುದಾಯದ ಸಂಸ್ಕೃತಿಯ ಜೀವಂತ ನೆಲೆಗಳನ್ನು ಶೋಧಿಸುವ ಕಾರ್ಯದಲ್ಲಿ ನಿರತವಾಗುತ್ತ, ಆ ಪರಂಪರೆಯ ಸಾರವೇನು? ಜೊಳ್ಳೆಷ್ಟು? ಅದರಿಂದ ಮುಂದಿನ ಸಾಂಸ್ಕೃತಿಕ ಪರಂಪರೆಗೆ ವಾಹಕವಾಗಬಲ್ಲ ಆಯಾಮಗಳಾವುವು? ಎಂಬುದನ್ನು ನಿರ್ಣಯಿಸುತ್ತದೆ. ಆದ್ದರಿಂದ ಅದು ಪ್ರತಿನಿಧಿಸುವ

---

೧ ಸುಜನಾ : ಸಂವಹನ, ಪು. ೨೨೦.

ಬದುಕನ್ನು ಶುದ್ಧಿಸುವ ವ್ಯಕ್ತಿತ್ವಗಳನ್ನು ಸರಿದಾರಿಯಲ್ಲಿ ನಡೆಯುವಂತೆ ಒತ್ತಾಯಿಸುತ್ತಲೇ ಬಂದಿದೆ. ಅಂತಹ ಕೆಲಸವನ್ನು ಪ್ರಸ್ತುತ ಕೃತಿಗಳೂ ಸಾರಿವೆ ಎಂಬುದು ಮುಖ್ಯವಾದುದು.

ಪ್ರಾಚೀನ ಸಾಹಿತ್ಯವು ತಿಳಿವು ಮತ್ತು ವಿವೇಕದ ಜೊತೆಜೊತೆಗೆ ಅಂತರಂಗದ ಔದಾರ್ಯವನ್ನು, ಸಹಾನುಭೂತಿಯ ಸಾಮರ್ಥ್ಯವನ್ನು, ನೋವಿಗೆ ಕರಗುವ ಅಂತಃಕರಣವನ್ನು ನೀಡುವುದರೊಂದಿಗೆ ಏಕದಲ್ಲಿ ಅನೇಕವನ್ನು ಬಿಂಬಿಸುವ ಕೈದೀವಿಗೆಯಾಗುವ ಸಾಮರ್ಥ್ಯ ಪಡೆದಿದೆ. ಇಂಥ ಸಾರ್ಥಕತೆಗೆ ಪೂರಕವಾದ ಮೌಲ್ಯವನ್ನೇ ಬಿತ್ತುವ 'ಶಿಷ್ಟ' ಮತ್ತು 'ನೆಲ'ದ ಭಾರತಗಳಲ್ಲಿನ ಅರಿವನ್ನು ಮನಗಾಣಬೇಕಾದ ಸಂದರ್ಭ ಹೆಚ್ಚಿವೆ ಎಂದೆನಿಸುತ್ತದೆ.

ಅಧ್ಯಾಯ ೫

ಪಾತ್ರದರ್ಶನ

ಭಾರತ ಸಂಸ್ಕೃತಿಯ ಭದ್ರ ಬುನಾದಿಯಾದ ರಾಮಾಯಣದಂತೆಯೇ 'ಮಹಾಭಾರತ'ವೂ ಅತ್ಯುಚ್ಚ ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ. ಭಾರತವು ದ್ವಾಪರಾ ಕಾಲದಲ್ಲಿ ಸಾಗಿಬಂದ ಕೃತಿ. ಇದರಲ್ಲಿ ಬರುವ ದಾಯಾದಿ ಮತ್ಸರ, ವಂಚು ಸಂಚು, ಚತುರೋಪಾಯಗಳು, ಹಕ್ಕಿಗಾಗಿ ನಡೆಯುವ ಹೋರಾಟ, ದು:ಖ ದುಮ್ಮಾನಗಳು ನಮ್ಮ ಹತ್ತಿರದ ಸ್ವಭಾವದವುಗಳಾದುದರಿಂದ ಇದು ಹೆಚ್ಚು ಆತ್ಮೀಯತೆಯಿಂದ ನಮ್ಮನ್ನು ಸೆಳೆಯುತ್ತದೆ. 'ರಾಮಾಯಣವು' ಆದರ್ಶವಾದರೆ, 'ಮಹಾಭಾರತವು' ಜೀವನವಾಗಿ ಕಂಡು ಬರುತ್ತದೆ.

ಇದನ್ನು "ರಾಮಾಯಣ ಮತ್ತು ಮಹಾಭಾರತಗಳು ಬಗೆ ಬಗೆಯ ಪಡಿ ಪದಾರ್ಥಗಳಿಂದ ಕೂಡಿದ ಉಗ್ರಾಣಗಳಿದ್ದಂತೆ ಸಮರ್ಥರಾದವರು ತಮಗೆ ಬೇಕಾದ ಪಡಿ ಪದಾರ್ಥಗಳನ್ನು ತೆಗೆದುಕೊಂಡು, ಅದರಿಂದ ಮಾಡಬಹುದಾದ ಅಡಿಗೆಯನ್ನು ತಮ ತಮಗೆ ತಿಳಿದ ರೀತಿಯಲ್ಲಿ ಮಾಡಿ, ಉಂಡು, ತಾವೂ ತೃಪ್ತಿ ಪಡಬಹುದು, ಇತರರಿಗೂ ಕೊಡಬಹುದು"[೧] ಎನ್ನುತ್ತಾರೆ ಸುಧಾಕರ ಅವರು. ಅಂದರೆ ಒಂದು ಕಾಲದಲ್ಲಿ ರಚಿತವಾದ ಕೃತಿಯು ಅನಂತರದ ಕಾಲಘಟ್ಟದಲ್ಲಿ ಅನೇಕ ಕವಿಗಳ ಮನೋಭೂಮಿಕೆಯಲ್ಲಿ ಚಿತ್ರಿತವಾಗುವ ರೀತಿಯಲ್ಲಿ ಕಾಣುವ ಬದಲಾವಣೆಗಳು, ವಿನೂತತೆಗಳು ಹೇಗೆ ಭಿನ್ನ ಎಂಬುದು ಮುಖ್ಯವಾಗುವುದರೊಂದಿಗೆ ಅವುಗಳಲ್ಲಿ ನಡೆದಿರುವ ಮಾರ್ಪಾಟುಗಳು ತೌಲನಿಕತೆಯ ದೃಷ್ಟಿಯಿಂದ ಹೆಚ್ಚು ಅವಕಾಶವನ್ನೀಯುತ್ತವೆ.

ಅಂತೆಯೇ 'ಮಹಾಭಾರತವು' _ ಕನ್ನಡದ ಅನೇಕ ಕವಿಗಳಿಂದ ಹೊಸತಾಗಿ ನಿರ್ಮಾಣಗೊಂಡಿರುವುದುಂಟು ಅವುಗಳಲ್ಲಿನ ಭಿನ್ನತೆಗಳು, ಮಾರ್ಪಾಟುಗಳು ಬೇರೆಯಾದರೂ ಸಹ ಅವೆಲ್ಲವೂ ಮೂಲಕೃತಿಯನ್ನು ಆಶ್ರಯಿಸಿರುವ ನಿದರ್ಶನಗಳು ಮಾತ್ರ ನಿಚ್ಚಳವಾದವುಗಳು. ಇಂಥ ಅನೇಕ ಕೃತಿಗಳಲ್ಲಾದ ಬದಲಾವಣೆಗಳಲ್ಲಿ ಸನ್ನಿವೇಶ, ಪಾತ್ರಚಿತ್ರಣ, ದೃಷ್ಟಿಕೋನಗಳಲ್ಲಿನ ಅಂಶಗಳು ತುಲನೆಯ ಅಂಶಕ್ಕೆ ಕಾರಣವಾಗುತ್ತವೆ.

ಹೀಗೆ 'ಮಹಾಭಾರತವು' ಪಂಪ, ರನ್ನ, ಲಕ್ಷೀಶ, ಕುಮಾರವ್ಯಾಸ ಮುಂತಾದ ಹತ್ತಾರು ಮಹಾಕವಿ ಮತ್ತು ಸಾವಿರಾರು ಕಿರಿಯ ಕವಿಗಳ ಮನೋಭೂಮಿಕೆಯಲ್ಲಿ ವಿಹರಿಸಿ

---

೧ ಸುಧಾಕರ – ಕುವೆಂಪು ನಾಟಕ ಸಮೀಕ್ಷೆ.

ಹೊರಬಂದು, ಅವುಗಳೊಳಗಿನ ಪಾತ್ರಗಳು ಭಾರತೀಯ ಸಂಸ್ಕೃತಿಯ ಒಂದೊಂದು ಮಹಾಗುಣದ ಸಂಕೇತವಾಗಿವೆ. ಈ ಪಾತ್ರಗಳಲ್ಲಿ ತಮ್ಮ ಕಾಲಾನುಗುಣವಾದ ಹೊಸ ಸಂವೇದನೆಗಳನ್ನು, ದೃಷ್ಟಿಕೋನಗಳನ್ನು ಮೂಲ ಸ್ವರೂಪಕ್ಕೆ ಭಂಗ ಬಾರದಂತೆ ತುಂಬಲು ಅವರು ಯತ್ನಿಸಿದಲ್ಲಿ ಸಫಲರಾಗಿರುವಂತೆಯೇ, ಇದೇ 'ಮಹಾಭಾರತವು' ಕೃತಿರೂಪದಲ್ಲಿ ಮೂರ್ತವಲ್ಲದೆ ಅನಕ್ಷರಸ್ಥ ಜನರ ಬಾಯಲ್ಲಿ ಉಳಿದ ಬಗೆ ಮತ್ತು ಅವರು ಕಂಡ ಪಾತ್ರಗಳ ನಡತೆಗಳು, ನಿರ್ವಹಿಸಿದ ಉದ್ದೇಶಗಳು ಎಂತಹವು ಎಂಬುದು ಪ್ರಸ್ತುತದ ಮುಖ್ಯ ವಿಚಾರ. ಇದನ್ನು 'ಜನಪದ ಮಹಾಭಾರತ'ದ ಮೂಲಕ ಇಲ್ಲಿ ನೋಡಲು ಯತ್ನಿಸಲಾಗಿದೆ.

'ಮಹಾಭಾರತ' – 'ಜನಪದ ಮಹಾಭಾರತ'ಗಳೆರಡರಲ್ಲೂ ಅನೇಕಾನೇಕ ರಾಜನೀತಿ ನಿಪುಣರು, ಸಮರಾಗ್ರಣಿಗಳು, ಸಹಧರ್ಮಿಣಿಯರು, ತಂತ್ರಕೋವಿದರು ಕಂಡುಬರುತ್ತಾರೆ. ಎರಡರಲ್ಲೂ ಅವೇ ಪಾತ್ರಗಳು. ಆದರೆ ಆ ಎಲ್ಲ ಪಾತ್ರಗಳೂ ಯುಗಮನೋಧರ್ಮ ಸ್ವರೂಪದ ದೃಷ್ಟಿಯಿಂದ ಬೇರೆಯಾಗುವ ಗುಣವನ್ನು ಹೊಂದಿರುವುದುಂಟು. ಅಭಿಮನ್ಯುವಿನಿಂದ ತೊಡಗಿ ವೃದ್ಧ ಪಿತಾಮಹ ಭೀಷ್ಮರವರೆಗಿನ ವಿವಿಧ ವಯೋಮಾನದವರು, ಯುಧಿಷ್ಠಿರನಂತಹ ಧರ್ಮದೃಷ್ಟಿಯವರು, ಅರ್ಜುನನಂತಹ ಕದನಕಲಿಗಳು, ಕರ್ಣನಂತಹ ದಾನಶೀಲರೂ ಅಲ್ಲಿ ತುಂಬಿಹೋಗಿದ್ದಾರೆ. ಇಂತಹ ಗುಣಮೌಲ್ಯವನ್ನು ಹೊಂದಿರುವ ಸ್ತ್ರೀ ಪಾತ್ರಗಳು 'ಮಹಾಭಾರತ'ದಲ್ಲಿ ಮಹತ್ವ ಪಡೆದಿರುವುದನ್ನು ಕಾಣುತ್ತೇವೆ. ಇವರುಗಳೇ ಈ ಅಧ್ಯಯನದ ಕೇಂದ್ರಶಕ್ತಿಗಳು.

ಪತಿಯು ಕುರುಡನೆಂಬುದರಿಂದ ತನ್ನ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಕಾಲಕಳೆಯುವ ಗಾಂಧಾರಿಯಿಂದ ಮೊದಲ್ಗೊಂಡು, ಮಹಾಭಾರತದ ದುಃಖದಾವಿಗೆಯಲ್ಲಿ ಬೆಂದ ದ್ರೌಪದಿಯವರೆಗೆ ಅನೇಕ ಸ್ತ್ರೀಪಾತ್ರಗಳು ನೈಜವಾಗಿ ಹಾದು ಬರುತ್ತವೆ. ಇಂತಹ ಸ್ತ್ರೀ ಪಾತ್ರಗಳು ಎರಡೂ ಭಾರತಗಳಲ್ಲಿ ನಿಲ್ಲುವ ನೆಲೆಯನ್ನು ಇಲ್ಲಿ ಕಂಡುಕೊಳ್ಳಲು ಯತ್ನಿಸಿ ಏಳು ಪಾತ್ರಗಳನ್ನಷ್ಟೇ ಪ್ರಬಂಧದ ವ್ಯಾಪ್ತಿಯ ಹಿನ್ನೆಲೆಯಲ್ಲಿ ಗಮನಿಸಲಾಗಿದೆ.

ಈ ಏಳೂ ಪಾತ್ರಗಳೂ ವೈವಿಧ್ಯಪೂರ್ಣವಾದವುಗಳಾಗಿದ್ದು, ಅವುಗಳು ಎರಡೂ ಕಾವ್ಯಗಳಲ್ಲಿ ಒಂದೇ ಪ್ರತಿಬಿಂಬದಂತೆ ಕಂಡುಬಂದರೂ ಅಲ್ಲಲ್ಲಿ ತಾಳುವ ಧೋರಣೆಗಳು, ಸ್ವಭಾವಗಳನ್ನು ಹೋಲಿಕೆ ಮಾಡಿ ಗಮನಿಸಿದಾಗ ಉಂಟಾಗುವ ಈ ಪಾತ್ರಗಳ ಹಿಂದು-ಮುಂದನ್ನು ಕವಿಗಳು ತಮ್ಮ ಪ್ರತಿಭೆಯಿಂದ ನೇಯ್ದಿರುವುದು ಎದ್ದು ಕಾಣುತ್ತವೆ.

ಮಹಾಭಾರತಕ್ಕೆ ಸೂತ್ರಧಾರಿಯಾಗಿ ಕಂಡುಬರುವ ಅಗ್ನಿಕನ್ಯೆ ದ್ರೌಪದಿಯು ಇಲ್ಲಿ ಕೆಲವೊಮ್ಮೆ ವೀರರಸ ಚಿಮ್ಮಿಸಿ, ಕೆಲವೊಮ್ಮೆ ಕಣ್ಣೀರ ಕೋಡಿ ಹರಿಸಿ, ಮಗದೊಮ್ಮೆ ವಾತ್ಸಲ್ಯ ಪ್ರೀತಿಗಳ ಹೊನಲನ್ನು ಹಾರಿಸುತ್ತಾ ಗೋಚರವಾಗುತ್ತಾಳೆ.

ಮೀಂಗುಲಿಗನ ಮಗಳಾಗಿದ್ದರೂ ಚಕ್ರವರ್ತಿಯ ಐಶ್ವರ್ಯದ ಪ್ರಲೋಭನೆಗೆ ಮಾರುಹೋಗದ ಪ್ರತೀಕವಾಗಿ ಮತ್ಸ್ಯಗಂಧಿ (ಸತ್ಯವತಿ)ಯು ಕಂಡುಬರುತ್ತಾಳೆ.

ಪಾಂಡವರ ತಾಯಿಯಾಗಿ ಬದುಕಿನ ಕೊನೆಯವರೆವಿಗೂ ಸಂಕಷ್ಟದಿಂದ ಬದುಕುವ ಕುಂತಿ, ಗರ್ಭಗುದ್ದಿಕೊಂಡು ಅಸೂಯೆಯಿಂದ ಬೇಗುದಿಗೊಳ್ಳುವ ಗಾಂಧಾರಿ, ಕ್ಷಣದ ಭೋಗದ ಬೇಗೆಯಲ್ಲಿ ನಲುಗಿ ಹೋಗುವ ಮಾದ್ರಿಯರಲ್ಲದೆ ಗಂಗೆ, ಹಿಡಿಂಬೆಯಂತಹ ಪಾತ್ರಗಳ ಅಂತರಂಗದ ಅನ್ವೇಷಣೆ ಜನಪದ ಮಹಾಭಾರತದಲ್ಲಿ ಹೇಗೆ ನಡೆದಿದೆ, ಎಂಬುದರ ಜೊತೆಗೆ ಮೂಲ ಸ್ವರೂಪವನ್ನು ಕಾಯ್ದುಕೊಂಡು, ಪರಿಪೂರ್ಣತೆಯನ್ನು ಸಾಧಿಸಿರುವ ಉದ್ದೇಶವನ್ನು ಇಲ್ಲಿ ಕಾಣಲು ಯತ್ನಿಸಲಾಗಿದೆ.

ದ್ರೌಪದಿ

ದ್ರೌಪದಿ ಬಾಲ್ಯ ಪ್ರಸಂಗವೇ ಶಿಷ್ಟ ಮಹಾಭಾರತಕ್ಕೆ ವೈದೃಶ್ಯವಾಗಿ ನಿರ್ಮಾಣಗೊಂಡಿರುವುದುಂಟು. ಅವಳು ಆದಿಪರಾಶಕ್ತಿಯ ಪ್ರತಿರೂಪವಾಗಿರುವವಳು. ಅವಳಿಂದ ದ್ರೋಣನ ಸಂಹಾರವಾಗಬೇಕೆಂಬ ದ್ರುಪದನ ಅಭೀಪ್ಸೆಯಂತೆ ಶಿವನ ಕರುಣದಿಂದ ಅಗ್ನಿಕುಂಡದಿಂದ ಎದ್ದು ಬಂದವಳು. ಇದು ಮೂಲದಲ್ಲಿ ಇಲ್ಲದ ಒಂದು ಚಿತ್ರ. ಇಡೀ 'ಮಹಾಭಾರತ'ಕ್ಕೆ ಕಾರಣಳಾಗುವ, ಕೌರವರ ನಾಶಕ್ಕೆ ಮೂಲಬೀಜವಾಗುವ ಈಕೆಯ ಜನನವೇ ಅಗ್ನಿ ಸ್ವರೂಪದ್ದು. ಅದು ದಹಿಸಲು ಬಲ್ಲುದೆ ಹೊರತು ರಕ್ಷಿಸಲೇನು ಬಲ್ಲದು. ಅವಳ ವಿವಾಹ ಪೂರ್ವ ಚಿತ್ರಣವೇ ಜನಪದ ಕಲ್ಪನಾ ಕುಸುರಿಯಲ್ಲಿ ಕಲೆತುಬರುತ್ತದೆ. ಅಂದರೆ 'ಮಹಾಭಾರತ'ದ ಆರಂಭದಲ್ಲೇ ಮುಂದೊದಗುವ ಕಾರ್ಯ ಕಾರಣ ಸಂಬಂಧವಾದ ಪಾತ್ರಗಳಿಗೂ ಧರ್ಮ-ಪಾಪಗಳ ಎಳೆಗಳ ನೇಯ್ಗೆ ನೇಯುವ ಜನಪದ ಕಥನಕಾರ 'ಪತಿಭಿಕ್ಷೆಯ ಪರ್ವ'ವನ್ನೇ ತಂದು ತಾಮ್ರಕೇಶಿ (ಶಕುನಿಯಾಗುತ್ತಾನೆ)ಯು ಅವಳನ್ನು ಮುಟ್ಟಿದ್ದರಿಂದಾಗಿ ತಾನು ಶುದ್ಧಳಾಗಿ ಬರುತ್ತೇನೆಂಬ ಮಾತಿಗೆ ಬ್ರಹ್ಮ ವಿಷ್ಣುಗಳು ಪರಶಿವನ ಆಂಶಿಕರಾದ ಐದು ಜನ ಗಂಡಂದಿರ ಪಡೆದು ನಿನ್ನ ಶತ್ರುಗಳ ನಾಶ ಮಾಡು ಎಂದು ಹೇಳುವುದಕ್ಕೆ ಆಕೆಯೇ ತಾಮ್ರಕೇಶಿಯು ಶಿವನನ್ನೇ ಪರೀಕ್ಷಿಸಲು ಹೊರಟಾಗ ಶಿವನನ್ನು ಕಾಣದ ಪಾರ್ವತಿ ಐದುಬಾರಿ 'ಪತಿಭಿಕ್ಷಾಂದೇಹಿ' ಎಂದು ಹೇಳಿದ್ದೆ ಕಾರಣವೆಂದು ಹೇಳುವ ಜನಪದ ಕಾವ್ಯವು ಪ್ರತಿಯೊಂದಕ್ಕೂ ಸ್ಥಳೀಯ ಅಥವಾ ದೈವತ್ವದ ಜಾಯಮಾನವನ್ನೇ ಒದಗಿಸುತ್ತದೆ. ಇದು ಜನಪದ ಆಶಯವಾಗಿ ಬಂದರೆ 'ವಚನಭಾರತ'ದಲ್ಲಿ ಅಗ್ನಿಕುಂಡದಿಂದ ಹೊರಬಂದ ದ್ರೌಪದಿಯ ಜನನವಾದ ಕೂಡಲೇ ಆಕಾಶವಾಣಿಯಾಗಿ 'ಈ ಕೃಷ್ಣೆಯು ಕ್ಷತ್ರಿಯನಾಶವನ್ನುಂಟು ಮಾಡುತ್ತಾಳೆ' ಎಂದಿತು ಎಂಬ ವಾಕ್ಯ ಬರುತ್ತದೆ. ಅಂದರೆ ಅವಳ ಜನನದೊಂದಿಗೆ ಮುಂದೆ ಸಂಭವಿಸಬಹುದಾದ ಘಟನೆಗಳಿಗೆ ವೇದಿಕೆಯನ್ನು ನಿರ್ವಹಿಸುವುದು ಸಾಮಾನ್ಯವಾಗಿ ಎರಡೂ ಕಾವ್ಯಗಳಲ್ಲೂ ಜರುಗುವುದನ್ನು ಕಾಣಬಹುದು.

ಇನ್ನು ದ್ರೌಪದಿ ಸ್ವಯಂವರದ ಚಿತ್ರವಂಥೂ 'ವಚನಭಾರತ'ದಲ್ಲಿ ಸಾಂಗವಾಗಿಯೇ ನಡೆಯುತ್ತದೆ. ಸಭಾಮಂಟಪದ ಅಲಂಕಾರ, ಅದರ ಆನಂದಮಯ ತುಂದಿಲತನ, ಎಲ್ಲರೂ ಬಂದು ಸೇರುವುದು ಇತ್ಯಾದಿಗಳೆಲ್ಲವೂ ವಿವಿಧ ವರ್ಣನೆಗಳಿಂದ ಮೂಡಿ ಬಂದಿದೆ. ಆದರೆ ಜನಪದ ಕವಿ ತಾಳ್ಮೆಯಿಂದ ಅವಳನ್ನು ಬೇಗ ತಂದು ಅರ್ಜುನನು ಅಂಗಗೊರಬನ ಶಾಪ ವಿಮೋಚನೆಯ ನೆಪದೊಳಗೆ ಗೆಲ್ಲುವಂತೆ ಮಾಡಿ ಇಡೀ ಸ್ವಯಂವರವನ್ನು ಕಿರಿದುಗೊಳಿಸಿ ಬಿಡುತ್ತಾನೆ. ಅವಳು ಐವರಿಗೂ ಸತಿಯಾಗುವ ಸನ್ನಿವೇಶವೂ ಒಂದೇ ಆಯಾಮದಲ್ಲಿ

ಜರುಗುತ್ತದೆ. ಅಂದರೆ 'ಹೆಣ್ಣು ತಂದೀವಿ' ಎಂದು ಜನಪದರಲ್ಲಿ ಬಂದರೆ 'ಭಿಕ್ಷೆಯನ್ನು ತಂದಿದ್ದೇನೆ' ಎಂದು ವಚನಭಾರತ ನುಡಿಯುತ್ತದೆ. ಆದರೆ ಕುಂತಿಯ ಉತ್ತರ ಎರಡರಲ್ಲೂ ಒಂದೆ. ಅದು 'ಎಲ್ಲರೂ ಹಂಚಿಕೊಳ್ಳಿ' ಎಂಬ ತತ್ತ್ವದ ನುಡಿ. ಜನಪದದಲ್ಲಿ ಕುಂತಿ ಮಕ್ಕಳು ಒಪ್ಪದಿದ್ದಕ್ಕೆ ತನ್ನ ಮೇಲಾಣೆ ಮಾಡಿ ತಾಕೀತು ಮಾಡಿದರೆ. 'ವಚನಭಾರತ'ದಲ್ಲಿ ತನ್ನ ತಪ್ಪನ್ನು ಧರ್ಮರಾಯನಿಗೆ ತಿಳಿಸುವ ಮೂಲಕ ಪ್ರಮಾದವನ್ನು ಸರಿಪಡಿಸಿಕೊಳ್ಳಲೆತ್ನಿಸುತ್ತಾಳೆ. ಇಲ್ಲಿ ಅನಂತರ ಅಣ್ಣ-ತಮ್ಮಂದಿರೈವರೂ ಒಪ್ಪಿ ಅವಳನ್ನು ದ್ರುಪದನಾಣತಿಯಂತೆ ದಿನವೂ ಒಬ್ಬೊಬ್ಬರು ಮದುವೆ ಮಾಡಿಕೊಂಡದ್ದಾಗಿ ಬರುತ್ತದೆ. ಇದನ್ನು 'ವಚನಭಾರತ' ಆ ಮಹಾನುಭಾವೆಯ ಮದುವೆಯಲ್ಲಿ ಇದೊಂದು ಅದ್ಭುತವಾದ ನೋಟವೆಂದು ಚಿತ್ರಿಸುತ್ತದೆ. ಆದರೆ ಜನಪದ ಮಹಾಭಾರತದಲ್ಲಿ ಎಲ್ಲರೂ ಒಂದೇ ದಿನ ಗಂಡರಾದರು ಎಂದಷ್ಟೇ ತಿಳಿಸಿ ಕೈಬಿಡುತ್ತದೆ. ಅದರೊಡನೆಯೇ ಆಕೆಯ 'ಕನ್ಯೆತ್ವ'ದ ಪ್ರತೀ ಸಂದರ್ಭದ ಎಳೆಯನ್ನು ನಾರದರ ಮೂಲಕ ತಂದು 'ಪುರುಷನಿಗೆ ನಿಯಾಮಕದ' ಮೂಲಕ್ಕೆ ಕಾರಣವನ್ನು ತಿಳಿಸಿ 'ಕರಗ'ದ ಚಿತ್ರವನ್ನೂ, ಮುಂದೆ ಅದೇ ಮುಂದುವರೆಯುವ ಅವತಾರದ ಉದ್ದೇಶವನ್ನೂ ತಿಳಿಸುತ್ತದೆ. ಜನಪದ ಮಹಾಭಾರತದಲ್ಲಿ ದ್ರೋಪತಿ ಸೆರಗು ಕಟ್ಟಿದ ಪರ್ವದಲ್ಲಿ ಶ್ರೀಕೃಷ್ಣನ ಔತಣಕ್ಕಾಗಿ ನೀಡಿದ ಹಣ್ಣನ್ನು ಕೃಷ್ಣ ಕತ್ತರಿಸುವಾಗ ಬೆರಳಿಗೆ ಕತ್ತಿ ತಾಗಿದ್ದಕ್ಕೆ ಅವಳು ಸೆರಗು ಹರಿದು ಕಟ್ಟುತ್ತಾಳೆ. ಇದರಿಂದ ಅವಳ ಸೆರಗು ಅಕ್ಷಯವಾಗುವುದಾಗಿಯೂ, ಅದನ್ನು ಮುಟ್ಟಿದ ದುಷ್ಟರ ಹುಟ್ಟಡಗಲಿ ಎಂಬುದಾಗಿಯೂ ಕೃಷ್ಣ ವರವನ್ನು ದಯಪಾಲಿಸುತ್ತಾನೆ. ಇದು ಮುಂದೆ ಆಗುವ ಕ್ರಿಯೆಗಳಿಗೆ ಕವಿ ಒದಗಿಸುವ ಪೂರಕತೆ ಏನೋ ಎಂಬ ಭಾವ ಸುಳಿಯುತ್ತದೆ. ಗಿಳಿಗಳಿಂದಲೂ ತಾನು ಚಿತ್ರ ಕುಸುಮಾಲೆಯರ ಪ್ರಸಂಗ ತಿಳಿದು ಸ್ಥೈರ್ಯವನ್ನು ಮೆರೆದ ಸಹನಶೀಲೆ ಆಕೆ. ಆದರೆ ಅರ್ಜುನನು ಕಂಡ ಸ್ವಪ್ನವ ಅವಳಿಗೆ ಬೇರೆ ರೀತಿಯಲ್ಲಿ ಹೇಳಿದಾಗ ಆ ಸಹನೆಯ ಕಟ್ಟೆ ಒಡೆದು ನನ್ನ ಹಾಗೆ ಮದುವೆಯಾದವ್ರೆ, ಅವ್ರ ಗುಂಡಿಗೆ ಸೀಳಬೇಕು' ಎಂದು ಆರ್ಭಟಿಸಲೂ ಬಲ್ಲಳು. ಇದು ಜನಪದ ಕಥೆಗಳಲ್ಲಿ ಬರುವ ಆಶಯಗಳಂತೆಯೇ ಬರುತ್ತದೆ.

'ಶಿಷ್ಟ ಮಹಾಭಾರತ'ದಲ್ಲಿ ಜೂಜಿನ ಪರ್ವದಲ್ಲಿ ಪಗಡೆದಾಳ ಕುರಿತ ನೋಟವನ್ನು ನಾವು ಕಂಡರೆ ಜನಪದದಲ್ಲಿ ಅರ್ಜುನ ದ್ರೌಪದಿಯರಿಗೇ ಮೊದಲು ಪಗಡೆ ಜೂಜಿನಾಟ ಉಂಟಾಗುವ ಚಿತ್ರಣ ಕಾವ್ಯದಲ್ಲಿ ದೊರೆಯುತ್ತದೆ. ಇದು ಭಿನ್ನ ಆಶಯಗಳೊಂದಿಗೆ ಮೂಡಿಬಂದಿದೆ. ಅರ್ಜುನನು ಕನಸಲ್ಲಿ ಕಂಡ ಚಿತ್ರ ಕುಸುಮಾಲೆಯರನ್ನು ಕಾಣಲು ದ್ರೌಪದಿಯೊಂದಿಗೆ ಪಗಡೆಯಾಡಿ ಅವಳನ್ನು ಸೋಲಿಸಿ ತಾನು ಅವರನ್ನು ನೋಡಲೂ, ಈಕೆ ಅವರ ಸೇವೆ ಮಾಡುವಂತೆ ತಿಳಿಸುವಂತೆ ಜೂಜಿಗೆ ಮೊದಲು ಪಣ ಮಾಡುತ್ತಾನೆ. ಆದರೆ

ಶ್ರೀಕೃಷ್ಣನ ವರದಾಹಸ್ತ ದ್ರೌಪದಿಗೆ ಸದಾ ಚಾಚಿರುವುದರಿಂದ ಆ ಸ್ಥಿತಿಯೇ ಬೇರೆಯಾಗುತ್ತದೆ. ಇದು ಮಾನವೀಯ ನೆಲೆಯಲ್ಲಿ ಸಾಗುತ್ತದೆ. ದ್ರೌಪದಿಯನ್ನು ಅರ್ಜುನನು

"ಹೆಚ್ಚು ಮಾತಾಡಬೇಡ – ದ್ರೋಪತಿ

ಎಚ್ಚರದಿ ಎದ್ದು ಹೋಗೆ – ಮಂಚವಬಿಟ್ಟು

ಎಚ್ಚರದಿ ಎದ್ದು ಹೋಗೆ

ಮಚ್ಚರಿ ಸ್ತ್ರೀಯೊಡನೆ ಹೆಚ್ಚು ಮಾತುಗಳ್ಯಾಕೆ

ಹುಚ್ಚಿ ನೀನೆದ್ದು ಹೋಗೆ" – ಎನ್ನುತ್ತಾನೆ ಅವಳು ಚಿತ್ರ-ಕುಸುಮಾಲೆಯರನ್ನು ಜರಿದಾಗ. ಆದರೆ ಅವಳದಾದರೂ ತಾಳ್ಮೆ ಸ್ವಭಾವದ ಮನವನ್ನೊಮ್ಮೆ ಪರೀಕ್ಷಿಸಿಕೊಳ್ಳುತ್ತಾಳೆ. ಅದೂ ಹೇಗೆಂದರೆ

'ಬಟ್ಟಗಂಗಳ ನೀರ ತೊಟ್ಟಿಡುತ ದ್ರೋಪತಿಯು

ತಟ್ಟನೆ ಬಂದಳಾಗ' – ಬಂದು ಅವನಿಗೆ ಬೇಕಾದ ಅಡುಗೆ ಮಾಡಿ ಬಡಿಸಿಯೂ ಬರುತ್ತಾಳೆ. ಇಲ್ಲಿ ಅವಳ ಪತಿಪ್ರೇಮವು ಒಡಮೂಡುತ್ತದೆ. ಆದರೆ ಅವನ ಯೋಚನೆಯಾದರೂ ಅವಳಿಂದ ವೀಳ್ಯ ತೆಗೆದುಕೊಳ್ಳುವುದಷ್ಟೆ. ಕೊನೆಗೆ ದ್ರೌಪದಿ ಕಡೆಗಿದ್ದ ಶ್ರೀಕೃಷ್ಣನು ಅರ್ಜುನನಿಗೆ ಸ್ತ್ರೀವೇಷ ತೋರಿಸಿ ಆಟ ಮರೆಸಿ ದ್ರೌಪದಿ ಗೆಲ್ಲುವಂತೆ ಮಾಡುತ್ತಾನೆ. ಜೊತೆಗೆ ಬ್ರಾಹ್ಮಣವೇಷಧಾರಿಯಾಗಿದ್ದ ಕೃಷ್ಣ

"ಮಡದಿಗೆ ಸೋತುಬಿಟ್ಟೆ – ಅರ್ಜುನ

ದ್ರೋಪತಿಯೇ ಗೆದ್ದಳಯ್ಯ

ಯೋಗವಿಲ್ಲದ ಮ್ಯಾಲೆ ಜೋಗಿಯಾಗೋಗಯ್ಯ' – ಎಂದು ನುಡಿಯುತ್ತಾನೆ. ಇದು ಮುಂದೆ ಪಗಡೆಯನ್ನು ಗೆದ್ದರೂ ಯೋಗವಿಲ್ಲದ ದುರ್ಯೋಧನನ ಸ್ಥಿತಿಯನ್ನೇ ಸೂಚಿಸುತ್ತಾನೆ. ಅರ್ಜುನ-ದುರ್ಯೋಧನ ಇವರಿಬ್ಬರಲ್ಲೂ ಸ್ತ್ರೀ ಒಬ್ಬಳೇ ಕಣ್ಣಿಗೆ ನೆಟ್ಟದ್ದು ಸಾಮಾನ್ಯ ದೃಷ್ಟಿ. ಇದನ್ನು ಜನಪದಕಾರ ಸೂಕ್ಷ್ಮವಾಗಿ ಬಿತ್ತರಿಸಿದ್ದಾನೆ. ಜೂಜಿಗೆ ಮೊದಲು ಹಾಲು ಸಕ್ಕರೆ ಅನ್ನವನ್ನು ದ್ರೌಪದಿ ನೀಡುವುದು ಎಲ್.ಆರ್.ಹೆಗಡೆ ಸಂಗ್ರಹಿಸಿರುವ

'ಪರಮೇಶ್ವರಿ ಪದಗಳು'[೧] ಎಂಬಲ್ಲಿಯೂ ಇದ್ದು 'ಹಾಲಿನಲ್ಲಿ ಪಾಯಿಸ ಮಾಡು, ಮೂಡಲಿನ ಜಲಧಿಗೆ ದಾನಕೊಡಲು ಹೋಗುವೆ' ಎಂಬ ಅರ್ಜುನನ ಮಾತು ತಾನು ಕಂಡ ಕೆಟ್ಟ ಸ್ವಪ್ನದ ಪರಿಹಾರ ದೃಷ್ಟಿಯಿಂದ ದೇವತಾ ಪ್ರೀತ್ಯರ್ಥವಾಗುವುದೇ ಉದ್ದೇಶವಾಗಿರಬೇಕೆನಿಸುತ್ತದೆ.

ಪಾಂಡವರ ಅಜ್ಞಾತವಾಸಕ್ಕಾಗಿ ವಿರಾಟನಗರದಲ್ಲಿ ಗುಪ್ತನಾಮದಿಂದ ಉಳಿದಾಗ ಭೀಮನು ಅಡಿಗೆ ಭಟ್ಟನಾಗಿ ಕೆಲಸ ನಿರ್ವಹಿಸುತ್ತಿರುತ್ತಾನೆ. ಜೊತೆಗೆ ಊಟದ ಚಿಂತೆಯಿಲ್ಲದೆ ಕಾಲಕಳೆಯುವಾಗ ಕೀಚಕನ ಉಪಟಳವು. ಕೌರವರ ಅಪಮಾನದಿಂದ ಬೆಂದ ದ್ರೌಪದಿಯ ದುಃಖವಾದರೂ ನೂರ್ಮಡಿಗೊಳ್ಳುತ್ತಾ ಸಾಗುತ್ತದೆ. ಇವಳ ಈ ಹೃದಯಬೇಗೆಯನ್ನು ಕೃಷ್ಣನ ಮಡಿಲಿಗಾಕಲು, ಆತ 'ಈರುಳ್ಳಿ ಸೃಷ್ಟಿ' ಮಾಡಿದನೆಂಬ ಕಲ್ಪನೆ ಹೊಸದಾಗಿದ್ದು ಇದರ ಪ್ರಕಲ್ಪನೆ 'ವ್ಯಾಸಭಾರತ'ದಲ್ಲಿಲ್ಲ. ಅಂದರೆ ಈರುಳ್ಳಿ ಸೃಷ್ಟಿಗಿಂತಲೂ ನಮಗಿಲ್ಲಿ ದ್ರೌಪದಿಯ ಮನದಾಳದ ನೋವು ಎಂತಹದ್ದು ಎಂಬುದು ಮುಖ್ಯವಾದ ವಿಚಾರವಾಗುತ್ತದೆ. ಭೀಮನಾದರೂ ಈರುಳ್ಳಿ ಸುಲಿಯುತ್ತ ದ್ರೋಪತಿ ವಸ್ತ್ರಾಪಹರಣವನ್ನು, ಕೊಯ್ದು ಕಣ್ಣೀರು ಬಂದಾಗ ದ್ರೋಪತಿ ಅಳುವನ್ನು ನೆನೆಯುತ್ತಾನೆ; ಕೊತಕೊತನೆ ಕುದಿಯುತ್ತಾನೆ. ವಿರಾಟನ ಅರಮನೆಯಲ್ಲಾದರೂ ಅವಳ ಸ್ಥಿತಿ

"... ವೀರಪಾಂಡವರೀಗೆ
ಮಡದಿ ಆಗಿದ್ದಾಗ್ಯೂ
ಸಾಮಾನ್ಯ ಸ್ತ್ರೀಯಳಂತೆ
ಕಕ್ಕನ್ನದ ಕಷ್ಟಕ್ಕೆ
ದುಕ್ಕ ದುಮ್ಮಾನನೆಲ್ಲ
ನುಂಗೀಕೊಂಡು ತಾಯಿ
ಧರ್ಮವನ್ನು ಬಿಡದೆ
ಯಾರೊಬ್ಬರ ಜರಿಯದೆ
ತಿರಿಯಾಕಿ ಮಾತಾಡದೆ
ಕಾಲ ಕಳೆಯುತ್ತಾಳೆ!"

ಇಂತಹವಳನ್ನೊಮ್ಮೆ ಕೀಚಕ ನೋಡುತ್ತಾನೆ; ಅದೂ 'ಕದ್ದುಕದ್ದು'. ಇದರಿಂದಾಗಿ ಅವನ ಮನಸು 'ದದ್ದಾ'ಗುತ್ತದೆ'. ಆತನು ತನ್ನಕ್ಕನ ಬಳಿ ತನ್ನ ಮನದಿಂಗಿತವನ್ನು ತೋಡಿಕೊಳ್ಳುವುದು, ಸುದೇಷ್ಣೆ ಅದಕ್ಕೆ ಒಪ್ಪದೆ, ಕೊನೆಗೆ ಸಮ್ಮತಿಯಿಯ್ಯೀಯುವುದೆಲ್ಲವೋ ಮೂಲಭಾರತದಂತೆಯೇ ಸಾಂಗವಾಗಿ ಸಾಗುತ್ತದೆ. ಆದರೆ ಕೀಚಕನು ಅವಳನ್ನು ಹಿಡಿಯಲು ಹೋದಾಗ ತಾನು "ತನ್ನ

---

[೧] ಜನಪದದಲ್ಲಿ ರಾಮಾಯಣ ಮತ್ತು ಮಹಾಭಾರತ – ಡಾ.ಪುಟ್ಟಸ್ವಾಮಿ.

ಕಾವಲುಗಾರರಾದ ಭೈರವರಿಗೆ ಹೇಳಿದಳು'' ಎಂಬ ವಿಷಯ ಹೊಸತಾಗಿದ್ದು, ಜನಪದ ಕವಿಗೆ ಆದಿಶಕ್ತಿಯ ಕಾವಲುಗಾರನಾದ ವೀರಭದ್ರನ ನೆನಪು (ವಿಷಯವನ್ನು) ಕಾಡಿರುವ ಸಾಧ್ಯತೆಯನ್ನು ಊಹಿಸಲು ಅನುವಾಗುತ್ತದೆ. ಹಾಗೆಯೇ 'ವಚನಭಾರತ'ದಲ್ಲಿ ಕೀಚಕನ ಆಸ್ಥಾನದಿಂದ ಕೊಡವಿಕೊಂಡು ಸಭಾ ಭವನಕ್ಕೆ ಓಡಿಬಂದರೂ, ಹಿಮ್ಮೆಟ್ಟಿಸಿ ಬಂದೂ ಅವಳನ್ನು ಒದೆಯುತ್ತಾನೆ. ಅಲ್ಲಿ ದ್ರೌಪದಿ ರಾಜನಲ್ಲಿ ಅವನ ಉಪಟಳದ ತೀವ್ರತೆಯನ್ನು ಬಿಚ್ಚಿಡುತ್ತಾಳೆ. ಆದರೆ 'ಜನಪದ ಮಹಾಭಾರತ'ದಲ್ಲಿ ಇದರ ಬಗ್ಗೆ ಮಾಹಿತಿಯೇ ಇಲ್ಲ. ಈ ಕವಿಗೆಲ್ಲಾ ದೈವೀಶಕ್ತಿಯೇ ಅನುಕೂಲಕರವಾದದ್ದು. ಭೀಮನಲ್ಲಿ ತನ್ನ ಹೃದಯ ವೇದನೆಯ ಬೇಗೆಯನ್ನು ಅರುಹುವುದು ಎರಡರಲ್ಲೂ ಸಮನಾಂಶದಿಂದ ಕೂಡಿ ಬಂದಿದೆ; ಅಲ್ಪ-ಸ್ವಲ್ಪ ಬದಲಾವಣೆಯೊಂದಿಗೆ. ಕೊನೆಗೂ ಕೀಚಕನ ಸಂಹಾರವಾಗುತ್ತದೆ. ಆದರೆ 'ಜನಪದ ಮಹಾಭಾರತ'ದಲ್ಲಿ ಬರುವ ಉಪಕೀಚಕರ ಸಂಹಾರ ಪ್ರಸಂಗವೂ ಹೊಸತಾಗಿದ್ದು ನೂರೊಂದು ಜನರ ಸಾವು ಅಜ್ಞಾತವಾಸದ ಕೊನೆಯಲ್ಲಿದ್ದು ಹಸ್ತಿನಾವತಿಗೆ ಮರಳುವುದರಿಂದ ಮೊದಲಾಗುತ್ತದೆ. ಇದು ಮುಂದೆ ಆಗುವ ಕೌರವರ ನಾಶಕ್ಕೆ ಬರೆದ ಮುನ್ನುಡಿಯಾಗಿ ಗೋಚರಿಸುತ್ತದೆ. ದ್ರೋಪತಿ ಮತ್ತು ಅರ್ಜುನನ ಪ್ರಸಂಗಗಳೆಲ್ಲ ಆಪ್ತವಾದವು. ಏಕೆಂದರೆ ಎಷ್ಟೇ ಆದರೂ ಅವಳನ್ನು ಗೆದ್ದಾತ ತಾನೆ. ಇದನ್ನು ಜನಪದರು ತಮ್ಮ ಅನುಭವದಿಂದ ಗಮನಿಸಿದ್ದಾರೆ. ಅದಕ್ಕಾಗಿ ವರುಷ ನಿಯಮ ಮಾಡಿಯೂ ತೋರಿಸುತ್ತಾರೆ. ಅರ್ಜುನ ಜೋಗಿಯಾಗಿ ಹೋದರೂ ಹಸ್ತಿನಾವತಿ ಬೀದಿಯಲ್ಲಿ ಬಂದು ಧರ್ಮರಾಯರನ್ನ ಕಂಡು, ದ್ರೌಪದಿಯ ಅರಮನೆಗೆ ಬಂದು ಅವಳನ್ನು ಕುಂತಿಯಿಂದ ಕೇಳುವುದು, ಅವಳೊಡನೆ ಇಲ್ಲದ ಆಟವಾಡಿದ್ದಾಗಿ ಹೇಳುವುದು ಎಲ್ಲವೂ ಹೊಸತಾಗಿದೆ. ಇಲ್ಲೆಲ್ಲಾ ಅವಳ ವಿಚಾರವಾಗಿ ವಿಶೇಷವಾದ ಮಾತಾದರೂ ಹೆಚ್ಚಿಲ್ಲದಿದ್ದರೂ, ಕೃಷ್ಣನನ್ನು ಮೊರೆಹೋಗುವ ಅವಳ ಅನುಪಮಭಕ್ತಿ, ಕುತೂಹಲವಾದದ್ದು. ಅಲ್ಲದೆ ಕೃಷ್ಣ ಸುಂದರಿ ಎನ್ನುವುದನ್ನು ಅರ್ಜುನ ಜೋಗಿ ಚಿತ್ರ ಕುಸುಮಾಲೆಯರ ಮುಂದೆ ಹೊಗಳುತ್ತಾನೆ.

ಸಭಾಪರ್ವದಲ್ಲಿ ದ್ರೌಪದಿಯ ಅಪಮಾನವು ಹೇಯ ಕೃತ್ಯವಾಗಿ ಕಂಡುಬಂದರೂ, ಅದಕ್ಕೊಂದು ಪೂರಕವಾತಾವರಣವನ್ನು ನಿರ್ಮಿಸಿಯೇ ಸಾಗುವ ಎರಡೂ ಭಾರತಗಳೂ ದ್ಯೂತಕ್ಕಿದ್ದ ಕಾರಣಗಳನ್ನು ಸಮಾನವಾಗಿಯೇ ತರುವುದರೊಂದಿಗೆ, ಶಕುನಿಯೇ ಕೌರವರ ಕಡೆ ಕೂತು ಪಗಡೆಯಾಡುವುದು ತನ್ನ ತಮ್ಮಂದಿರಿಗೆ ಕೊಟ್ಟ ಮಾತಿನ ಉಳಿವಿಗಾಗಿ. ಯಾದರೂ ಸಹ ಅದಕ್ಕೊಂದು ತಾತ್ವಿಕತೆಯನ್ನು ಒದಗಿಸಿರುವುದು ಮುಖ್ಯವಾಗಿ ನಿಲ್ಲುತ್ತದೆ. ''ದ್ರೌಪದಿಯು ಧರ್ಮರಾಯ ಸೋತ ಮೇಲೆ ಪಣಕ್ಕೆ ಒಡ್ಡಿದ್ದರಿಂದ ತಾನೇಗೆ ಅವರ ಸೊತ್ತಾಗುತ್ತೇನೆ' ಎಂದು ಪ್ರಶ್ನಿಸುವುದು ಇವೊತ್ತಿನ ಮಹಿಳಾ ಪರ ಆಲೋಚನೆಯನ್ನೇ ಮಾಡಿದಂತಿದೆ' - ಎಂಬ ರಾಗೌ

ಅವರ ಮಾತು ಮುಖ್ಯವಾದರೂ 'ವಚನ ಭಾರತ'ದಲ್ಲೂ ಆಕೆ ಪ್ರಶ್ನಿಸುವವಳೇ ಆಗಿದ್ದಾಳೆ. 'ಜನಪದ ಭಾರತ'ದಲ್ಲಿ ದ್ರೌಪದಿಯನ್ನು ಸೀರೆ ಸೆಳೆದು ಅಪಮಾನಗೊಳಿಸುವುದೇ ಉದ್ದೇಶಿತ ಯೋಜನೆ. ಅದೂ ಹಿಂದಿನ ದುರಿತವನ್ನು ನೆನೆದು. ಅದನ್ನು ಶಕುನಿ ಜೊತೆಗೆ

"ಮಾವಯ್ಯ ಆ ಪಂಚಪತುರೊತೆ
ಇಂದ್ರಪ್ರಸ್ತದ ಹೊಸಮನೆಗೆ ಹೋಗೋಕಾಯುದಲ್ಲಿ
ನಾನು ಗೊತ್ತಿಲ್ದೆ ಜಾರಿಬಿದ್ದಾಗ
'ಅರಿಯದೆ ಬಿದ್ದರಿಭಾವಾ
ನೀವು ಕುರುಡರ ಕುರುಕುಲದೇವಾ' ಅಂತ ಹೇಳಿ
ಕೈತಪ್ಪಾಳೆ ತಟ್ಕೊಂಡು ಕೇಕೆ ಹಾಕಿ ನಕ್ಕಳ ಮಾವ
ಅಂಥಾ ಗರತಿಯ ಗೌಡೀ ಮಾಡ್ಬೇಕು ಮಾವ"

ಎಂದು ತನಗಾದ ಅಪಮಾನವನ್ನು ತೋಡಿಕೊಳ್ಳುತ್ತಾನೆ. ಅದರಂತೆ ಮತ್ತೆ ಅವರನ್ನು ಹಸ್ತಿನಾವತಿಗೆ ಬರಮಾಡುವ ಏರ್ಪಾಡಾಗುತ್ತದೆ. ದುರ್ಯೋಧನನ ಆಣತಿಯಂತೆ ಎಲ್ಲರೂ ಹೊರಟರೆ ದ್ರೌಪದಿಯಾದರೂ,

"ಪತಿದೇವರಲ್ಲಿ ನನ್ನ ಪ್ರಾರ್ಥನೆ
ನೀವು ಸೋತ ಮೇಲೆ ನನ್ನನ್ನ
ಜೂದೀಗೆ ಈಡು ಕಟ್ಟಿದ್ದೀರಿ
ಆ ಕಾರಣದಿಂದ ನಾನು ಸೊತಂತ್ರಳು
ನಾನು ಮಾತ್ರ ಕೌರವನ ದರ್ಭಾರಿಗೆ ಬರೋಳಲ್ಲ"

ಎಂದು ಧೈರ್ಯವಾಗಿಯೇ ನುಡಿಯುತ್ತಾಳೆ. ಅದನ್ನು ಕೇಳಿ ಪಾಂಡವರಷ್ಟೇ ದರ್ಭಾರಿಗೆ ಬರುತ್ತಾರೆ. ಅನಂತರದಲ್ಲಿ ದುರ್ಯೋಧನನು ದುಶ್ಯಾಸನನನ್ನು ಬಳಿಯಟ್ಟಿ ಅವಳನ್ನು ಎಳೆದು ತರಿಸುತ್ತಾನೆ. ಆದರೆ 'ವಚನಭಾರತ'ದಲ್ಲಿ ಮೇಲಿನಂತೆ ಎಲ್ಲವೂ ನಡೆದರೂ ಪ್ರತಿಕಾಮಿಯನ್ನು ಕಳುಹಿಸಿ ದ್ರೌಪದಿ ಅವನಲ್ಲಿ ಮೇಲಿನ ಪ್ರಶ್ನೆ ಕೇಳುವುದಾಗಿ ಚಿತ್ರಿತವಾಗಿದೆ. ದ್ರೌಪದಿಯನ್ನು ದುಶ್ಯಾಸನ ಧರಧರನೆ ಎಳೆದುತರುತ್ತಾನೆ. 'ವಚನಭಾರತ'ದಲ್ಲಿ ಪಾಂಡವರು ಮತ್ತು ದ್ರೌಪತಿ ವಸ್ತ್ರವನ್ನು ತೆಗೆಯಿಸುವ ಚಿತ್ರ ಬಂದರೆ ಜನಪದದಲ್ಲಿ ಕೌರವನಿಗೆ ದ್ರೌಪದಿಯ ಮೇಲಷ್ಟೇ ಕಣ್ಣು. ಮೂಲದಲ್ಲಿರುವಂತೆಯೇ ದ್ರೌಪದಿ ಸಭಾಸದರನ್ನು "ನಿಮ್ಮಗಳಿಗೆ ಕರುಣಬರನಿಲ್ಲವೆ . . ಪತುರೊತ ಧರ್ಮವನ್ನು ಕಾಪಾಡೋರಿಲ್ಲವೇ? ನನ್ನ ಸೀರೆ ನರೀಚೆಂಡನ್ನು ಹಿಡಿದು ನಾನು ಗೋಳಾಡ್ತಿದ್ರೂ ನೀವು ಕಲ್ಲುಗೊಂಬೆಗಳಂಗೆ ಕುಂತಿದ್ರಲ್ಲ, ನೀವು ಗುರುಗಳೇ? ನೀವು ಹಿರಿಯರೆ? ನೀವು ಯೋಗ್ಯರೆ? ಎಂದು ಪ್ರಶ್ನೆಯನ್ನು ಕೇಳುತ್ತಾಳೆ. ಅಂತೆಯೇ ಗಂಡಂದಿರನ್ನು 'ನೀವು

ವೀರರೆ? ಶೂರರೆ? ಧೀರರೆ? ನೀವು ಗಂಡರೋ, ಭಂಡರೋ ಮೊಂಡರೋ?' ಎಂದು ಸ್ವಲ್ಪ ಜಾನಪದೀಯಳಾಗಿ ತನ್ನ ಉಗ್ರತೆಯನ್ನು ತೋರಿಸುತ್ತಾಳೆ. ಕೊನೆಗೆ ಅವಳೇ ಪಗಡೆಯನ್ನಾಡುವ ಮೂಲಕ ಪತಿಯರನ್ನು ಗೆಲ್ಲಬೇಕಾದ ಅನಿವಾರ್ಯತೆ ಜನಪದದಲ್ಲಿ ತಲೆದೋರುತ್ತದೆ. ಅಂದರೆ ಸ್ತ್ರೀ ಯಾವುದಕ್ಕೂ ಸಮಾನಳೆಂಬ ತತ್ತ್ವವನ್ನು ಜನಪದಕಾರ ಇವಳ ಮೂಲಕ ದೃಢಪಡಿಸುವುದನ್ನು ಕಾಣಬಹುದು. ಅದೂ ದುರ್ಯೋಧನ ಹೇಳುವ "ಈ ಆಟವನ್ನು ದ್ರೋಪತ ಗೆದ್ರೆ ಅವಳ ಗಂಡಂದಿರು ಅಪರ ರಾಜ್ಯಕೋಶ, ದಂಡದಾಳಿ ಸಕಲ ಸಾಮ್ರಾಜ್ಯವೂ ಅವರಿಗೇ, ಅವಳೇನಾದರೂ ಸೋತರೆ ಈ ಭೆಡ್ಡಿ ಈ ತುಂಬಿದ ಸಭೆಯಲ್ಲಿ ನನ್ನ ತೊಡೆ ಮೇಲೆ ಕೂತ್ಕೊಂಡು ನನ್ನ ಬಾಯ್ಗೆ ತಾಂಬೂಲವನ್ನು ಕೊಡ್ಬೇಕು" ಎಂಬ ಅತಿಯಾಸೆಯ ಪಣದೊಂದಿಗೆ. ಇದೇ ಪ್ರಸಂಗ 'ವಚನಭಾರತ'ದಲ್ಲಿ ಆಕೆಗೆ ತನ್ನ ಎಡತೊಡೆಯನ್ನು ತೋರಿಸುವ ಸನ್ನಿವೇಶವಾಗಷ್ಟೇ ಬರುತ್ತದೆ. ಆದರೆ ಮುಂದೆ ಮುರಿಯಬೇಕಾದ ತೊಡೆಯ ಪ್ರಸ್ತಾಪ ದೂತದಲ್ಲೇ ಕಂಡುಬರುತ್ತದೆ. ಕೊನೆಗೆ ಪಗಡೆ ಪಂಥವನ್ನು ಗೆದ್ದರೂ, ಶಕುನಿ ಕುತಂತ್ರದಿಂದ ಧರ್ಮರಾಜ ಮತ್ತೆ ದೂತವಾಡಿ ವನವಾಸಕ್ಕೆ ಹೋಗಲೇಬೇಕಾಯಿತು. ಈ ದ್ರೌಪದಿ ಪಗಡೆಯಾಡಿದ್ದು, ಶಿಷ್ಟಭಾರತಕ್ಕೆ ಹೊರಗು, ಆದರೂ ಇಲ್ಲಿ ಭಿನ್ನ ಆಶಯಗಳಷ್ಟೇ ಮುಖ್ಯವಾದ ನೆಲೆಯಾಗಿ ನಿಲ್ಲುವಂಥದ್ದು. 'ವ್ಯಾಸಭಾರತ'ದಲ್ಲಿ ಕೇವಲ ಅಪಮಾನಿತಳಾಗಿಯೇ ಇಡೀ ಬದುಕನ್ನು ಸವೆಸುವ ದ್ರೌಪದಿಗೆ ಜನಪದಕಾರ ಈ ಮೂಲಕ ಶ್ರೇಷ್ಠ ಮಟ್ಟದ ಸದಾವಕಾಶವನ್ನು ಒದಗಿಸಿ 'ಮಾತೃ' ಸ್ಥಿತಿಯ ಔದಾರ್ಯವನ್ನು ಮೆರೆದಿದ್ದಾನೆ.

ಸೈಂಧವ (ಜಯದ್ರಥ)ನಿಂದ ದ್ರೌಪದಿ ಅಪಹರಣಕ್ಕೊಳಗಾಗುವುದು, ಕಾಡಿನಲ್ಲಿ ಪಾಂಡವರೊಡನೆ ಕಷ್ಟದಲ್ಲಿ ಭಾಗಿಯಾಗುವುದು ಇವೆಲ್ಲವೂ ಮೂಲದಂತೆಯೇ ನಡೆದುಬರುತ್ತದೆ. ದುರ್ಯೋಧನನಿಗೆ ದ್ರೌಪತಿ ಒದ್ದ ಪರ್ವ ಹೊಸತಾಗಿದ್ದು, ಪತಿವ್ರತೆಯರಿಂದ ಮುಟ್ಟಿಸಿಕೊಂಡಾಗ ಗಂಧರ್ವನ ಹಿಡಿತದಿಂದ ದುರ್ಯೋಧನನು ಬಿಡುಗಡೆ ಹೊಂದುತ್ತಾನೆಂಬುದಕ್ಕೆ ಭಾನುಮತಿ ಸಕಾರಣವಾಗಿಯೇ ಅದನ್ನು ನಿರ್ವಹಿಸದೆ 'ಅಕ್ಕ ಪರಮ ಪತಿವ್ರತೆ'ಯಿಂದಲೇ ಆಗಬೇಕೆಂದೂ ಧರ್ಮರಾಯನನ್ನು ಕೇಳಲು, ದ್ರೌಪದಿ ಭೀಮನ ವಾಸದಲ್ಲಿರುವುದಾಗಿ ಹೇಳುತ್ತಾಳೆ. ಜೊತ್ಗೆ ಪಾಪಿಯನ್ನು ಕಣ್ಣಿಂದ ನೋಡಲಾರೆ, ಕೈಯಿಂದ ಮುಟ್ಟಲಾರೆ ಎಂದದ್ದಕ್ಕೆ, ಭೀಮ 'ಕಾಲಲ್ಲಿ ಒದ್ದು ಬಾರೆ' ಎನ್ನುತ್ತಾನೆ. ಅಂತೆಯೇ ಅವಳು ಒದ್ದು ಬರುವುದರೊಂದಿಗೆ ಕಟ್ಟನ್ನು ಬಿಚ್ಚುತ್ತಾಳೆ. ಇದು ಒರಟುತನವೆನಿಸಿದರೂ ಅದು ಅನಿವಾರ್ಯವೇನೋ ಎಂಬಂತೆ ಗೋಚರಿಸುತ್ತದೆ. ಅನಂತರ ಜೆಂಬು ನೇರಳೆ ಪರೀಕ್ಷೆಯು ವಿಚಿತ್ರವಾಗಿದ್ದು, ಅದರ ಅವಶ್ಯಕತೆ ಅಷ್ಟೇನೂ ಇರಲಿಲ್ಲ. ಜೊತೆಗೆ ಇದು ಜನಪದ

ಕವಿಕಲ್ಪಿತವೆಂಬುದೂ, ಅಥವಾ ಜನಪದರ ಕಟ್ಟುಕಥೆಯ ಒಂದು ನಿರೂಪಣೆ ಎಂಬಂತೆ ಸಾಗಿ ಬರುತ್ತದೆ.

ಹೀಗೆ ಹುಟ್ಟಿನೊಂದಿಗೆ ದಹಿಸುತ್ತಾ ಬಂದ ದ್ರೌಪದಿ ಸದಾ ಕಷ್ಟದ ಬೇಗೆಯಲ್ಲಿ ಬೆಂದು ಹದಗೊಂಡಂತಹವಳು. ಆಕೆಯು ನಿಷ್ಕಾರಣವಾಗಿ ಯಾವುದಕ್ಕೂ ಒಳಪಟ್ಟಾಗಲೂ ಸಕಾರಣವಾಗಿಯೇ ವರ್ತಿಸಬಲ್ಲ ಗುಣಸಂಪನ್ನ ಶೀಲೆ. ಆಕೆ ಗಂಡಂದಿರೊಂದಿಗೆ ಸಹಕರಿಸಲೂ ಬಲ್ಲಳು, ಅತಿಯಾದಾಗ ಪ್ರಶ್ನಿಸಬಲ್ಲವಳೂ ಹೌದು. ಅವಳು ಸಭಾಭವನದಲ್ಲಿ ಯಾತನೆಯನ್ನು ತೋಡಿಕೊಳ್ಳುವಲ್ಲಿನ ಹೃದಯವಿದ್ರಾವಕತೆಯ ಯಾತನಾಮಯತೆಯಂತೆಯೇ, ದುರ್ಯೋಧನನ್ನು ಒದ್ದು ಬರಬಲ್ಲ ಧೃತಿಮತಿಯ ಗಟ್ಟಿಗಿತ್ತಿಯೂ ಆಗಿದ್ದಾಳೆ. ಕೊನೆಗೆ ಪಾಂಡವರೊಂದಿಗೆ ವನವಾಸದ ಕಷ್ಟದಲ್ಲೂ ಅಜ್ಞಾತವಾಸದ ಅಪಮಾನದಲ್ಲೂ ಬೇಯುವಂತಹಳು. ಕೊನೆಗೆ ಪಾಂಡವರ ಉಳಿವಿಗೆ ಓಲೆಭಾಗ್ಯವನ್ನು ಕೇಳುತ್ತಾಳೆ. ಅಶ್ವತ್ಥಾಮನ ಶಿರೋರತ್ನವನ್ನೂ ಪಡೆಯುತ್ತಾಳೆ. ಗಂಡಂದಿರ ಕಷ್ಟಕಳೆದು ಸುಖವಾಗಿರುವ ಕಾಲದಲ್ಲಿ ಪುತ್ರ ಶೋಕವನ್ನು ಅನುಭವಿಸುತ್ತಾಳೆ.

ಹೀಗೆ ದ್ರೌಪದಿಯು ಮಹಾಭಾರತದ ಕೇಂದ್ರಶಕ್ತಿಯಾಗಿ ಹೇಗೆ ಕಾಣಿಸಿಕೊಂಡಳೂ ಹಾಗೆಯೇ ಅನೇಕ ದುರಿತಕ್ಕೊಳಗಾಗಿ ದುಃಖಿನಿಯಾದದ್ದು ಇಡಿಯಾಗಿ ಕಂಡುಬರುತ್ತದೆ. ಆದರೆ ಅದನ್ನೆಲ್ಲಾ ಎದುರಿಸಬಲ್ಲ ಅನೇಕ ಬಗೆಯನ್ನು ಆಕೆ ಆಯ್ಕೆ ಮಾಡಿಕೊಂಡು ಎದುರಿಸಿದ್ದು ಉಂಟು. ಜನಪದ ಮಹಾಭಾರತ ಅವಳನ್ನು ಆದಿಪರಾಶಕ್ತಿಯೆಂದು ಕರೆದು ಶಕ್ತಿಮಾತೆಯಾಗಿಸಿದೆ. ಇದರಿಂದಾಗಿ ಇಡೀ ಭಾರತದ ಯುದ್ಧ ವಿಜಯದ ಮಾಲೆಯನ್ನೇ ಅವಳಿಗೆ ಹಾಕಿಸಿದೆ. ಇದು ಅವಳ ಜೊತೆಗೆ ಸ್ತ್ರೀಯ ವಿಜಯವೂ ಆಗಿದೆ. ರಾಗೌ ಅವರು ಇದನ್ನು 'ಭೀಮಾರ್ಜುನರ ಅಹಂಕಾರವನ್ನು ಅಡಗಿಸುವುದಕ್ಕಾಗಿಯೇ' ಎನ್ನುತ್ತಾರೆ. ಆದರೆ ಭೀಮ ಅರ್ಜುನರ ಜೊತೆಜೊತೆಗೆ ದುರ್ಯೊಧನನಂತಹ ಕಪಟಿಗಳ ಅಹಂಕಾರವನ್ನು ಅಡಗಿಸುವ ಉದ್ದೇಶವೂ ಇರಬೇಕು. ಅಲ್ಲದೆ ಜನಪದ ಕಥನಕಾರನಿಗೆ ಇಡಿಯಾಗಿ ಪುರುಷನ ದಮನಕಾರಿ ಅಂಶಗಳನ್ನು ಅಡಗಿಸುವ ಉದ್ದೇಶವಿದ್ದು, ಅದನ್ನು ಇಲ್ಲಿ ನೆರವೇರಿಸಿದ್ದಾನೆ ಎನ್ನಬಹುದು.

ಏನೇಯಾದರೂ ದ್ರೌಪದಿಯು ಭಾರತ ಕಥೆಯ ಬೆಳಗುದೀಪವಾಗಿ ಉರಿದಂತಹವಳು. ಅದೂ ಬೆಳಗಿ ಬೆಳಕನ್ನು ಬೀರಬಹುದು; ಕೈ ಇಟ್ಟವರನ್ನು ಸುಡಲೂಬಹುದು. ಅದರಂತೆ ಅವಳು ಭಾರತದಲ್ಲಿ ಬೆಳಗಿದವಳೂ ಆಗಿದ್ದಾಳೆ ಜೊತೆಗೆ ಕುಡಿತಾಗಿಸಿಕೊಂಡವರನ್ನು ಕೆಡಿಸಿದವಳೂ ಆಗಿದ್ದಾಳೆ ಎಂದರೆ ಅತಿಶಯೋಕ್ತಿಯಾಗಲಾರದು.

ಗಾಂಧಾರಿ

ಜೀವನ ಪೂರ್ತಿ ಯಾವುದೋ ಇಕ್ಕಟ್ಟಿನ ಸಂಕೋಲೆಗೆ ಸಿಕ್ಕಿಕೊಂಡು, ಆಳವಾದ ನಿಟ್ಟುಸಿರನ್ನು ಎಳೆಯುತ್ತ ಗೊಂದಲದಲ್ಲೇ ಬದುಕಿದ ಗಾಂಧಾರಿಯು ಮಹಾಭಾರತದಲ್ಲಿ ಅತ್ಯಂತ ಮಾನವೀಯ ನಡವಳಿಕೆಗಳಿಂದಲೇ ಒಂದೆಡೆ ಆಪ್ತಳಾಗುತ್ತಾಳೆ; ಅಷ್ಟೇ ವ್ಯಸನಕ್ಕೊಳಗಾಗುತ್ತಾಳೆ. ಇಂಥ ಗಾಂಧಾರಿಯ ಮೂಲಚಿತ್ರಣ 'ವಚನಭಾರತ'ದಲ್ಲಿ ದೊರೆಯದಿದ್ದರೂ 'ಜನಪದ ಮಹಾಭಾರತ'ದಲ್ಲಿ ಗಾಂಧಾರರಾಜ ಧೃತರಾಷ್ಟ್ರನಿಗೆ ಹೆಣ್ಣು ಕೊಡುವಾಗಲೇ ಭೀಷ್ಮನಲ್ಲಿ

'ಕುರುಡ ಮಗನಿಗೆ
ನನ್ನ ಮಗಳ ಕೊಟ್ಟಾರೆ
ಅವಳ ಗತಿಯೇನು
ಅವಳ ಮಕ್ಕಳ ಗತಿಯೇನು?'

ಎಂದು ಪ್ರಶ್ನಿಸಿ ಅವಳ ಮುಂದಿನ ದಾರಿಯನ್ನು ರೂಪಿಸುವಲ್ಲಿ ಕಾರಣನಾಗುತ್ತಾನೆ. ಇಂಥ ಗಾಂಧಾರಿ ಕುರುಡ ಗಂಡನನ್ನು ಕಟ್ಟಿಕೊಂಡು ತಾನೂ ಕಟ್ಟುಕುರುಡಾಗುವ ಸಹನಶೀಲಳೂ ಹೌದು. ಆದರೆ ಅಷ್ಟೇ ದುಡುಕುತನದ ಮನದವಳೂ ಸಹ. ಕುಂತಿಗೆ ಮೊದಲು ಮಕ್ಕಳಾದದ್ದು ಇವಳಿಗೆ ಮೊದಲ ಸೇಡಿಗೆ ಕಾರಣವಾಗುತ್ತದೆ. ಮೂಲದಂತೆಯೇ ಗರ್ಭವನ್ನು ಗುದ್ದಿ ಪುಡಿ ಮಾಡುತ್ತಾಳೆ. ಆದರೆ ಜನಪದದಲ್ಲಿ ಗರ್ಭ ಗುದ್ದಿಕೊಳ್ಳಲಿಕ್ಕಿದ್ದ ಸಕಾರಣಕ್ಕೆ ನಾಗುರುಸಿ ಶಾಪವನ್ನು ತಂದು ಅದು ಗಾಂಧಾರಿಯ ಕನಸಿನಲ್ಲಿ ಕಂಡು ನಡೆಯುವಲ್ಲಿಯೇ ಮೊದಲಿಗೆ ತನ್ನ ಯತ್ನ ಮುರಿದುಬೀಳುವ, ಕಾರ್ಯ ಕೈಗೂಡದಿರುವ ವೇದಿಕೆಯಾಗುತ್ತದೆ. ಇದು ಕೊನೆಯವರೆವಿಗೂ ಸಾಗಿ ಬರುತ್ತದೆ. ಹೀಗೆ ಗಾಂಧಾರಿ ಗರ್ಭ ಗುದ್ದಿಕೊಂಡ ಅನಂತರ ಮತ್ತೆ ಕಾಣಿಸಿಕೊಳ್ಳುವುದು 'ಗಜಗೌರಿವ್ರತ'ದ ಸಂದರ್ಭದಲ್ಲಿ ಅದು ಅವಳಿಚ್ಛೆಯ ಫಲ, ವ್ರತ. ಅದಕ್ಕೆ ಕುಂತಿಯ ಮಕ್ಕಳ ಕರೆಯಬಾರದಪ್ಪ, ಆ ಕುಂತೀನ ಸೈತ ಕರೆಯಕೂಡದಪ್ಪ' ಎಂದು ತಿಳಿಯದ ಮಕ್ಕಳಿಗೆ ತಿಳಿಸುವ ಕುಟಿಲ ಸ್ತ್ರೀಯಾಗಿಯೂ ಕಾಣುತ್ತಾಳೆ. ಅಂತೆಯೇ ದುರ್ಯೋಧನನನ್ನು ವಜ್ರಕಾಯನನ್ನಾಗಿ ಮಾಡುವ ಸನ್ನಿವೇಶವಂತೂ ಆಪ್ತವಾದದ್ದು ಮಗನ ಬಗೆಗಿನ ಮಮಕಾರದಿಂದ ಕೂಡಿದುದು. 'ವಿಧಿಯಾಟದ ಮುಂದೆ ಯಾರುತಾನೆ ಮುಂದೆ' ಎಂದು ಅವಳೇ ಹೇಳುವಂತೆ ಅಲ್ಲಿ ನಡೆದದ್ದೇ ಬೇರೆ. ಅದಕ್ಕೆ ಅವಳ ಪ್ರತಿಕ್ರಿಯೆ ಎಂತಹುದು' "ಕೆಟ್ಯೆಲ್ಲೊ ಮಗನೆ, ಕಟ್ಟಿದ್ದಿ ಯಾಕೊ ವಸ್ತ್ರವನ್ನು, ಹಣ, ಇದ್ದೋನ ಕೂಡುದ್ರು ಋಣ ಇದ್ದಷ್ಟೇ" ಎನ್ನುವ ಮಾತು ಸಕಲ ಸೈನ್ಯ ಹೊಂದಿದ್ದ ಕೌರವನು ಕೊನೆಗೂ ವಿಧಿಬಲವಿಲ್ಲದೆ ಸಾವನ್ನಪ್ಪುವ ನಿಯಮವನ್ನು ಗಾಂಧಾರಿ ಮೂಲಕ ಜನಪದಕಾರ ನಿರೂಪಿಸುತ್ತಾನೆ. ಮುಂದೆ ಕುಂತಿಯು ಕರೆದ

ಗಜನೊಂದಿಗೆ ಬಂದು ಕೃಷ್ಣನ ಕುಟಿಲತೆಯಿಂದೆ ಬಂದ ಕಣ್ಣಿಂದ ಪಾಂಡವರ ವೈಭೋಗವನ್ನು ಕಂಡೂ ಹೊಟ್ಟೆ ಉರಿಪಡುವುದನ್ನು ಕಾವ್ಯದಲ್ಲಿ ಕಾಣಬಹುದು.

ಹೀಗೆ ಕೇವಲ ಎರಡು–ಮೂರು ಪ್ರಸಂಗಗಳಲ್ಲಿ ಬಂದು ಮರೆಯಾಗುವ. ಗಾಂಧಾರಿ 'ವಚನಭಾರತ'ದಲ್ಲಿ ಕೊನೆಯವರೆಗೂ ಕಾಣಿಸಿಕೊಳ್ಳುತ್ತಲೇ ಬರುತ್ತಾಳೆ. ಅದರಲ್ಲಿನ ಸ್ತ್ರೀ ಪರ್ವದಲ್ಲಿ ಗಟ್ಟಿ ನಿಟ್ಟುಸಿರುಗರೆಯುವ ಅವಳು (ದುರ್ಯೋಧನಾವಸಾನದ ಅನಂತರ) ಕಣ್ಣಿಗೆ ಕಟ್ಟಿದ್ದ ಬಟ್ಟೆಯ ಮೂಲಕ ಯುಧಿಷ್ಠಿರನ ಬೆರಳನ್ನು ನೋಡಿದಾಗ ಅವು ಕಂದಿ ಹೋಗುವ ಚಿತ್ರಬರುತ್ತದೆ. ಆದರೆ ಸ್ವಲ್ಪದರಲ್ಲಿಯೇ ದ್ರೌಪದಿಯನ್ನು ಕುರಿತು" ಅಳಬೇಡ ತಾಯಿ! ನನ್ನನ್ನು ನೋಡಿ ಸಮಾಧಾನ ಮಾಡಿಕೊ! ಇದು ಲೋಕ ಕ್ಷಯದ ಕಾಲ; ನಡೆಯಬೇಕಾದದ್ದು ನಡೆದು ಹೋಯಿತು. ಅದು ನಮ್ಮ ಅಧೀನವಲ್ಲ; ನಿನ್ನ ಮಕ್ಕಳೂ ಸತ್ತರು; ನನ್ನ ಮಕ್ಕಳೂ ಸತ್ತರು; ಅವರಿಗಾಗಿ ಅಳಬೇಡ" ಎನ್ನುತ್ತಾ ಸಂತೈಸುವ ಸಹನಾ ಗುಣವೂ ಅವಳಲ್ಲಿತ್ತು. ಕೃಷ್ಣನನ್ನು ಕುರಿತು 'ಗಂಡ–ಮಕ್ಕಳನ್ನು ಕಳೆದುಕೊಂಡು ಗೋಳಾಡುತ್ತಿರುವ ಹೆಂಗಸರ ದುಃಖ ನನ್ನಿಂದ ತಡೆಯಲಾಗದು. ನೀನು ಸಂಧಿಗೆ ಬಂದಾಗಲೇ ನನ್ನ ಮಕ್ಕಳು ಸತ್ತರೆಂದು ತಿಳಿದೆ. ನಿನ್ನಿಂದ ಈ ಸರ್ವನಾಶವನ್ನು ತಡೆಯಬಹುದಿತ್ತು. ಇದರಿಂದ ಕುಲ ನಾಶಕ್ಕೆ ಕಾರಣನಾದ ನಿನ್ನನ್ನು ಕಳೆದುಕೊಂಡು ನಿನ್ನ ಕಡೆಯವರೂ ನಮ್ಮಂತೆ ಗೋಳಾಡಲಿ' ಎಂದು ದುಃಖಿಸುತ್ತಾಳೆ. ಇಲ್ಲಿ ಅವಳು ಕೃಷ್ಣನ ಕುಟಿಲತೆಗೆ ಶಾಪ ನೀಡುವುದಕ್ಕಿಂತಲೂ ಹೆಣ್ಣು ಮಕ್ಕಳ ವೇದನಾಭರಿತ ವಿರಹದ ಬೇಗೆ ಅಪ್ಪಳಿಸಿದ್ದು ಮುಖ್ಯವಾಗಿ ಸ್ತ್ರೀ ಸಹಜ ದುಃಖಕ್ಕೆ ಹೆಚ್ಚಾಗಿ ತನ್ನನ್ನು ಒಡ್ಡಿಕೊಂಡದ್ದಾಗಿ ಕಂಡುಬರುತ್ತದೆ. ಕೊನೆಗೆ ಆಶ್ರಮವಾಸಕ್ಕೆ ತೆರಳುತ್ತಾಳೆ; ಪುತ್ರ ಶೋಕದಿಂದ ಬೇಯುತ್ತಾಳೆ. ವ್ಯಾಸನ ಕೃಪೆಯಿಂದ ಗಂಗಾನದಿಯಲ್ಲಿ ಇಡಿ ಕುರುವಂಶವನ್ನು ಕಂಡು ನೆಮ್ಮದಿ ಕಾಣುವಳು. ಕೊನೆಗೆ ಉಗ್ರತಪಸ್ಸನ್ನಾಚರಿಸುತ್ತಾ ಕಾಡಿನಲ್ಲಿ ಸಂಚರಿಸುವಾಗ ಕಾಡ್ಗಿಚ್ಚಿಗೆ ಸಿಕ್ಕಿ ಸತ್ತಳು. ಇದು ಅವಳ ವೃಥಾ ವೃತ್ತಾಂತ.

ಆದರೆ ಜನಪದ ಕವಿಗೆ ಅವಳ ಬಗೆಗೆ ಅಷ್ಟು ಪ್ರೀತಿಯಿಲ್ಲ. ಅವಳ ಬಗ್ಗೆ ಸೇಡಿನ ಕಿಡಿಕಾರಿ ಅವಳನ್ನು ಮರೆಯಾಗಿಸಿಬಿಡುತ್ತಾನೆ. ಕೊನೆಗೆ ಧೃತರಾಷ್ಟ್ರನೊಬ್ಬನೆ ಉಕ್ಕಿನ ಬೊಂಬೆ ಶಾಖದಿಂದ ಸಾಯುವುದಾಗಿ ತಿಳಿಸಿ ಗಾಂಧಾರಿಯ ಕೊನೆಯನ್ನು ಬಿಟ್ಟು ಬಿಡುತ್ತಾನೆ. ಹೀಗೆ ತಾಳ್ಮೆ ಗುಂದುವ ಮೂಲಕವೇ ಕಾಣಿಸಿಕೊಳ್ಳುವ ಗಾಂಧಾರಿ ಕೊನೆಗೆ ಪೂರ್ಣ ಪ್ರಮಾಣದ ತಾಳ್ಮೆಯನ್ನು ಹೊಂದಿ, ಹೊಟ್ಟೆಕಿಚ್ಚಿನಿಂದಲೇ ಸಾಗುವ ಅವಳೆಲ್ಲಾ ನಿಜಗುಣಗಳು ಪ್ರಸ್ತಾಪಿತವಾಗದೆ ಹೋಗುತ್ತದೆ. 'ವ್ಯಾಸಭಾರತ'ದಲ್ಲಿ ಅದನ್ನು ಪೂರಕವಾಗಿ ಕಟ್ಟಿಕೊಡುತ್ತಲೇ ಅವಳು 'ಕಿಚ್ಚಿನಿಂದ ಕಿಚ್ಚಿ'ನಲ್ಲೇ ನಂದಿಹೋಗುವುದು ಕಂಡುಬರುತ್ತದೆ.

- ಕುಂತಿ

ಹುಟ್ಟಿನಿಂದಲೂ ಬದುಕಿನ ಕೊನೆಗಳಿಗೆಯವರೆಗೂ ಬದುಕನ್ನು ಅತ್ಯಂತ ಬಿಕ್ಕಟ್ಟಿನ ನೆರಳಲ್ಲಿಯೇ ಮುಂದುವರೆಸುತ್ತಾಳೆ. ರೋಗಗ್ರಸ್ತ ಗಂಡನೊಂದಿಗೆ ಸಂಸಾರ ನಡೆಸಿ ಮಕ್ಕಳ ಮೇಲಿನ ಮಮತೆಯಿಂದ ಕಾಡುಮೇಡು ಅಲೆದು ಅನುಭವಿಸಿದ್ದನ್ನು ಹೇಳಲಾರದೇ ತೊಳಲಾಟ, ಸಂಕಟಗಳಿಂದಲೇ ಬದುಕು ಸವೆಸುತ್ತಾಳೆ. ಈ ರೀತಿಯ ನಡವಳಿಕೆಗಳಿಂದಲೇ ಆಪ್ತಳಾಗುತ್ತಾಳೆ. ಇವಳು ಕೌಂತೇಯನ ಮಗಳೆಂಬುದು ಮೂಲದ ವಿವರಣೆ. ಆದರೆ ಜನಪದದಲ್ಲಿ ಭೋಜರಾಜನ ಸಾಕುಮಗಳು. ಅವಳ ಹುಟ್ಟೇ ಕೃಷಿಯಾಚರಣೆಯ ಮೂಲಕ ಆಗುತ್ತದೆ. ಅದು ಅವಳ ತುಂಬುತನದ ಫಲ ಸಂಕೇತ. 'ಅರೆಕಲ್ಲು ಮೇಲೋದ್ರು ಅಂಬಲಿಗೆ ದಾರಿಯಾಗುವ'ಂತಹ ಗುಣ. ಮೂಲದಲ್ಲಿ ಕನ್ಯೆತನದಲ್ಲಿ ದೂರ್ವಾಸರ ವರದ ಫಲವಾಗಿ ಸೂರ್ಯಮಂತ್ರ ಜಪದಿಂದ ಕರ್ಣನ ಜನನವಾಗುತ್ತದೆ. ಲೋಕಾಪವಾದಕ್ಕೆ ಹೆದರಿ ಗಂಗೆಯಲ್ಲಿ ತೇಲಿ ಬಿಡುತ್ತಾಳೆ. ಇದು ಜನಪದದಲ್ಲಿ ವ್ಯತ್ಯಾಸಗೊಂಡಿಲ್ಲ. ಆದರೆ ಶಿವನ ಸ್ಮರಣೆಯ ಅವನ ಆಣತಿಯಂತೆ ಗಂಗೆ ಮಗುವನ್ನು ಅಂಬಿಗರ ಚೌಡಯ್ಯನಿಗೆ ನೀಡುವ ಕಲ್ಪನೆ ಹೊಸತಾಗಿದೆ. ಆಕೆ ಮದುವೆಯಾಗಿ ಪಾಂಡುವಿಗೆ ತನ್ನ ಪಾಪದಿಂದ ಹೆಂಡತಿ ಭೋಗ ಇಲ್ಲವಾಗಿ ಮುಂದಿನ ಪಾಪಕರ್ಮಗಳ ನೆನೆದು ಪತ್ನಿಯಲ್ಲಿ ಶೋಕಮಾಡಲು ಪೂರ್ವಾಶ್ರಮದ ಕರ್ಮಫಲವನ್ನು ಹಂಚಿಕೊಳ್ಳುತ್ತಾಳೆ. ಪಾಂಡುವಾದರೂ ಅದಕ್ಕೆ ಅನುಮತಿಯಿತ್ತು ಮಕ್ಕಳನ್ನು ಪಡೆಯುತ್ತಾರೆ. ಇದು ಜನಪದದಲ್ಲಿ ತಿಳಿಯುತ್ತದೆ. 'ವಚನಭಾರತ'ದಲ್ಲಿ ಭೀಮನ ಜರಣವನ್ನು ತಿಳಿಸುವಾಗ ತಾಯಿ ತೊಡೆಯ ಮೇಲಿಂದ ಮಗು ಕೆಳಗಿದ್ದ ಒಂದು ಬಂಡೆಯ ಮೇಲೆ ಉರುಳಲು ಮಗುವಿಗೆ ಬದಲಿಗೆ ಕಲ್ಲೇ ನೂರು ಚೂರಾಯಿತಂತೆ. ಇದನ್ನು ಕಂಡು ಅವಳು ಮಗುವನ್ನು ಯಾರಾದರೂ ಕಂಡಾರೂ ಎಂದು ಮುಚ್ಚಿಕೊಂಡಳಂತೆ. ಇದು ಉಳಿದ ಮಕ್ಕಳಿಗಿಂತ ಭೀಮನ ಮೇಲೆ ಅವಳಿಗಿದ್ದ ಪ್ರೀತಿ ಪ್ರತಿರೂಪವಾಗಿದೆ. ಅದನ್ನು ಏಕಚಕ್ರನಗರದಲ್ಲಿ ಭಿಕ್ಷೆ ಬೇಡಿತಂದು ಮಾಡಿದ ಅಡುಗೆಯನ್ನು ಅವನಿಗಾಗಿ ಎತ್ತಿ ಇಡುತ್ತಿದ್ದ ಚಿತ್ರದಲ್ಲೂ ಕಾಣಬಹುದು. ಹೊಟ್ಟೆ ತುಂಬಾ ಅನ್ನ ಕೊಡೋಳು ತಾಯಿ. ಅವಳು ನೀಡುವ ಅನ್ನ ಅನಾದೃಶವಾದದ್ದು. ಆಕೆ ಕೇವಲ ಅನ್ನ ನೀಡಿ ಕೈಬಿಡುವುದಿಲ್ಲ. ಹೊಟ್ಟೆ ತುಂಬಲಿ ಎಂಬ ಅನುಗ್ರಹಭಾವವನ್ನು ತನ್ನ ಹೊಟ್ಟೆ ತುಂಬಾ ತುಂಬಿಕೊಂಡಿರುತ್ತಾಳೆ. ಇಂಥ ಆರ್ದ್ರತೆ, ಜೀವಸೆಲೆ, ಸೃಷ್ಟಿಧಾರಣಶಕ್ತಿ ಹೊಂದಿದವಳಾಗಿ ಕುಂತಿ ಕಾಣಿಸುತ್ತಾಳೆ. ಅಂತೆಯೇ ಮಾದ್ರಿಯ ಹೊಟ್ಟೆಯಲ್ಲೂ ಮಕ್ಕಳಾಗುವಂತೆ ಮಂತ್ರೋಪದೇಶವನ್ನು ಮಾಡುತ್ತಾಳೆ. ಕೊನೆಗೆ ಪಾಂಡುವನ್ನು ಕಳೆದುಕೊಂಡಾಗ ತಾನೂ ಚಿತೆಯನ್ನೇರಲು ಹೊರಟಾಗ ಮಾದ್ರಿ "ಮಕ್ಕಳನ್ನು ನೀನೆ ಚೆನ್ನಾಗಿ ನೋಡಿಕೊಳ್ಳುತ್ತೀಯೆ" ಎಂದು ಅವಳೊಬ್ಬಳೇ ಚಿತೆ ಏರುತ್ತಾಳೆ. ಇಲ್ಲಿಯೂ ಕುಂತಿಯ ಮಾತೃ ಪ್ರೇಮ ಮಮಕಾರವೇ ಮೆರೆಯುತ್ತದೆ. ಗಾಂಧಾರಿ

ಗಜನೋಂಪಿ ಮಾಡಿ ಕುಂತಿಯನ್ನು ಕರೆಯದಿದ್ದಾಗ ಕುಂತಿ ದುಃಖ ಮಾಡುತ್ತಾಳೆ. ಇದರಿಂದ ಅವಳ ಮಕ್ಕಳು ನಿಜವಾದ ಐರಾವತ ತಂದು, ದೇವಲೋಕದ ಪಡಿ ಪದಾರ್ಥಗಳನ್ನೇ ತಂದು ವ್ರತ ಮಾಡಿಸುತ್ತಾರೆ. ಇದು ನಾಲ್ಕು ಪರ್ವಗಳಲ್ಲಿ ಚಾಚಿ ಹಬ್ಬಿದೆ. ಇದು ಕಥನಕಾರನ ನಿಷ್ಠೆಯನ್ನು ದುಷ್ಟ ಪಾತ್ರಗಳ ಪ್ರಭುತ್ವದ ಪ್ರತಿಭಟನೆಯನ್ನೂ ಸಣ್ಣದಾಗಿ ನಿರಾಕರಿಸಬಯಸುವ ಮನಸ್ಸನ್ನು ತೋರ್ಪಡಿಸುತ್ತದೆ. ಆದ್ದರಿಂದ ಕುಂತಿಗೆ ಮುತ್ತೈದೆತನವನ್ನು ಮರುಕಳಿಸಿ ಜೀವಪರ ನಿಲುವನ್ನು ತಳೆಯುತ್ತದೆ. ಅನಂತರದಲ್ಲಿ ಕಾಗೆಗಳಾಗಿ ಬರುವ (ಪಾಂಡವು ಮತ್ತೆ ಸ್ವರ್ಗಕ್ಕೋಗುವಾಗ) ಸಂದರ್ಭದಲ್ಲಿ ಆಕೆ ಗಾಳು-ಗೋಳು

"ಗಿಣಿ ಇಲ್ಲದ ಮ್ಯಾಕೆ ಪಂಜರವಿನ್ಯಾಕೆ
. . . .
ಹೆಣ್ಣಾಗಿ ಹುಟ್ಟುವಂತ ಕರ್ಮಾವ ಕೊಡಬ್ಯಾಡ
ಹೆಣ್ಣಾಗಿ ಹುಟ್ಟೋದ್ಕಿಂತ ಮಣ್ಣಾಗಿ ಹುಟ್ಟಿ
ಮಣ್ಣಿನಲ್ಲೊಂದು ಮರವಾಗಿ ನಾ ಹುಟ್ಟಿ
ಪುಣ್ಯವಂತರಿಗೆ ನೆರಳಾಬೇಕು
ಈ ಹೆಣ್ಣಿನ ಜಲುಮಾವ ಸುಡಬೇಕು ಶಿವನೆ"

ಎನ್ನುವಷ್ಟರ ಮಟ್ಟಕ್ಕೆ ಮುಟ್ಟುತ್ತದೆ. - ಇಲ್ಲಿ ಜನಪದ ಕಥನಕಾರ ತ್ರಿಪದಿಯೊಂದರ ಪ್ರತಿನಿರೂಪಣೆ ಕೊಟ್ಟರೂ ಸಹ ಕುಂತಿಯ ದುಃಖಿತದ ಮನೋ ಇಂಗಿತವನ್ನು ತಿಳಿಸುವುದಷ್ಟೇ ಅವನ ಉದ್ದೇಶವಾಗಿದೆ. ಮುಂದೆ ಅರಗಿನ ಮನೆಯಿಂದ ತಪ್ಪಿಸಿಕೊಂಡು ಹೋಗುತ್ತಾರೆ. ಈ ಸನ್ನಿವೇಶವನ್ನು 'ವಚನ ಭಾರತ'ದಲ್ಲಿ ಕೃಷ್ಣಶಾಸ್ತ್ರಿಗಳು 'ಈ ಕುಂತಿ ವಸುದೇವನ ತಂಗಿ, ಕುಂತಿ ಭೋಜನ ಮಗಳು, ವಿಚಿತ್ರ ವೀರ್ಯನ ಸೊಸೆ, ಪಾಂಡುವಿನ ಹೆಂಡತಿ; ಉಪ್ಪರಿಗೆಯ ಮನೆಯಲ್ಲಿ ಕಮಲದಂಥ ಹಾಸಿಗೆಯ ಮೇಲೆ ಮಲಗುತ್ತಿದ್ದ ಸುಕುಮಾರಿ; ಧರ್ಮ, ಇಂಧ್ರ, ವಾಯುಗಳಿಂದ ಮಕ್ಕಳನ್ನು ಪಡೆದವಳು; ಇಂಥವಳು ಆಯಾಸಪಟ್ಟು ನೆಲದ ಮೇಲೆ ಮಲಗಿ ನಿದ್ರೆ ಮಾಡುವುದನ್ನು ನೋಡುವುದಕ್ಕಿಂತ ದುಃಖ ತರಹವಾದದ್ದು ಇನ್ನೇನು ಇದ್ದೀತು?" ಎನ್ನುವಂತೆ ಅವಳ ಮುಂದಿನ ದಿನಗಳೆಲ್ಲವೂ ದುಃಖ ತರಹವಾದವುಗಳೇ ಆಗಿವೆ. ಭೀಮ ಹಿಡಿಂಬೆ ಪ್ರಸಂಗದಲ್ಲಿ ಹಿಡಿಂಬೆಯನ್ನು ಕುರಿತು ಮೃದುವಾಗಿಯೇ ನಡೆದುಕೊಳ್ಳುತ್ತಾನೆ. ಮುಂದೆ ಕುಂತಿ ನಿರ್ವಹಿಸಿದ ಮಾನವೀಯ ಘಟನೆಯಲ್ಲೊಂದಾಗುವ ಏಕಚಕ್ರನಗರಿಯ ಬಡಬ್ರಾಹ್ಮಣನ ದುಃಖ ನಿವಾರಣೆ; ಬಕಾಸುರನ ಉಪಟಳವನ್ನು ಮಗನಿಂದ ಮುಕ್ತಿಗೊಳಿಸಿದ್ದು ಇಡೀ ಭಾರತದ ಸಮಾಜೋಪಯೋಗಿ ಕಾರ್ಯವಾಗಿ ಗೋಚರಿಸುತ್ತದೆ. ದ್ರೌಪದಿಯನ್ನು ತಂದಾಗ 'ಎಲ್ಲರೂ ಹಂಚಿ ಉಣ್ಣಿ' ಎಂಬ ಪ್ರಸಂಗ ಮಾತ್ರ ಭಿನ್ನವಾಗುತ್ತದೆ. ಮೂಲದಲ್ಲಿ ತಾನು ಹೇಳಿದ ಮಾತಿಗೆ

ಧರ್ಮರಾಯನ ಕ್ಷಮೆ ಕೋರುತ್ತಾಳೆ. ಆದರೆ ಜನಪದದಲ್ಲಿ ಹಾಗೆಯೇ ನಡೆಯಬೇಕೆಂದು ತಾನು ಆಣೆ ಮಾಡುತ್ತಾಳೆ. 'ವಚನಭಾರತ'ದಲ್ಲಿ ದ್ರೌಪದಿಯನ್ನು ಕರೆದು ಭಿಕ್ಷೆ ತಂದುದನ್ನು ತೋರಿಸಿ "ಈ ಅನ್ನದಲ್ಲಿ ಮೇಲ್ಭಾಗವನ್ನು ತೆಗೆದುಕೊಂಡು ಬಲಿ ಅರ್ಪಿಸು, ಬ್ರಾಹ್ಮಣನಿಗೆ ಭಿಕ್ಷೆ ಹಾಕು, ಹತ್ತಿರ ಇರುವವರು ಯಾರಾದರೂ ಕೇಳಿದರೆ ಕೊಡು; ಆ ಮೇಲೆ ಮಿಕ್ಕದ್ದನ್ನು ಅರ್ಧಮಾಡಿ ಬಂದ ಅರ್ಧವನ್ನು ಭೀಮನಿಗೆ ಕೊಡು; ಅವನು ವೀರ; ಯಾವಾಗಲೂ ಅವನ ಊಟ ದೊಡ್ಡದು; ಮಿಕ್ಕ ಅರ್ಧವನ್ನು ಉಳಿದ ಆರು ಜನಕ್ಕೂ ಹಂಚಿಕೊಡು" ಎನ್ನುವಲ್ಲಿ ಜಿಜ್ಞಾಸೆಯೊಂದು ಏಳುತ್ತದೆ. ಅಂದರೆ 'ತಾಯಿ' ನೀಡುವ ಅನ್ನದಿಂದ ಹೊಟ್ಟೆ ತುಂಬಿತ್ತೋ, ಅವಳ ಅಂತರಂಗದ ಭಾವದ ಹಾರೈಕೆಯಿಂದ ತುಂಬುತ್ತದೋ ಎಂಬುದು. ಇವೆರಡನ್ನೂ ತನ್ನದಾಗಿಸಿಕೊಂಡಿದ್ದ ಮಾತೆ ಕುಂತಿಯಾಗಿ ಕಂಡುಬರುತ್ತಾಳೆ. ತನ್ನ ಮಗ ಇಷ್ಟನ್ನೇ ಉಣ್ಣಬಲ್ಲ ಎಂಬ ಜೀವಪರತೆ ಅವಳಲ್ಲಿ (ತಾಯಲ್ಲಿ) ಜಿನುಗುವುದು ಇಲ್ಲಿ ಗೋಚರಿಸುತ್ತದೆ. ಅಂತಹ ತಾಯ್ತನವು ಅವಳದು. 'ಅನ್ನಕ್ಕೆ ಆದರ ಮುಖ್ಯ'ವೆಂಬ ಹಳ್ಳಿ ಮಾತಂತೆ ಹಂಚಿ ಉಣ್ಣುವ ಅನ್ನಕ್ಕೆ ನಾಲಿಗೆಗಷ್ಟೇ ರುಚಿ ತೋರುವುದಷ್ಟೇ ಅಲ್ಲದೆ ಹೊಟ್ಟೆಯ ರುಚಿಯನ್ನು ತೀರಿಸುವ ಪ್ರಾಮುಖ್ಯತೆ ಇದೆ. ಅದು ಹೃದಯಭಾವದ್ದು ಎಂಬುದನ್ನು ಇದು ಕಟ್ಟಿಕೊಡುತ್ತದೆ.

ಮಾನವನ ಮೂಲಭೂತವಾದ ಅನೇಕ ಗುಣಗಳಿಗೆ ಪುರಾತನ ಸ್ಥಾನಮಾನ ನೀಡಿರುವ ಹಿನ್ನೆಲೆಯಲ್ಲಿ ಕುಂತಿಯ ಬದುಕಿಗೆ ಪೂರಕವಾದ ಮಾನವೀಯ ಜೀವಪರತೆಯ ಅನೇಕ ಅಲೆಗಳು ಬಂದದ್ದುಂಟು. ಹೀಗೆ ಬದುಕಿನ ಯಾವುದೋ ಘಟ್ಟದಲ್ಲಿ ಇದ್ದಕ್ಕಿದ್ದ ಹಾಗೆ (ಸಕಾರಣವಾಗಿಯೇ) ಕರ್ಣನನ್ನು ಭೇಟಿ ಮಾಡಿ ಮಾತೃತ್ವದ ಸಹಜ ವಾತ್ಸಲ್ಯದ ಮೂಲಕ ಸಂಬಂಧ ಮತ್ತು ಸಂಕಷ್ಟದ ಸ್ಥಿತಿಗೆ ಗುರಿಯಾಗುವಲ್ಲಿನ ಆಕೆಯ ಸ್ಥಿತಿಯಾದರೂ ಎಂತಹದ್ದು. ತನ್ನ ಭೇಟಿಯ ಉದ್ದೇಶ ಫಲ ನೀಡದಾಗ ಆಕೆಯ ಕೊನೆಯ ಅಸ್ತ್ರವಾದರೂ 'ತೊಟ್ಟ ಬಾಣ ತೊಡದಿರು' ಎನ್ನುವುದು. ಜೊತೆಗೆ 'ಕರ್ಣನ ಸಂಸ್ಕಾರ'ದ ಹೊಣೆಹೊತ್ತು ಬರುವುದು. ಇಲ್ಲಿ ಅವಳ ಮಾತೃಪ್ರೇಮದ ಮರುಕವು ಹೆಚ್ಚು ಕೆಲಸ ಮಾಡಿದರೂ ಅದು ಹೆಚ್ಚಾಗಿ ಪಾಂಡವರ ಮೇಲಿನದೇ ಆಗಿರುವುದಾಗಿ ಕಂಡರೂ ಅಂತರಾಳದಲ್ಲಿ ಕರ್ಣನ ಇನ್ನು-ಮುನ್ನಿನ ದುರಂತತೆಯ ಛಾಯೆಯು ಬೇಯುತ್ತಲೇ ಇರುತ್ತದೆಂಬುದಕ್ಕೆ ಅವಳ ಪಾಪದ ಬಗೆಗಿನ 'ಈ ಜನ್ಮದಲ್ಲಿ ಶಾಂತಿಯೂ ಇಲ್ಲ ಸಮಾಧಾನವೂ ಇಲ್ಲ ನಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ನರಳಿ ನರಳಿ ಸಾಯುತ್ತೇನೆ' ಎಂಬ ಮಾತು ಸಾಕ್ಷೀಭೂತವಾಗಿ ಗೋಚರಿಸುತ್ತದೆ. ಕೊನೆಗೆ 'ವಚನಭಾರತ'ದಲ್ಲಿ ಕುಂತಿ ಮಕ್ಕಳು ಗೆದ್ದು ಬಾಳುವಂತಹ ಕಾಲದಲ್ಲಿ ಗಾಂಧಾರಿ, ವಿಧುರ, ಧೃತರಾಷ್ಟ್ರರೊಡನೆ ಆಶ್ರಮಕ್ಕೆ (ತಪೋವನ) ಹೊರಟಾಗ ಅವಳನ್ನು ಯುಧಿಷ್ಠಿರ ತಡೆದಾಗ "ನಾನೂ ಕಾಡಿಗೆ ಹೋಗಿ ಇವರನ್ನು ಅತ್ತೆ ಮಾವಂದಿರಂತೆ ಶುಶ್ರೂಷೆ ಮಾಡಿಕೊಂಡಿರುತ್ತ ತನ್ನ

ಪಾಪಗಳನ್ನು ತೊಳೆದುಕೊಳ್ಳುತ್ತೇನೆ. ಕರ್ಣನ ವಿಚಾರವನ್ನು ನಾನು ಮೊದಲೇ ತಿಳಿಸದೆ ಇದ್ದುದ್ದು ಮಹಾಪ್ರಮಾದವಾಯಿತು. ಅವನನ್ನು ಮರೆಯಬೇಡ. ಅವನಿಗಾಗಿ ನೀನೂ ನಿನ್ನ ತಮ್ಮಂದಿರೂ ಒಳ್ಳೆಯ ದಾನಗಳನ್ನು ಕೊಡಿ. ಸಹದೇವನ ಮನಸ್ಸನ್ನು ನೋಯಿಸಬೇಡ. ಅವನಿಗೆ ನನ್ನಲ್ಲಿ ತುಂಬ ಪ್ರೀತಿ, ಯಾವಾಗಲೂ ದ್ರೌಪತಿಗೆ ಪ್ರಿಯವಾಗುವಂತೆ ನಡೆದುಕೊಳ್ಳಿ" ಎನ್ನುವ ಅವಳ ನುಡಿಗಳು ಮೆಚ್ಚುವಂತಹವು. ತನ್ನ ಮಕ್ಕಳಿಗಿಂತಲೂ ಸವತಿ ಮಕ್ಕಳಲ್ಲಿ ಆಕೆಗೆ ಹೆಚ್ಚು ವಾತ್ಸಲ್ಯ; ಮಮತೆ. ಹೀಗೆ ಕೊನೆಗೂ ತಪೋವನಕ್ಕೆ ತೆರಳಿ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಕಾಡ್ಗಿಚ್ಚಿಗೆ ಸಿಕ್ಕಿ ತನ್ನನ್ನು ದಹಿಸಿಕೊಳ್ಳುವುದರೊಂದಿಗೆ ಜನ್ಮಕ್ಕೆ ಸಾರ್ಥಕ ತಂದುಕೊಂಡ ಯಾತನಾಜೀವಿ. ಹೀಗೆ ತನ್ನ ಕುಟುಂಬದ ಬವಣೆ, ಸುಖ–ದುಃಖಗಳನ್ನು ಅನುಭವಿಸಿ ಸಾಮಾನ್ಯಳಾಗಿ ಮಾನವೀಯತೆಗೆ ತೆರೆದುಕೊಂಡು ಅವಳು ಬದುಕಿನ ರೀತಿ ಅನನ್ಯವಾಗಿದೆ.

'ಜನಪದ ಮಹಾಭಾರತ'ದಲ್ಲಿ ಆಕೆಯ ಜನನವು ಭೂಮಿಯ ಮೂಲಕ ಆಗುವುದನ್ನು ತಿಳಿಸುವುದರಿಂದ ಅದು ನೆಲದ ಪರಂಪರೆಯನ್ನು ಕಟ್ಟಿಕೊಡಲೆತ್ನಿಸುತ್ತದೆ. ಬೇಸಾಯವನ್ನೇ ಮೂಲ ಕಸುಬಾಗಿಸಿಕೊಂಡು ಬದುಕನ್ನು ನಡೆಸುವ ರೈತಾಪಿ ವರ್ಗ ಪೂಜಿಸುವ ಪಾಂಡವ ಕುಲಕ್ಕೂ ವ್ಯವಸಾಯಕ್ಕೂ ಸಂಬಂಧವಿದೆ. ಆದ್ದರಿಂದಲೇ ಜನಪದಕವಿ ಕುಂತಿಯ ಹುಟ್ಟಿನ ಸಂದರ್ಭದಲ್ಲಿ ಹಾಡುವಾಗ, ವ್ಯವಸಾಯದ ಸಂಬಂಧಿತ ಕ್ರಿಯಾಚರಣೆಗಳನ್ನು ತರುತ್ತಾನೆ. ಅದು 'ಮಣ್ಣೊಕ್ಲಹಬ್ಬ', ಇದು ಇಂದು ಒಕ್ಕಣೆ ಸಂದರ್ಭದಲ್ಲಿ ರೈತರು ಆಚರಿಸುವ ನಿಯಮಗಳನ್ನೇ ಕಟ್ಟಿಕೊಡುತ್ತದೆ. ಅಲ್ಲದೆ 'ಅವರೆ' ಬಿತ್ತನೆಯನ್ನು ಸಾದರಪಡಿಸುವ ಕುಂತಿಯಿಂದಾಗಿ ಆ ಹೂವಿನಿಂದಲೇ ಕುಂತಿ ಪೂಜೆ ನೆರವೇರಿಸುವ ಆಚರಣೆ ಇಂದಿಗೂ ಪ್ರಚಲಿತವಾಗಿದೆ. ಇಲ್ಲಿ ಹೆಣ್ಣು ಮಕ್ಕಳದೇ ಮೇಲುಗೈ. (ಕುಂತಿಪೂಜೆ, ಕುರಿತ ವಿಸ್ತೃತ ಅಧ್ಯಯನಕ್ಕೆ ಡಾ. ಪುಟ್ಟಸ್ವಾಮಿ ಅವರ "ಕನ್ನಡ ಜಾನಪದದಲ್ಲಿ ರಾಮಾಯಣ ಮಹಾಭಾರತ", ಡಿ.ಲಿಂಗಯ್ಯ ಅವರ 'ಕೊಂತಿಪೂಜೆ' ಪುಸ್ತಕಗಳನ್ನು ಗಮನಿಸಬಹುದು) ಹೀಗೆ ಕುಂತಿ ಭಾರತ ಕಥೆಯಲ್ಲಷ್ಟೇ ಉಳಿದು ಹೋಗದೆ ಇಂದಿಗೂ ಜನಪದ ಜನಮನದಲ್ಲಿ ತನ್ನ ಪಡಿನೆಳಲನ್ನು ಗಾದೆ, ಒಗಟು, ಐತಿಹ್ಯಗಳ ನೆಲೆಗಳೊಳಗೆ ಕಂಡುಬರುವುದನ್ನು ಕಾಣಬಹುದಾಗಿದೆ.

ಮಾದ್ರಿ

'ಮಹಾಭಾರತ'ದೊಳಗೆ ಶೃಂಗಾರ ಸಾರಂಗದಲ್ಲಿ ಏರಿ ಹೊರಟು ಅಷ್ಟೇ ಬೇಗ ಬಿರುಸಿನ ಆಘಾತ–ಅಪಘಾತದ ದುರಂತಕ್ಕೆ ಹೀಡಾಗುವಂತಹ ದುರಿತವನ್ನು ಕಂಡವಳು ಈಕೆ. ಮಾದ್ರಿಯು ಪಾಂಡುರಾಜನಿಗೆ ಪತ್ನಿಯಾಗುವ ಭಾಗ್ಯದೊರೆತದಾದ್ದರೂ ಅವಳ ಸೌಂದರ್ಯದಿಂದಲೇ. ಅದನ್ನು 'ವಚನಭಾರತ' "ಅವಳು ತುಂಬಾ ರೂಪವತಿಯೆಂದು ಪ್ರಸಿದ್ಧಿವಿತ್ತು; ಆದ್ದರಿಂದ ಮದ್ರರಾಜನಿಗೆ ಯಥೇಚ್ಛವಾದ ಹಣಕೊಟ್ಟು ಭೀಷ್ಮನು ಅವಳನ್ನು ಕೊಂಡು ತಂದನು" ಎನ್ನುತ್ತದೆ. ಜನಪದಕವಿ ಕುಂತಿ ಜೊತೆ ಆಡಿ ಬೆಳೆದವಳು ಒಂದೆಡೆ ಇರಲಿ ಎಂಬ ಭೋಜರಾಜನ ಅಪೇಕ್ಷೆಯಂತೆ ಅವಳು ಪಾಂಡುವನ್ನು ವರಿಸಿದ್ದಾಳೆಂದು ತಿಳಿಸುತ್ತದೆ. ಆದರೇನು ಫಲ ಮಾದ್ರಿ ಅವನ ಸೇವೆಯ ಮುಡಿಪಾಗಿ ತಾನೂ ನೊಂದು, 'ಸುಖ' ಪಡೆದು ಅವನೊಂದಿಗೆ ಲೀನವಾಗುವ ಕಿರಿಪಾತ್ರವಾಗಿ ಕಂಡರೂ ಅವಳು ಭಾರತದೊಳಗೆ ನೆಲೆ ನಿಂತವಳು; ಅದು ಪಾಂಡು–ಮಾದ್ರೀ ಪ್ರಸಂಗವಾಗಿ.

ಈ ಪ್ರಸಂಗದ ಮೂಲವೇ ಲೈಂಗಿಕ ಪ್ರವರ್ತನೆಯಲ್ಲಿದೆ. ಪಾಂಡುವಿನ ಶಾಪಕ್ಕೂ ಮರಣಕ್ಕೂ ಕಾರಣವು ಇದೇ ಆಗಿದೆ. ಈ ಪ್ರವರ್ತನೆ ಎರಡು ಹಂತಗಳಲ್ಲಿ ಕೆಲಸ ಮಾಡುತ್ತದೆ. ಮೂಲದಲ್ಲಿ ಋಷಿಮುನಿಗಳು ಜಿಂಕೆಯ ರೂಪ ತಳೆದು ರಮಿಸಲು ತೊಡಗುವುದು ಒಂದು ಹಂತ; ಪಾಂಡು ತನ್ನ ಮಡದಿಯೊಡನೆ ಕೂಡುವುದು ಇನ್ನೊಂದು ಹಂತ. ಇದು ಜನಪದದಲ್ಲಿ ಪಾರ್ವತಿ ಪರಮೇಶ್ವರರು ಜಿಂಕೆಗಳಾಗಿ ಬಾರೆ ಕಟ್ಟಾಡುವುದಾಗಿ ಬರುತ್ತದೆ. ಈ ಎರಡು ಹಂತಗಳು ಮೊದಲನೆಯದು ಬೀಜವಾದರೆ, ಎರಡನೇಯದು ಫಲವಾಗುತ್ತದೆ. ಪಾರ್ವತಿ ಪರಮೇಶ್ವರ ಅಥವಾ ಮುನಿ ದಂಪತಿಗಳು ಮೃಗಧಾರಿಗಳಾಗಿ ಕಾಮಕೇಳಿಯಲ್ಲಿ ತೊಡಗುವುದು ಸ್ವಚ್ಛಂದಾಪೇಕ್ಷೆಯಾಗಿ ಕಂಡುಬಂದರೆ, ಶಾಪವನ್ನು ಕಡೆಗಣಿಸಿ ಪಾಂಡು ಮಾದ್ರಿಯನ್ನು ಕೂಡಲೆಳೆಸಿದ್ದು ಉನ್ಮತ್ತತೆಯ ಸ್ಥಿತಿಯಾಗಿ ಗೋಚರಿಸುತ್ತದೆ. ಆದರೆ ಮುಖ್ಯವಾದ ಅಂಶವೆಂದರೆ 'ಸಾಧಾರಣತೆ'ಯನ್ನು ಮೀರಿದ ಎರಡೂ ಕ್ರಿಯೆಗಳು ದುರಂತದೆಡೆಗೆ ಹೋಗುವುದು ಮುಖ್ಯವಾಗಿ ನಿಲ್ಲುತ್ತದೆ. ಇಲ್ಲಿ ರೂಪಧಾರಿಗಳಾದ ಶಿವಪಾರ್ವತಿಯರಲ್ಲಿ ಶಿವನನ್ನು, ಮೂಲದಲ್ಲಿ ಮುನಿಯನ್ನು ಕೊಂದದ್ದು ತಪ್ಪಾಗುವುದಿಲ್ಲ. ಆದರೆ ಉನ್ಮತ್ತತೆಯಲ್ಲಿದ್ದಾಗ ಕೊಂದದ್ದು ಅಂದರೆ ಸಂಭೋಗ ಕ್ರಿಯೆ ನಡೆಯುವ ತನಕ ಕಾಯದೇ ಆತುರತೆಯ ಕಾರ್ಯವನ್ನು ಮಾಡಿಸಿದ್ದು, ತಪ್ಪು. ಅದಕ್ಕಾಗಿ ಅಂತಹ ಸ್ಥಿತಿಯಲ್ಲಿ ಸಾಯುವ ಮತ್ತು ಅಂತಹ ಸ್ಥಿತಿ ವಂಚಿತನಾಗಿ ಬಾಳುವ ಶಾಪಕ್ಕೆ ಗುರಿಯಾಗಬೇಕಾಯಿತು ಪಾಂಡು. ಹೀಗೆ ಪಾಂಡು ಶಾಪಕ್ಕೀಡಾಗಿ ತಪೋನಿರತನಾಗಿ, ಭಗ್ನವಿರಹಿಯಾಗಿ ಕಾಲ ಕಳೆಯುವಾಗ ಮಾದ್ರಿ

ಒಬ್ಬಳೇ ಅವನೆಡೆಗೆ ಹೋದಳು ಪತಿಸೇವೆಗಾಗಿ. ಆದರೆ ಒಮ್ಮೆ ಹುಣ್ಣಿಮೆಯ ರಾತ್ರಿಯಲ್ಲಿ ಚಿತ್ರರಥ ರಾಜಾ ತನ್ನ ಹೆಂಡತಿ ಜೊತೆ ರತಿ ಸುಖವನ್ನು ಪಡೆಯುತ್ತಲಿದ್ದ ಸಂತೋಷ ಗಳಿಗೆಯನ್ನು ಪಾಂಡುವು ಇವಳಿಗೆ ತೋರಿಸಿದಾಗ 'ನಾಚಿ ತಲೆತಗ್ಗಿಸಿ' ಕೊಂಡಾಗಲೇ ಪಾಂಡುವಿಗೆ ತಲೆ ತಿರುಗಿದ್ದು, ಆದ್ದರಿಂದ ಅವಳನ್ನು ಭರಸೆಳೆದು ಎದೆಗಪ್ಪಿಕೊಳ್ಳುತ್ತಾನೆ. ಮಾಯೆಯ ಕತ್ತಲು ಕವಿಯುತ್ತದೆ; ಸುಖದ ಕಟ್ಟ ಕಡೆಯಲ್ಲಿ ತೇಲಿ ಮುಳುಗುತ್ತಾರೆ. ಹೀಗೆ ಇಲ್ಲಿ ಮಾದ್ರಿ ಹೊಸ ವಿಲಾಸ ಬೀರುವ ಪಾಂಡುವಿಗೆ ಉನ್ಮತ್ತತೆಯ ಸ್ಥಿತಿಗೆ ಏರುವಂತಾಗುವ ಮಾಧ್ಯಮವಾಗುತ್ತಾಳೆ. ಮೊದಲೇ ತಿಳಿಸಿದಂತೆ ಮಾದ್ರಿ ಚೆಲುವು ಪಾಂಡುವನ್ನು ಕಂಗೆಡಿಸುತ್ತದೆ. ಕುಂತಿಯೊಡನೆ

> "ಅಕ್ಕ ನನ್ನದೇನು ತಪ್ಪೆಂದು ಹೇಳಲಿ?
> ಅವರೇ ಕರ್ದು ನನ್ನ ಹೂದಮಿಕೊಂಡರು
> ಆಕಾಶದಲ್ಲಿ ಹೋಗೊ ಗಂಧರ್ವರ ಕಂಡು
> ಅವರಂತೆ ನಾವು ಸುಕಪಡಬೇಕೆಂದು
> ಹೂದಮಿಕೊಂಡು ಈ ಹಾಳಾದೋಳ
> ತಪ್ಪಾಗಿ ಹೋಯಿತ ಏನು ಮಾಡಲೆ ಅಕ್ಕ
> ಇವರು ಸಾಯೋದ್ಕು ನಾನೆ ಕಾರಣ ಆದಮ್ಯಾಲೆ
> ನಾನು ಇವ್ರಜೊತೆ ಸಾಯುತೀನಕ್ಕ"

ಅಂತ ಬಾಯಿ ಬಡಿದು ಕಣ್ಣೀರ ಕೋಡಿ ಹರಿಸುವ ಮಾದ್ರಿಯ ಮಾತುಗಳಲ್ಲಿ ಪಾಂಡು ತನ್ನ ಮೇಲಿದ್ದ ಶಾಪವನ್ನು ಉಪೇಕ್ಷಿಸಿ ಬುದ್ಧಿಹೀನತೆಗೆ ಒಳಗಾಗಿ ಮರಣವನ್ನು ತಂದುಕೊಂಡಿದ್ದರಲ್ಲಿ ಮಾದ್ರಿಯ ಪೂರ್ಣ ಸಹಕಾರದ ಭಾಗಿತ್ವದ ನುಡಿಗಳಾಗಿ ಇವು ಗೋಚರಿಸುತ್ತವೆ. ಅದನ್ನೇ ಪಂಪ 'ಕ್ರೀಡಾನುಶೀಲೆ'[೧] ಎಂಬ ಮಾತಿನಿಂದ ಬಳಸುತ್ತಾನೆ. ಅವಳ ಸಹಗಮನ ಪ್ರಸಂಗದ ಪ್ರಸಂಗದಲ್ಲಿ ಕುಂತಿಯೊಂದಿಗೆ ತಾನು ಸಹಗಮನಕ್ಕೆ ಮುಂದಾಗುವ ದೃಶ್ಯದಲ್ಲಿ ಕುಂತಿ "ನೀನೆ ಧನ್ಯೆ! ನನಗಿಂತ ಪುಣ್ಯವಂತೆ; ನೀನು ಮಹಾರಾಜನ ನಗುಮುಖವನ್ನು ಕಂಡೆ" ಎಂದು 'ವಚನ ಭಾರತ'ದಲ್ಲಿ ನುಡಿಯುತ್ತಾಳೆ. ಅಂತೆಯೇ ಪಾಂಡುವಿನ ಅನುಗಾಲದ ಹತ್ತಿರದವಳಾಗಿ ಇರಬೇಕೆಂದು ಮಾದ್ರಿ ಸಹಗಮನಕ್ಕೆ ನಿಶ್ಚಯಿಸಿ ತನ್ನ ಮಕ್ಕಳನ್ನು ಕುಂತಿಗೆ ಒಪ್ಪಿಸಿಕೊಡುವಾಗ 'ನಿನ್ನ ಮಕ್ಕಳನ್ನು ನಾನು ನೋಡಿಕೊಳ್ಳುವುದಕ್ಕಿಂತ ಚೆನ್ನಾಗಿ ನೀನು ನನ್ನ ಮಕ್ಕಳನ್ನು ನೋಡಿಕೊಳ್ಳುತ್ತೀಯೇ', ಎಂದು ಹೇಳುತ್ತಾಳೆ. ಹೀಗೆ ಮಾದ್ರಿ ತನ್ನ ಮೈಮರೆತನದಿಂದುಂಟಾದ ಸಂಗತಿಗೆ ತಾನೇ ಆಹುತಿಯಾಗುವುದು ಕರುಣಾರ್ದ್ರವಾಗಿ ಕಂಡುಬರುತ್ತದೆ.

---

[೧] ಡಿ.ಎಲ್.ನರಸಿಂಹಾಚಾರ್ – ಶಬ್ದವಿಹಾರ–ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

ಪಂಪ–ಕುಮಾರವ್ಯಾಸ ಇವರುಗಳು ಮಾದ್ರಿ–ಪಾಂಡು ಪ್ರಸಂಗವನ್ನು ಶೃಂಗಾರದ ಸೆಳವಿನಲ್ಲಿ ಚಿತ್ರಿಸಹೊರಡುತ್ತಾರೆ. ಆದರೆ ವ್ಯಾಸ ಮತ್ತು ಜನಪದಕವಿಗಳಿಗಿದ್ದ ದುಃಖಿತಭಾವದಿಂದ ಇವೆರಡರಲ್ಲೂ ಅದು ಕ್ರಿಯಾಶೀಲಗೊಳ್ಳದೆ ಶಾಂತಸ್ಥಿತಿಯಲ್ಲಿಯೇ ಸಾಗಿಬರುತ್ತವೆ.

ಆದರೆ 'ವಚನಭಾರತ'ದಲ್ಲಿ ಒಮ್ಮೆ ಪಾಂಡುವನ್ನು ಕುರಿತು ಮಾದ್ರಿಯು "ನಾಥ! ನೀನು ಇಂಥ ಸ್ಥಿತಿಯಲ್ಲಿದ್ದೀಯಲ್ಲಾ ಎಂದಾಗಲಿ ಸವತಿಯ ಕೈಗೆಳಗಿದ್ದೇನಲ್ಲಾ ಎಂದಾಗಲಿ ನನಗೆ ಕೊರಗಿಲ್ಲ; ಗಾಂಧಾರಿಗೆ ನೂರು ಮಕ್ಕಳಾದವು; ಅದಕ್ಕೂ ನಾನು ಯೋಚಿಸುವುದಿಲ್ಲ. ಆದರೆ ಕುಂತಿ ಮಕ್ಕಳಾಗಿ ಅವಳಿಗೆ ಸರಿಸಮಳಾದ ನನಗೆ ಮಕ್ಕಳಾಗದಿರುವುದು ತುಂಬ ಕೊರಗನ್ನುಂಟು ಮಾಡಿದೆ; ಈಗ ಕುಂತಿಯ ಮನಸ್ಸು ಮಾಡಿದರೆ ನನಗೂ ಮಕ್ಕಳಾದಾವು, ನಿನಗೂ ಸಂತೋಷವಾದೀತು. ಈ ವಿಷಯವನ್ನು ಸವತಿಯಾದ ಅವಳೊಡನೆ ನಾನೇ ಪ್ರಸ್ತಾಪಿಸಲು ಬಾಯಿಬಾರದು. ನನ್ನ ಮೇಲೆ ಕರುಣವಿಟ್ಟು ನೀನು ಕೇಳುವುದಾದರೆ ಕೇಳು" ಎನ್ನುವಲ್ಲಿ ಮನುಷ್ಯ ಸಹಜ ಮಾತ್ಸರ್ಯದ ಎಳೆಗಳನ್ನು ಕಂಡರೂ ಕೊನೆಯಲ್ಲಿ ಅವಳಾಡುವ 'ನೀನು ಹೆಚ್ಚು ಮಾತೃ ಹೃದಯಿ' ಎಂಬ ಮಾತು ಹೆಚ್ಚು ಆಪ್ತವಾಗುವಂತಹುದು.

ಹೀಗೆ ಎರಡೇ ಸನ್ನಿವೇಶಗಳಲ್ಲಿ ಹಾದುಬರುವ ಮಾದ್ರಿಯು ಭಾರತ ಕಥೆಯ ಇತರ ಸ್ತ್ರೀಗಳಿಗಿಂತಲೂ ಬದುಕಿನ ತುಂಬಾ ಬೇಗೆ ಅನುಭವಿಸಿ, ಕ್ಷಣಿಕ ಸುಖದ 'ಹೆಬ್ಬೇಗೆ'ಯಲ್ಲಿ ಬೆಂದು ಬಲಿಯಾದವಳು. ಅನೇಕ ದುರಂತತೆಗಳ ಭಾರತದಲ್ಲಿ ಮಾದ್ರಿಯ ಸ್ಥಿತಿ ತೀರಾ ಭಿನ್ನವಾದುದು; ಅಷ್ಟೇ ವಾಚನಾಗಮನ ಕೇಂದ್ರಿತವಾದ ಆರ್ದ್ರಭಾವದ ಸಂಗತಿಯಾಗಿದೆ. 'ವ್ಯಾಸಭಾರತ' ತನ್ನಲ್ಲಿ ಇದನ್ನು ಲಂಬಿಸದೆ ಅಲ್ಪ ಕಾಲದಲ್ಲೇ ದೀರ್ಘವಾಗಿ ನಿಲ್ಲಬಲ್ಲ ಪಾಂಡು ಮಾದ್ರಿ ಪ್ರಸಂಗ ತರುವಂತೆಯೇ ಜನಪದ ಕವಿ ಕೂಡ ಲಂಬಿಸದೆ ಅಲ್ಪವಾಗಿಯೇ ತೋರಿಸಿ ತೆರೆಗೆ ಸರಿಸಿಬಿಡುತ್ತಾನೆ. ಇದನ್ನೇ ಸಿ.ಪಿ.ಕೆ. ಒಂದೆಡೆ "ಕ್ಷಣದಲ್ಲಿ ನಡೆದುಹೋದ ದುರಂತ ಕರುಳಿರುತ್ತದೆ"[೧] ಎನ್ನುತ್ತಾರೆ. ಅಂತೆಯೇ ಮಾದ್ರಿಯು ತನ್ನ ವಿಲಾಪತೆಯನ್ನು ಮೆರೆದುದು ಕೊನೆಗೂ ತಾನೂ ಪಶ್ಚಾತ್ತಾಪದೆಡೆಗೆ ಸಾಗುವುದು ಹೆಚ್ಚು ಆಪ್ತವಾಗುತ್ತದೆ. ಹೀಗೆ ಮಾದ್ರಿಯು ತನ್ನ ಅನೇಕ ಗುಣಗಳಿಂದ ಮತ್ತೆ ಮತ್ತೆ ಭಾರತ ವಾಚಕರಿಗೆ ಕರುಣೆ ತುಂಬಿದ ಮುಗ್ಧಮಯಿಯಾಗಿ ಕಂಡುಬರುತ್ತಾಳೆ.

---

೧ ಕುಮಾರವ್ಯಾಸ – ಕನ್ನಡ ಭಾರತ – ಶ್ಯಾಮಸುಂದರಬಿದರಕುಂದಿ, ಪು. ೧೧೮.

ಸತ್ಯವತಿ (ದುರ್ಗಂಧಾದೇವಿ/ಸುಗಂಧಿನಿ)

ಇಡೀ ಮಹಾಭಾರತಕ್ಕೆ ಕಥಾಬೀಜವಾಗುವ ಈಕೆಯು ಹೆಚ್ಚು ಆಪ್ತತೆಯ ವಾತಾವರಣದಲ್ಲಿಯೇ ಸಾಗಿ ಬರುತ್ತಾಳೆ. 'ವ್ಯಾಸಭಾರತ'ದಲ್ಲಿ ಆಕೆಯ ಹುಟ್ಟನ್ನು ಕುಲಮೂಲದ ಹಿನ್ನೆಲೆಯಲ್ಲಿ ತರುವಂತೆಯೇ 'ಜನಪದಭಾರತ'ದಲ್ಲೂ ಮಚ್ಚೇಂದ್ರನಾಥನ ಕೊರಳಿಗೆ ನಾತದ ಹಾವನ್ನು ತಂದು ಹಾಕುವ ಮೋಹಿನಿ ರೂಪದಲ್ಲಿ ಬಂದು ಶಾಪಕ್ಕೆ ಗುರಿಯಾಗಿ ದುರ್ಗಂಧಿನಿಯಾಗುವ ಹಿನ್ನೆಲೆಯಲ್ಲಿ ಹೊಸತಾಗಿದ್ದು, ಅವಳು ಮೂಲದಂತೆ ದಾಸರಾಜನ ಕುಲದವಳಾದರೂ ಸಾಕು ಮಗಳಾಗಷ್ಟೇ ಬರುತ್ತಾಳೆ. ಅನಂತರದಲ್ಲಿನ ಪರಾಶರ ಮುನಿಗಳಿಂದ ಆಕೆ ಸುಗಂಧಿನಿಯಾಗುವ ಸನ್ನಿವೇಶ, ಮಂಜು ಮರೆಯಲ್ಲಿ ಕೂಡುವ ಚಿತ್ರವೆಲ್ಲಾ ಸಮಾನವಾಗಿಯೇ ಬರುತ್ತವೆ. ಅಲ್ಲದೇ ವೇದವ್ಯಾಸರ ಜನನವಾಗಿ 'ಹುಟ್ಟುವ ಕೂಸು ಕಷ್ಟ ಸುಖಕ್ಕಾಗುವ' ವರವನ್ನು ಪಡೆಯುತ್ತಾಳೆ. ಆ ಕಂದನಿಂದಲೇ ಶಂತುವಿನ ವಿಚಾರವನ್ನು ತಿಳಿಯುತ್ತಾಳೆ ಇದು ಹೊಸತು.

ಮುಂದೆ ಶಂತನು ಅವಳ ಸುಗಂಧದ ಪರಿಮಳಕ್ಕೆ ಮನಸೋತು ಅವಳನ್ನು ಮದುವೆಯಾಗಲಿಚ್ಛಿಸಿ ಅವಳ ತಂದೆಯನ್ನು ಕೇಳುವನು. ಈ ಸನ್ನಿವೇಶವನ್ನು ಸಿ.ಪಿ.ಕೆ. ಅವರು 'ದುಷ್ಯಂತ ಶಕುಂತಲೆಯರ ಪ್ರಣಯ ಪ್ರಸಂಗದೊಡನೆ ಹೋಲಿಸಿ ನೋಡಬೇಕು. ಎರಡು ಸಂದರ್ಭಗಳಿಗೂ ಬಾಹ್ಯದಲ್ಲಿ ಹೋಲಿಕೆಯಿದೆ; ಆದರೆ ಪಾತ್ರಗಳ ಸ್ವಭಾವದಲ್ಲಿ ಅಜಗಜಾಂತರ, ದುಷ್ಯಂತ, ಶಂತನು ಇಬ್ಬರೂ ಬೇಟೆಗಾಗಿ ಬಂದವರು. (ಹಿಂದಿನ ಕಾಲದಲ್ಲಿ ರಾಜರಿಗೆ ಬೇಟೆ, ಬೇಟ ಒಟ್ಟೊಟ್ಟಿಗೆ ಈಡೇರುತ್ತಿದ್ದವೇನೊ!) ಎರಡು ಕಡೆಗಳಲ್ಲೂ ಆವರಣ ಪ್ರತಿಕೂಲವಾದದ್ದು'[೧] ಎನ್ನುತ್ತಾರೆ. ಅಷ್ಟು ಅವನು ಅವಳನ್ನು ನೋಡಿ ಚಂಚಲವಾಗಿದ್ದ ಆದರೆ ಮೂಲದಂತೆಯೇ ಅವನಲ್ಲುಂಟಾದ ಚಂಚಲತೆ ವಿವಿಧ ಸ್ತರತೆಯ ತುಮುಲಗಳನ್ನು ಜನಪದ ಕವಿಯು ಹೆಚ್ಚಾಗಿ ಚಿತ್ರಿಸಿಲ್ಲ. ಸಂಕೀರ್ಣತೆಯಿಂದ ಅವರ ಪ್ರಸಂಗ ಸುಮ್ಮನೆ ತೇಲಿ ಬರುತ್ತದೆ. ಜನಪದದಲ್ಲಿ ಅವಳೊಂದಿಗಿನ ಮಾತಿಗಿಂತಲೂ ಅವಳ ತಂದೆಯೊಂದಿಗಿನ ಮಾತೇ ಹೆಚ್ಚಾಗಿ ಬರುತ್ತದೆ. ಆದರೆ ಅವಳನ್ನು ಪಡೆಯುವ ಹಂಬಲ ಉತ್ಕಟತೆಯಿಂದ ದುಃಖವನ್ನು ಪಡುತ್ತಾನೆ. ಕೊನೆಗೆ ಭೀಷ್ಮನ ಕಾಮದಹನ ಭಸ್ಮ ಪ್ರಕರಣದಿಂದ ಅವರ ವಿವಾಹವಾಗುತ್ತದೆ. ಆಕೆ ಮೀಗುಲಿಗನ ಮಗಳಾಗಿದ್ದರೂ ಚಕ್ರವರ್ತಿಯ ಐಶ್ವರ್ಯದ (ತಂದೆಯ ಆಸೆಯಂತೆ) ಪ್ರಲೋಭನೆಗೆ ಮಾರುಹೋಗಿ ಸ್ತ್ರೀ ಸಹಜ ಲಜ್ಜಾ ಸ್ವಭಾವವನ್ನು ಬಿಟ್ಟು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳಲಿಲ್ಲ. ಅವನ ಜೊತೆಗೆ ಅನುಗಾಲದ ಹೆಜ್ಜೆಯಿಟ್ಟು ನಡೆದು ಚಿತ್ರವೀರ್ಯ.

---

[೧] ಪಂಪ : ಕೆಲವು ಮುಖಗಳು, ಭಾರತೀ ಪ್ರಕಾಶನ, ಮೈಸೂರು, ಪುಟ ೧೦೩.

ವಿಚಿತ್ರವೀರ್ಯರೆಂಬ ಮಕ್ಕಳನ್ನು ಪಡೆಯುತ್ತಾಳೆ. ಶಂತನುವಿನ ಹಿರಿಯ ಪುತ್ರ ಭೀಷ್ಮನೊಡನೆ ಆಕೆ ತಾಯಿಗಿಂತಲೂ ಹೆಚ್ಚಾಗಿ ಪ್ರೀತಿಯಿಟ್ಟು ನಡೆಯುತ್ತಾಳೆ. ಏಕೆಂದರೆ ಅವಳನ್ನು ಭೀಷ್ಮ 'ಬಾ ತಾಯಿ! ರಥವನ್ನು ಹತ್ತು! ನಮ್ಮ ಮನೆಗೆ ಹೋಗೋಣ' ಎಂದು 'ವಚನಭಾರತ'ದಲ್ಲಿ ಕರೆತರುತ್ತಾನೆ. ಹಾಗೆಯೇ ಶಂತನು ಸ್ವರ್ಗಸ್ಥನಾಗಲು ಭೀಷ್ಮನು ಚಿತ್ರವೀರ್ಯನಿಗೆ ಪಟ್ಟಕಟ್ಟಿ ಸತ್ಯವತಿಗೆ ವಿಧೇಯನಾಗಿಯೇ ನಡೆದುಕೊಳ್ಳುತ್ತಾನೆ. ಮುಂದೆ ಅವರಿಗಾಗಿಯೇ ಜೀವ-ಜೀವನಪಣವಿಡಲೂ ಸಹ ಸಿದ್ಧನಾಗಿ ಅವರನ್ನು ಕಾಪಾಡುತ್ತಾನೆ. ಅದೆಲ್ಲ ಸತ್ಯವತಿ ಮೇಲೆ ತಂದೆಗೆ ಕೊಟ್ಟ ಮಾತು. ಕೊನೆಗೆ ಸತ್ಯವತಿ ತನ್ನ ಮಕ್ಕಳಲ್ಲಿ ಮಕ್ಕಳಾಗದಿದ್ದಾಗ ಭೀಷ್ಮನ ಮೊರೆಹೋದಾಗ ಅವನು ನಿಶ್ಚಲ ನಿರ್ಧಾರದಿಂದ ಕದಲಲಿಲ್ಲ ಇದರಿಂದ ಸತ್ಯವತಿಯು ಶೋಕತಪ್ತಳಾಗುತ್ತಾಳೆ. ಭೀಷ್ಮನನ್ನು 'ನೋಡುಭೀಷ್ಮ! ಶಂತನು ಮಹಾರಾಜನ ಸಂತತಿ ನಿನ್ನಲ್ಲಿಗೆ ಬಂದು ನಿಂತಿದೆ. ನೀನು ವೇದ ವೇದಾಂಗಪಾರಜ್ಞ; ಧರ್ಮವನ್ನು ತಿಳಿದವನು. ಆದ್ದರಿಂದ ನಿನ್ನಲ್ಲಿ ಭರವಸೆಯಿಟ್ಟು ಒಂದು ಮಾತು ಹೇಳುತ್ತೇನೆ. ಅದನ್ನು ನೀನು ನಡೆಸಿಕೊಡಬೇಕು. ನನ್ನ ಮಗನೂ ನಿನ್ನ ಪ್ರೀತಿಯ ತಮ್ಮನೂ ಆಗಿದ್ದ ವಿಚಿತ್ರವೀರ್ಯನು ಸಂತಾನವಿಲ್ಲದೆ ಸ್ವರ್ಗಸ್ಥನಾಗಿಬಿಟ್ಟ; ಕಾಶಿರಾಜಪುತ್ರಿಯರಾದ ಅವನ ರಾಣಿಯರು ರೂಪ ಯೌವನ ಸಂಪನ್ನೆಯರು; ಮಕ್ಕಳಾಗಬೇಕೆಂದು ಅವರಿಗೆ ಆಸೆ. ಆದ್ದರಿಂದ ನೀನು ಅವರಲ್ಲಿ ಮಕ್ಕಳನ್ನು ಪಡೆದು ನಮ್ಮ ಮನೆಯನ್ನು ಉಳಿಸಿಕೊಂಡು ಬರಬೇಕಾಗಿದೆ. ಇದು ನಿನಗೆ ಧರ್ಮ; ನನ್ನ ಅಭಿಲಾಷೆ; ಹಾಗೆಯೇ ರಾಜ್ಯದಲ್ಲಿ ಅಭಿಷಿಕ್ತನಾಗಿ ಪ್ರಜಾಪಾಲನೆ ಮಾಡು, ಸಂಸಾರ ನಡೆಸು; ನಿನ್ನ ಪಿತೃಗಳನ್ನು ಮುಳುಗಿಸಬೇಡ!''[೧] ಎನ್ನುವ ಅವಳಲ್ಲಿ ಭರತಕುಲದ ಬೀಜವನ್ನು ಫಲಿಸುವ ಹಂಬದ ತುಮುಲಗಳು ಎದ್ದು ಕಾಣುತ್ತದೆ. ಹೀಗೆ ಮುಂದಿನ ಭಾರತಕ್ಕೆ ಮೂಲವಾಗುತ್ತಾಳೆ. ಆದರೂ ಭೀಷ್ಮನ ನಿರಾಕರಣೆಯಿಂದ ಆಕೆಯಾದರೂ ತನ್ನ ಪೂರ್ವಕರ್ಮವನ್ನು ಭೀಷ್ಮನೊಡನೆ ಬಿಚ್ಚಿ ಹೇಳುತ್ತಾಳೆ. ಅದು ಅವಶ್ಯವೂ ಹೌದಾಗಿತ್ತು. ಅದನ್ನು ಕೇಳಿ ಭೀಷ್ಮನು ವ್ಯಾಸರಿಂದ ಮಕ್ಕಳನ್ನು ಪಡೆಯಲು ತನ್ನ ಸಹಮತಿ ವ್ಯಕ್ತಪಡಿಸುವನು. ಮುಂದೆ ವ್ಯಾಸರನ್ನು ನೆನೆದು ಅವರಿಂದ ಸೊಸೆಯರಲ್ಲಿ ಮಕ್ಕಳನ್ನು ಪಡೆದು ಮನೆತನದ ಉದ್ಧಾರಕ್ಕೆ ಅನುವು ಮಾಡುತ್ತಾಳೆ. ಆದರೆ ಅದರಲ್ಲಿನ ಫಲ ಮಿಶ್ರವಾದದ್ದು. ವ್ಯಾಸರ ಒಂದು ವರ್ಷದ ಅವಧಿಯನ್ನು ಆಕೆ ಒಪ್ಪದೆ ಆತುರವನ್ನು ಪ್ರದರ್ಶಿಸುತ್ತಾಳೆ. ಇದು ಮಕ್ಕಳಿಲ್ಲದೆ ರಾಜ್ಯ ಅರಾಜಕತೆ ಎಡೆಗೆ ಸಾಗುತ್ತದಲ್ಲ ಎಂಬ ಸದುದ್ದೇಶದಿಂದಲೇ ಅವಳು ಈ ಕಾರ್ಯ ಮಾಡಿದರೂ ಅಕಾಲ ಫಲದಿಂದ ಅವಳ ಆತುರತೆಯ ಸ್ವಭಾವವೇ ಬೇರೆಯಾಗುತ್ತದೆ. ಆದರೆ ಜನಪದದಲ್ಲಿ ಇದು ಸ್ವಲ್ಪ ಬದಲಾಗಿದ್ದು, ತಾಯಿ ಮಾತಿಗೆ ಮರುಮಾತಾಡದೆ ವ್ಯಾಸರು ವಿಧಿಯ (ನಾರಾಯಣನ ಲೀಲೆ) ನಿಯಮವೆಂದು

---

[೧] ವಚನಭಾರತ – ಎ.ಆರ್.ಕೃಷ್ಣಶಾಸ್ತ್ರೀ.

ಹೇಳಿಬಂದು ಹುಣ್ಣಿಮೆಯ ದಿನ ಸತ್ಯವತಿಯ ಸೊಸೆಯರನ್ನು ಕೂಡುತ್ತಾನೆ. ಅಲ್ಲಿ ಅವನು ಕಾಲವನ್ನು ಕೇಳುವುದೇ ಇಲ್ಲ. ಆದರೆ 'ವ್ಯಾಸಭಾರತ'ದಲ್ಲಿ ಸತ್ಯವತಿ ವ್ಯಾಸರ ಒಂದು ವರ್ಷದ ವ್ರತದ ಬಗ್ಗೆ ಮತ್ತು ಅವನು ಸೊಸೆಯರನ್ನು ಕೂಡಲಿಕ್ಕೆ ಒಪ್ಪಿದ್ದನ್ನು ಸುಜನಾ ಅವರು "ಮಗನ ಸಾಧಾರಣ ಸಮ್ಮತಿಗೆ ಹಿಗ್ಗುತ್ತಾಳೆ; ಆದರೆ ವ್ರತ ನಿಯಮಕ್ಕೆ ಕುಗ್ಗುತ್ತಾಳೆ"[೧] ಎನ್ನುತ್ತಾರೆ. ಆದರೆ ಅವಳ ಆತುರತೆ- ಸ್ವಸುಖಕ್ಕಷ್ಟೇ ಅಲ್ಲದೆ ಸಂತಾನದ ಹಿತವಷ್ಟೇ ಮುಖ್ಯವಾದದ್ದು. ಅವಳು ಅಹಿತ ಸುಖದ ಅರಿವು ಅವಳನ್ನು ಕಾಡಿದ್ದರಿಂದ ಸೊಸೆಯರ ವಿರಹದ ಬಿಸಿಯೂ ಅವಳಲ್ಲಿ ಸಹಜವಾಗಿಯೇ ಕಾರ್ಯನಿರ್ವಹಿಸಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅದರಂತೆ ಅವಳು ಸೊಸೆಯರನ್ನು ಕುರಿತು ಮುಂದಿನ ಘಟನೆಗಳ ಕುರಿತ ಸವಿವರವನ್ನು ತಿಳಿಸುತ್ತಾ "ಮಗಳೇ! ನನ್ನನ್ನು ದಡ ಮುಟ್ಟಿಸಿಬಿಡಮ್ಮ 'ಅಳಿಸಿ ಹೋದ ಭಾರತವನ್ನು ಉದ್ಧಾರಮಾಡು! ಸುಶ್ರೋಣಿ! ದೇವರಾಜ ಸಮಪ್ರಭನಾದ ಮಗನನ್ನು ಪಡೆ! ಭೀಷ್ಮ ನಮ್ಮ ವಂಶದ ಅತಿಭಾರವಾದ ನೊಗ ಹೊರುತ್ತಾನೆ"(ವಚನಭಾರತ) ಎನ್ನುವ ಮಾತುಗಳಲ್ಲಿ ವ್ಯಾಸರು ನಿಗೂಢತೆ ಮೆರೆಯುತ್ತಾರೆ. ಸೊಸೆಯರನ್ನು ಭೀಷ್ಮರ ಹೆಸರೇಳಿ ಧರ್ಮ ಬದ್ಧಗೊಳಿಸುವ ಎಚ್ಚರ ಸತ್ಯವತಿಗೆಷ್ಟು ಉಚಿತವಾಗಿತ್ತು ಎಂಬುದು ಮುಖ್ಯವಾದುದು. ಅದನ್ನೇ ಸುಜನಾ ಅವರು "ಅವಳ ಎಚ್ಚರವೇ ಮಹಾಪ್ರಮಾದವಾಯಿತು. ಪಾಪ; ಆ ಎಳೆಯ ವಿಧವೆ ಮನಸ್ಸು ಧರ್ಮಬದ್ಧವಾಯಿತೇನೊ ಸರಿ; ಭೀಷ್ಮರ ಹೆಸರು ಕೇಳಿಯೇ ಸಮಾಧಾನಗೊಂಡಿತು. ಆದರೆ ಅವರ ಹೆಸರು ಏತಕ್ಕಾಗಿ ಬಂತು ಎಂಬುದನ್ನು ತಿಳಿಯದೆ ಧರ್ಮಬದ್ಧವಾಗುತ್ತಾಳೆ . . ಭೀಷ್ಮನನ್ನೇ ಭಯಂಕರವಾಗಿ ಪ್ರೀತಿಸಿದ ಅಂಬೆಯಂಥ ಅಕ್ಕನ ತಂಗಿಯವರು; ಆ ಚಲಬಲವಿಲ್ಲದೆ ತರುಣರಾಜ ಪುತ್ರನನ್ನೇ ಕೈ ಹಿಡಿದಿರುತ್ತಾಳೆ. ಆದರೆ ಅವನು ಸತ್ತ. ಆದರೆ ಭೀಷ್ಮರ ಬಗ್ಗೆ ಇದ್ದ ಬಯಕೆಯೂ ಸತ್ತಿತ್ತೆ? ಅಯ್ಯೋ! ಅದು ಮರುಕಳಿಸಿತೇನೋ! ಅದರಿಂದಲೇ ಅವನ ಹೆಸರನ್ನು ಕೇಳಿದೊಡನೆಯೆ ಸಮ್ಮತವಾಗುತ್ತಾಳೆ"[೨] ಎಂಬ ಮಾತು ಮತ್ತು ಸತ್ಯವತಿ 'ನಿನಗೊಬ್ಬ ಭಾವನಿದ್ದಾನೆ' ಎಂದಾಗ ಭೀಷ್ಮರಲ್ಲದೆ ಅವರಿಗೆ ಮತ್ತಾವ ರೂಪ ಬರಲಿಲ್ಲ. ಅನಂತರ ಗಡ್ಡದಾರಿ ವ್ಯಾಸರನ್ನು ಕಂಡು ಕಣ್ಮುಚ್ಚುತ್ತಾಳೆ; ಕುರುಡ ಹುಟ್ಟುತ್ತಾನೆ. ಅನಂತರ ಮತ್ತೊಬ್ಬಳು ಬಿಳಚಿಕೊಂಡು ಪಾಂಡು ಹುಟ್ಟುತ್ತಾನೆ. ಇದರೊಳಗಿನ ನೆಲೆ ಹಿನ್ನೆಲೆಯಲ್ಲಿ ವ್ಯಾಸ–ಸತ್ಯವತಿಯರ ತಾಳ್ಮೆ–ಆತುರತೆಗಳು ಮತ್ತೆ ಮತ್ತೆ 'ವ್ಯಾಸಭಾರತ'ದಲ್ಲಿ ನೆಲೆಪಡೆಯುತ್ತಲೇ ಸಾಗುತ್ತವೆ. ಹೀಗೆ ಸತ್ಯವತಿಯ ಆತುರದಿಂದ ವ್ಯಾಸರು ಅವಳ ಆಜ್ಞೆಗೆ ಕಟ್ಟುಬಿದ್ದು ಒಪ್ಪಿದ ಧರ್ಮ ನೆರವೇರಿಸಿ ಕೊನೆಗೆ ದಾಸಿಯಿಂದ ಆಗುವ ಬುದ್ಧಿವಂತ ಮಗನಿಗೂ

---

[೧] ಸುಜನಾ – ಹೃದಯಸಂವಾದ, ಪು. ೧೭೩.

[೨] ಅದೇ, ಪು. ೧೭೬.

ಸಕಾರಣವಿಲ್ಲದೆ ಕಾರಣವಾಗುತ್ತಾನೆ. ಅನಂತರದಲ್ಲಿ ತಾಯಿಗೆ ತನ್ನ ಕಾರ್ಯವನ್ನು ತಿಳಿಸುವುದು ಸಾಧಾರಣವಾಗಿ 'ವಚನಭಾರತ'ದಲ್ಲಿ ನಡೆದರೆ ಜನಪದಕವಿ ಅದಕ್ಕೆ 'ನಾಗರುಸಿಪರ್ವ'ದ ಕಾರಣವನ್ನು ಅರಹುತ್ತಾನೆ.

ಹೀಗೆ ಅನಾಹುತದ ಬೀಡಿಗೆ ಬೀಜವಾಗುವ ಸತ್ಯವತಿಯು ತಾಳ್ಮೆ ಹೊಂದಿದ್ದರೆ ಅದಕ್ಕೊಗುತ್ತಿದ್ದ ಆಯಾಮವೆಂತಹದ್ದು ಎಂಬುದು ಮುಖ್ಯವಾದದ್ದು. ಮುಂದೆ ಸತ್ಯವತಿಯು ಮೊಮ್ಮಕ್ಕಳ ಬೆಳವಣಿಗೆಯನ್ನು ಕಾಣುತ್ತಾಳೆ. ಕುಂಟನೊ ಕುರುಡನೋ ರಾಜ್ಯ ಬೆಳಗಿತಲ್ಲ ಎಂಬುದಷ್ಟೇ ಅವಳ ನಿರಮ್ಮಳತೆಯನ್ನು ಕಾಣಿಸುತ್ತದೆ. ಮೂಲದಲ್ಲಿ ವ್ಯಾಸರಿಂದ ಮಕ್ಕಳನ್ನು ಪಡೆದ ಅನಂತರ ಸತ್ಯವತಿಯು ಮತ್ತೆ ಕಾಣಿಸಿಕೊಳ್ಳುವುದೇ ಇಲ್ಲ. ಆದರೆ ಜನಪದ ಕವಿ ಮತ್ತೆ ಅವಳಿಗೆ ವೇದಿಕೆ ಒದಗಿಸುತ್ತಾನೆ. ಅದು 'ಭುಜಮಟ್ಟ ಬೆಳೆದ ಮೊಮ್ಮಕ್ಕಳ ನೋಡಿ ಭೀಷ್ಮನನ್ನು ಕರೆದು– "ಮಗನೆ ಭೀಷ್ಮ ಕೇಳು

ನನ್ನ ಮೊಮ್ಮಕ್ಳ ಮದುವೆಯ
ನಾನು ಕಣ್ತುಂಬ ನೋಡಬೇಕು
ನಾನು ಕಣ್ಣ ಮುಚ್ಚೋದಕ್ಕೆ
ಮುಂಚೆ ಈ ಕೆಲ್ಸ ಆಗ್ಲಿ"

ಎಂಬುದು. ಇಲ್ಲಿ ಅವಳಿಗೆ ವಂಶಬೆಳವಣಿಗೆಯೇ ಪರಮೋದ್ದೇಶವಾಗಿದ್ದಿರಬೇಕು. ಅದರಂತೆ ಭೀಷ್ಮ ಧೃತರಾಷ್ಟ್ರ–ಪಾಂಡುವಿಗೆ ಹೆಣ್ಣು ಹುಡುಕಿ ತಂದು ಮದುವೆ ಮಾಡುತ್ತಾನೆ.

ಅಂತು ಅವಳಿಗೆ ಸ್ವಭಾವತಃ ಸುಖಕ್ಕಿಂತ ಮುಂದೆ ಬಾಳಬೇಕಾದ ಮನೆತನದ ಗೌರವ, ಪ್ರತಿಷ್ಠೆಯೇ ಮುಖ್ಯವೆನಿಸಿರಬೇಕು. ಆದರೆ ಸುಜನಾ ಅವರು "ಅಂತು ಸದಿಚ್ಛೆಯಿಂದಲೆ ಆದರೂ ಸತ್ಯವತಿ ಕಾಯದೆ ಆತುರಗೊಂಡದ್ದರಿಂದ, ಅಕಾಲ ಫಲ ಕೇಳಿದ್ದರಿಂದ ವಿಷಾದ ಘಟನಾವಳಿಯನ್ನೇ ಉದ್ಘಾಟಿಸಿದಂತಾಗುತ್ತದೆ. ಅದರಿಂದ ಯಾರಿಗೆ ಸುಖವಾಯಿತು. ಆಕೆಗೆ? ಸೊಸೆಯರಿಗೆ? ಮಗನಿಗೆ? ಮೊಮ್ಮಕ್ಕಳಿಗೆ? ಭೀಷ್ಮರಿಗೆ? ಅಥವಾ ಲೋಕಕ್ಕೆ? ದೇವರೆ ಬಲ್ಲ"[೧] ಎನ್ನುತ್ತಾರೆ. ಆದರೆ ಇವಳ ಕಾತುರತೆಯಲ್ಲೋ ಒಂದು ಭಾವಸ್ಪಂದನವಿದ್ದಂತೆ ಕಾಣುತ್ತದೆ. ಮೊದಲೇ ಆಶ್ರಮವಾಸಿ ವ್ಯಾಸ ಕರೆದಾಗಲೆಲ್ಲಾ ಬರುವೇನೆಂಬ ಮಾತು ಕೊಟ್ಟಿದ್ದರೂ ಅವಳು ಮತ್ತೆ ಬೇಡುವ ಪರಿಸ್ಥಿತಿಯಲ್ಲಿರಲಿಲ್ಲವೋ? ಅಥವಾ ಸೊಸೆಯರನ್ನು ಅಂಥ ಕ್ರಿಯೆಗೆ ಕಾಯಿಸುವ ಮನಸ್ಥಿತಿ ಮೀರಿತ್ತೆ ಎಂಬುದು ಪ್ರಶ್ನೆಯಾಗಿ ಕಾಡುತ್ತದೆ. ಏನೇಯಾದರೂ ಮುಂದಿನ ಜನರ ಮಹಾಭಾರತ ಕಥಾ ಪರಂಪರೆಯ ವಾಚಕರಿಗಾದರೂ ಅನುಕೂಲವಾಯಿತು ಎಂದರೆ ಅತಿಶಯವೆನಿಸಲಾರದು.

---

[೧] ಹೃದಯ ಸಂವಾದ – ಪು. ೧೪೧.

ಹಿಡಿಂಬೆ

ಅರಗಿನ ಮನೆಯಿಂದ ಪಾರಾಗಿ ಬಂದ ಪಾಂಡವರು ಹಿಡಿಂಬಾವನದಲ್ಲಿ ವಿಶ್ರಾಂತಿ ಪಡೆಯುವ ವೇಳೆಯಲ್ಲಿ ಹಿಡಿಂಬೆಯು ಪ್ರವೇಶವಾಗುತ್ತದೆ 'ಮೂಲ ಭಾರತ'ದಲ್ಲಿ ಅದು ಮಹಾಬಲಶಾಲಿ ಹಿಡಿಂಬನು" ಎಷ್ಟೋ ದಿನಗಳ ಮೇಲೆ ನನಗೆ ಪ್ರಿಯವಾದ ಭಕ್ಷ್ಯ ಸಿಕ್ಕಿತು; ನಾಲಗೆ ನೀರೊಡೆಯುತ್ತಿದೆ; ನನ್ನ ಎಂಟು ಕೋರೆ ಹಲ್ಲುಗಳನ್ನೂ ಮೃದುವಾದ ದೇಹದಲ್ಲಿ ಊರಿ ಬಿಗಿದು ತಿನ್ನುತ್ತ, ಕತ್ತಿನಿಂದ ನೊರೆ ನೊರೆಯಾಗಿ ಬಸಿಯುವ ಬಿಸಿ ನೆತ್ತರನ್ನು ಹೀರಬೇಕು; ಹೋಗಿ ಆ ಮರದ ಕೆಳಗೆ ಮಲಗಿಕೊಂಡಿರುವವರು ಯಾರು ತಿಳಿದು ಬಾ; ನರವಾಸನೆಯಿಂದ ನನ್ನ ಮೂಗಿನ ತೊಳೆ ಒಡೆದುಹೋಗುತ್ತಿದೆ; ನೀನೇ ಅವರನ್ನು ಕೊಂದು ತಂದರೂ ತಂದುಬಿಡು; ಇಬ್ಬರೂ ತಿನ್ನೋಣ; ಬೇಗಹೋಗು" ಎಂದು ಹೇಳಿದಾಗ ಆಕೆ ಸುಂದರಾಕಾರವನ್ನು ಧರಿಸಿಬರುವ ಮೂಲಕ. ಆದರೆ ಇದು ಜನಪದ ಮಹಾಭಾರತದಲ್ಲಿ ಪಾಂಡವರ ಜೊತೆಗೆ ಮೊದಲೇ ಹಿಡಿಂಬನು ಯುದ್ಧ ಮಾಡುವ ಸನ್ನಿವೇಶದಲ್ಲಿ ಪ್ರವೇಶಿಕೆ ಪಡೆದುಕೊಳ್ಳುತ್ತಾಳೆ.

ಮೂಲದಲ್ಲಿ ಹಿಡಿಂಬೆಯು ಭೀಮನನ್ನು ಕಂಡು ಅವಳ ಮನದಾಳದ ಇಂಗಿತವನ್ನು ತೋಡಿಕೊಳ್ಳುತ್ತಾಳೆ. ಅದಕ್ಕೆ ಭೀಮನು ಕದಲದಿದ್ದಾಗ ರಾಕ್ಷಸನ ಭಯವನ್ನೊಡ್ಡುತ್ತಾಳೆ. ಆದರೆ ಭೀಮನು ಅದಕ್ಕೂ ಜಗ್ಗದೆ ಅವನೊಡನೆ ಹೋರಾಡುವುದಾಗಿ ತಿಳಿಸುತ್ತಾನೆ. ಅಷ್ಟರಲ್ಲಿ ಹಿಡಿಂಬನ ಪ್ರವೇಶವಾಗುತ್ತದೆ. ಅದನ್ನು ಕಂಡು ಹಿಡಿಂಬೆ ದುಷ್ಟರಾಕ್ಷಸನಿಂದ ತಪ್ಪಿಸುತ್ತೇನೆಂದಾಗ ಭೀಮ ಹೆದರಬೇಡ ಅವನನ್ನು ಕೊಲ್ಲುತ್ತೇನೆ ಎಂದು ಹೇಳಿದ ಮಾತನ್ನು ಕೇಳಿ ತನ್ನ ತಂಗಿಯನ್ನು ನೋಡುತ್ತಾನೆ. ಅವಳಾದರೂ "ಸುಂದರಿಯಾಗಿ, ಚಂದ್ರನಂತಹ ದುಂಡುಮುಖ; ತಿದ್ದಿದ ಹುಬ್ಬು; ಎಳಸಾದ ಮೂಗು; ನೀಳವಾದ ಕಣ್ಣು; ಸೆಳ್ಳುಗುರು; ನಯವಾದ ಚರ್ಮ; ನವಿರಾದ ಸೀರೆ; ನಿಲುವಾಭರಣ; ಮುಡಿಯಲ್ಲಿ ಹೂವು" ಮುಡಿದು ನಿಂತಿರುತ್ತಾಳೆ. ಇದರಿಂದ ಕೋಪೋದ್ರಿಕ್ತನಾಗಿ ಅವಳನ್ನು ಕುಲಟೆ ಎಂದು ಕೈ ಮಾಡುತ್ತಾನೆ. ಇದರಿಂದ ಭೀಮ ಅವನನ್ನು ತಡೆದು ಅವನೊಡನೆ ಯುದ್ಧಗೈಯುತ್ತಾನೆ; ಕೊನೆಗೆ ಸಾಯಿಸುತ್ತಾನೆ.

ಅನಂತರ ಹಿಡಿಂಬೆಯನ್ನು ಭೀಮ ನಂಬದೆ ಅವಳನ್ನು ಕೊಲ್ಲಲೆಣಿಸಿದಾಗ ಯುಧಿಷ್ಠಿರ ತಡೆಯುತ್ತಾನೆ. ಆಗ ಹಿಡಿಂಬೆ ಕುಂತಿ–ಧರ್ಮರಾಯರಲ್ಲಿ ಮೊರೆಹೋಗಿ ಭೀಮವರಿಸಿ, ಘಟೋತ್ಕಜನನ್ನು ಪಡೆದು ಕೊನೆಗೆ ತನ್ನದಾರಿ ಹಿಡಿದು ಸಾಗಿ ಬಿಡುತ್ತಾಳೆ. ಇಲ್ಲಿ ವ್ಯಾಸರು ಅವಳನ್ನು ಲಂಬಿಸದೇ ಮುಂದೆ ನಡೆದುಬಿಡುತ್ತಾರೆ. ಆದರೆ 'ಜನಪದ ಮಹಾಭಾರತ'ದಲ್ಲಿ

ಇವಳಿಗಾಗಿಯೇ ಪರ್ವ ಮುಖೇನ ಕವಿ ಉದ್ದೇಶಿತ ನೆಲೆಯಲ್ಲಿಯೇ ಚಿತ್ರಿಸುತ್ತಾನೆ. ಜನಪದದಲ್ಲಿ ಹಿಡಿಂಬಾಸುರನು ಭೀಮನೊಡನೆ ಹೋರಾಡಿದ ವೇಳೆ ಬಂದು ತನ್ನಣ್ಣನ ಸಾವಿಂದ ಗೋಳಾಡುವ ಸಮಯದಲ್ಲಿ ಪಾಂಡವರು ನೀನು ಯಾರು? ಎಂದು ಕೇಳಿದಾಗ ತನ್ನ ಪೂರ್ವ ವೃತ್ತಾಂತವನ್ನು

“ನಾನು ಇಡಂಬಾಸುರನ ತಂಗಿ ಇಡಂಬಾದೇವಿ
ನಾನು ಪಾತಾಳು ಲೊಕದ ರಾಕ್ಷಸ ಕುಲದವಳು
ನನ್ನಕ್ಕ ಉರಿಸಿಂಗಿ ಪಾಂಡುಪುತ್ರ ಭೀಮಸೇನನ್ನು
ಬಯಸಿ ಮದುವೆಯಾದವಳು
ನಾನೂ ಭೀಮಸೇನನನ್ನು ಪಡೀಬೇಕು ಅನ್ನೋ ಆತುರಾತುರದಲ್ಲಿ
ಬರುವಂತ ಕಾಲದಲ್ಲಿ ಗಾಳಿ ಎದ್ಬುಡ್ತು
ನಾನು ಬೋಡುಬೋಡಾದುದ ಕಂಡು
ಶುಕ್ರಾಚಾರ್ಯರು ಅನ್ನೋರುಸಿಗಳು
ಭೂಲೋಕದಲ್ಲಿ ರಾಕ್ಷಸಿಯಾಗಿ ಹುಟ್ಟು ಅಂತ
ಶಾಪ ಕೊಟ್ಬುಟ್ರು
ಹಂಗಾಗಿ ನಾನು ಭೂಲೋಕದಲ್ಲಿ ಹುಟ್ಬೇಕಾಯ್ತು
ನಾನು ರುಸಿಗಳ ಪಾದ ಹಿಡ್ಕೊಂಡು
ತಪ್ಪು ನನ್ನದಲ್ಲ ಗಾಳಿಯಿಂದ ಸೆರಗು ಹಾರಿದ್ದು ಅಂದಾಗ
ಅವ್ರು ಕರುಣೆ ತೋರ್ಸಿ ಪಾಂಡು ಪುತ್ರ ಧರ್ಮರಾಜರ ಪಾದ ಮುಟ್ಟಿದಾಗ
ನಿನ್ನ ಶಾಪ ಪರಿಯಾರ ಆಯ್ತದೆ
ನೀನು ಭೀಮಸೇನನ ಮದುವೆಯಾಗಿ
ಭಾರಿ ಗಂಡುಮಗುನ್ನ ಪಡ್ದು
ರಾಕ್ಷಸ ಕುಲಕ್ಕೆ ಕೀರ್ತಿಯನ್ನು ತರ್ತಿ ಅಂತ್ಹೇಳಿ
ಭೂಮಿಗೆ ಕಳುಸ್ತ್ರು ಸ್ವಾಮಿ” ಎಂದು ತೋಡಿಕೊಳ್ಳುತ್ತಾಳೆ.

ಕವಿ ಇಲ್ಲಿ ಜಾನಪದ ಚೌಕಟ್ಟನ್ನು ಕಟ್ಟಲೆತ್ನಿಸುತ್ತಾನೆ. ಇಲ್ಲಿನ ಉರಿಸಿಂಗಿ ಪ್ರಸಂಗ ನವೀನವಾಗಿದ್ದು ಇವೆರಡರ ಎಣಿಕೆ ಕವಿಗಿದ್ದ ತೊಡಕಿನ ನಿವಾರಣೆಗೋಸ್ಕರವಾಗಿ ನಡೆದಿದೆ. ಹೀಗೆ ಹಿಡಿಂಬೆಯ ಮಾತನ್ನಾಲಿಸಿದ ಧರ್ಮರಾಯರು ಭೀಮನನ್ನು 'ದೈವನಿಯಾಮಕ'ವಾದ ಅವರ ವಿವಾಹವನ್ನು ಸಾರುತ್ತಾ ಕಲ್ಯಾಣ ವಿವಾಹ ನೆರವೇರಿಸುತ್ತಾರೆ. ಜನಪದಕವಿ ವಿಧಿ, ದೈವ, ಭಕ್ತಿಯೆಡೆಗೆ ಹೆಚ್ಚು ಒಲವಿದ್ದ ಕಾರಣ ಹೀಗೆ ಸದಾವಕಾಶ ಒದಗಿದಾಗ ದೈವತ್ವವನ್ನು ತಂದು ಅದಕ್ಕೆ ಪೂರಕ ಕಥೆಯನ್ನು ನೇಯ್ದು ಸಾಗುತ್ತಾನೆ. ಅನಂತರದಲ್ಲಿ ಹಿಡಿಂಬೆ

ಗರ್ಭಿಣಿಯಾಗಿ ಭೀಮನು ಉಳಿದವರ (ಪಾಂಡವರ) ರಕ್ಷಣೆಗೆ ಸಂಬ್ರಾಸುರ ಪಟ್ಟಣಕ್ಕೆ ಹೋಗುತ್ತಾನೆ. ಇದಕ್ಕೂ ಮುಂಚೆ ಧರ್ಮರಾಯರು ಹೊರಡುವಾಗ ಭೀಮನಿಗೆ ಹೇಳುವ ಗುಲಗಂಜಿಯ ಬೀಜದ ದಾರಿ, ತೊಳಸಿ ಗಿಡ ಪ್ರತಿಮೆಯು ಜಾನಪದ ಆಶಯದ ಒಂದು ಮಾದರಿಯಾಗಿ ಗೋಚರಿಸುತ್ತದೆ. ಸಂಬ್ರಾಸುರನ ಮಡದಿ ಸೋಮಾಲದೇವಿ ಹೊಟ್ಟೆಯಲ್ಲಿ ಹಿಡಿಂಬಾನ ಜೀವ ಸೇರುವುದು; ಅವನು ಪಾಂಡವರ ಮಾಂಸ ಬಯಸುವುದು; ಅದಕ್ಕೆ ಪಾಂಡವರೇ ಬೇರೆ ವೇಷದಲ್ಲಿದ್ದು ಸಿಕ್ಕುವುದು ಇವೆಲ್ಲಾ ಕವಿಯ ಕಲ್ಪಿತವೋ, ಜನಪದ ಅಂಶವಾಗಿಯೂ ಬರುತ್ತವೆ. ಆದರೆ ಇತ್ತ ಹಿಡಿಂಬೆಗೆ ಘಟೋತ್ಗಜನ ಜನನವಾಗಿ ಆತನು ಸಂಬ್ರಾಸುರನ ವಂಶದ ಕುಡಿಕೊಲ್ಲುವ ಪ್ರಸಂಗವು ಜನಪದರಲ್ಲಿ ಉಳಿದು ಬಂದಿರುವ 'ಸೋದರ ಮಾವಂದಿರ ಸಂಹಾರ'ದ ಕಲ್ಪನೆಯನ್ನೇ ಹೋಲುತ್ತದೆ. ಇದಿಷ್ಟೇ ಕವಿಗಿರುವ ಮಹತ್ವದ ಅಂಶವಿರಬೇಕು. ಆದ್ದರಿಂದಲೇ ಹಿಡಿಂಬೆಯ ವೃತ್ತಾಂತವನ್ನು ಇಲ್ಲಿಯವರೆವಿಗೂ ಎಳೆದು ತರಬೇಕಾದ ಅಗತ್ಯವಿತ್ತೇನೋ ಎನಿಸುತ್ತದೆ.

ಹೀಗೆ ಹಿಡಿಂಬೆ ಅಪಾಯಕಾರಣಿಯಾಗಿ ಬಂದವಳಾದರೂ ಮುಂದೆ ಸಕಾರಣವಾಗಿ ನಡೆಯಬೇಕಾದ ಸಂಗತಿಗಳಿಗೆ ಪೂರಕಪಾತ್ರವಾಗಿ ನಿಲ್ಲುತ್ತಾಳೆ. ಜನಪದ ಜನರ ಹಿಡಿಂಬೆ ಬಗೆಗಿನ ಕಥೆಯೇ ಕವಿಗೆ ಬೀಜಾಣುವಾಗಿ ಈ ಸ್ವರೂಪಕ್ಕೆ ಅವಕಾಶವಿತ್ತಿರಬೇಕೆನಿಸುತ್ತದೆ. ಹಿಡಿಂಬೆಯು ರಾಕ್ಷಸಿಯಾಗಿ ಬಂದರೂ ತನ್ನೊಳಗೆ ಸಹಜತೆಯನ್ನು ಮೆರೆದು ಪಾಂಡವರ ಏಳಿಗೆಗೆ ಕಾರಣವಾಗುವ ದೈವ, ವಿಧಿಗಳ ಮತ್ತೊಂದು ರೂಪವಾಗಿ ಕಾಣಿಸಿಕೊಂಡು ಮೂಲದಂತೆಯೇ ತನ್ನ ಕಾರ್ಯ ಮುಗಿದ ಅನಂತರ ಪಾಂಡವರ 'ಸಮಯ ಬಂದಾಗ ಕರೆಸಿಕೊಳ್ಳುತ್ತೀವಿ' ಎಂಬ ಮಾತಿನೊಂದಿಗೆ ತನ್ನ ಕ್ರಿಯೆಯನ್ನು ಮುಗಿಸಿಕೊಳ್ಳುತ್ತಾಳೆ. ಇಲ್ಲಿ ಅವಳ ಶಾಪ ಪರಿಹಾರದಂತೆಯೇ, ಅವಳ ಮಗನಿಂದಲೇ (ಅವಳಿಂದ) ವನದಲ್ಲಿ ಕಾಡುವ ರಕ್ಕಸ ಸಂಹಾರಕ್ಕೆ ಹೆಚ್ಚು ಗಮನವಿರುವುದು ಗೋಚರಿಸುತ್ತದೆ.

ಗಂಗೆ

'ಮಹಾಭಾರತ' ಕಥೆಯು ಆರಂಭವಾಗುವುದೇ ಗಂಗೆ-ಶಂತನುವಿನ ಪ್ರಕರಣದಿಂದ. ಇಲ್ಲಿ ಗಂಗೆಯೇ ಭಾರತ ಕಥೆಯ ಮೂಲ ಸ್ತ್ರೀಯಳು. ಶಂತನು ಬೇಟೆಗೆ ಕಾಡಿಗೆ ಹೋಗಿದ್ದಾಗ ನದಿ ತೀರದಲ್ಲಿ ಈಕೆಯ ಭೇಟಿಯಾಗುತ್ತದೆ. ಶಂತನು "ನೀನು ಯಾರು ಸುಂದರಿ? ದೇವಿಯೋ ದಾನವಿಯೋ? . . . ಯಾರಾದರೂ ಆಗಿರು; ನನ್ನ ಹೆಂಡತಿಯಾಗು" ಎಂದು ಕೇಳಿದಾಗ ಆಕೆ ಒಪ್ಪಿ ತನ್ನ ಕಟ್ಟುಪಾಡನ್ನು ಒಪ್ಪಿದರೆ ಆಗುತ್ತೇನೆಂದಳು. ಅದೇನೆಂದರೆ ಅವಳು ಮಾಡುವ ಕೆಟ್ಟ ಕೆಲಸಕ್ಕಾಗಲಿ, ಒಳ್ಳೆಯ ಕೆಲಸಕ್ಕಾಗಲಿ ಅಡ್ಡಿ ಬರಕೂಡದು, ಆಕ್ಷೇಪವೆತ್ತಬಾರದು, ಇದನ್ನು ಮೀರಿದರೆ ತನ್ನ ದಾರಿ ನೋಡಿಕೊಳ್ಳುವುದಾಗಿತ್ತು. 'ಮೂಲಭಾರತ'ದ ವಿಷಯವಿದಾದರೆ 'ಜನಪದ ಮಹಾಭಾರತ'ದಲ್ಲಿ ಇದಕ್ಕೊಂದು ಪೂರಕತೆಯ ಕಥೆಯನ್ನು ನೇಯ್ದಿದ್ದಾರೆ. ಅಂದರೆ ಗಂಗೆಯು ಶಿವನ ಗಂಗೆಯಾಗಿದ್ದು ಶಂತನು ಶಿವನ ರೂಪವೇ ಆಗಿದ್ದಾರೆ. ಆ ರೀತಿಯಾಗಲಿಕ್ಕೆ ದೈವಿಕ ಕಾರಣವೊಂದನ್ನು ಮುಂದೊಡ್ಡುತ್ತ ಶಾಪ-ವಿಶಾಪದ ಕಲ್ಪನೆಯನ್ನು ತರುತ್ತದೆ. ಅದು ತಮ್ಮ ತಮ್ಮ ಮಹತ್ತುಗಳ ಹೊಗಳಿಕೆಯನ್ನು ಸ್ತ್ರೀಯರಿಂದಲೇ (ಲಕ್ಷ್ಮೀ, ಸರಸ್ವತಿ, ಪಾರ್ವತಿ) ಹೊಗಳಿಸುವುದರ ಮೂಲಕ ಕಥಾನಕವನ್ನು ಕವಿ ಹೆಣೆಯಬಯಸುತ್ತಾನೆ. ಆ ಸಮಯಕ್ಕೆ ಗಂಗೆಯೂ ತನ್ನ ಮಹತ್ತನ್ನು ಹೇಳಲಾಗಿ ಆ ಮೂವರೂ ಇವಳಿಗೆ ಶಾಪ ಕೊಡುವುದು ಕಳಂಕಿತಳಾಗುವಂತೆ. ಇದರಿಂದ ಕುಪಿತಳಾಗಿ ಬರುವ ವೇಳೆಗೆ ಶನಿದೇವ ಎದಿರಾದಾಗ ನದಿಯ ನಾಲ್ಕು ಹನಿ ಅವನಿಗೆ ಬಿದ್ದಾಗ ಅವನು ಮೈಲಿಗೆ ನೀರು ಸಿಡಿದದ್ದಕ್ಕೆ ಕಾರಣವೇನು? ಯಾರು? ಎಂದು ಆರ್ಭಟಿಸುತ್ತಾನೆ. ಭಾರತ ಕಥೆಯೊಳಗೆ ಶನಿದೇವ ಪ್ರಸಂಗ ಬಂದಿರುವುದು ಹೊಸ ತಂತ್ರವಾಗಿದ್ದು ಜನಪದರಲ್ಲಿರುವ ಶನಿಪ್ರಭಾವದ ಕಲ್ಪನೆಯಿಂದ ಕಾವ್ಯದ ಮೊದಲಿಗೆ ಅವನನ್ನು ಉನ್ನತೀಕರಿಸುವುದರೊಂದಿಗೆ ಕವಿ ಮುಂದಿನ ಕಥೆಗೆ ಕಟ್ಟಬೇಕಿದ್ದ ಸೇತುವೆಯ ನಿರ್ಮಾಣಕ್ಕೆ ದುಷ್ಟತೆ ಪಾತ್ರವನ್ನು ಕಟ್ಟುವುದುಂಟು. ಇದು ದೈವ ಸಂಸ್ಕಾರದೊಂದಿಗೆ ಪರಂಪರೆಯ ಬೀಸುಗಾಳಿ ಅಲ್ಲಲ್ಲಿ ಬೀಸುವ ಸಹಜತೆಯನ್ನು ಸಾರುತ್ತದೆ.

ಮುಂದೆ ಶನಿದೇವ ಗಂಗೆ ಭುವಿಯಲ್ಲಿ ನರಮನುಷ್ಯಳಾಗುವಂತೆ ಶಾಪವೀಯುತ್ತಾನೆ. ಕೊನೆಗೆ ಗಂಗೆ ಸೃಷ್ಟಿಕರ್ತನ ಮೊರೆ ಹೊಕ್ಕುತ್ತಾಳೆ. ಆಗ ಅವನು ಅವಳ ಕರ್ಮ ಪರಿಹಾರಕ್ಕೆ ಸೂತ್ರವೊಂದನ್ನು ತಿಳಿಸುತ್ತಾ ಕಳಂಕಿತಳಾಗಿ ಕುಂದಿದ್ದ ಗಂಗೆಗೆ ಸಾಂತ್ವನದ ಮಾತನ್ನು ಅಂದರೆ ಅವಳನ್ನು ಲೋಕಕ್ಕೆ ದೊಡ್ಡವಳಾಗಿಸುವ ಪರಿಹಾರವನ್ನು ನೀಡುತ್ತಾರೆ. ಅಂತೆಯೇ ಭೂಮಿಯಲ್ಲಿ ಜನಿಸಿ ವಸಂತರಾಯನ ಮಕ್ಕಳ ಶಾಪ ಪರಿಹಾರಾರ್ಥವಾಗಿ ಇವಳು ಅವರನ್ನು ತನ್ನ ಗರ್ಭದಲ್ಲಿರಿಸಿಕೊಂಡು ಭಾರತ ಕಥೆಗೆ ಮುಂದಾಗುತ್ತಾಳೆ. ಇಲ್ಲಿ ಸ್ತ್ರೀ ಸಹಜತೆಯ

ಚಾಂಚಲ್ಯವೇರ್ಪಡುತ್ತದೆ. ಗಂಗೆಯು ತನ್ನ ಪಾಪ ಪರಿಹಾರಕ್ಕಾಗಿ ಬೇರೆಯವರ ಪಾಪವನ್ನು ಹೊರುವ ಸ್ಥಿತಿಯಿಂದಾಗಿ ಮುಂದೆ ಅವಳು ಅವರನ್ನು ಕೊಲ್ಲುವ ಸ್ಥಿತಿ ಏರ್ಪಡುತ್ತದೆ. ಅಂದರೆ ಇಲ್ಲಿ ಕಾಯುವವಳು ಅಲ್ಲೇಕೆ ಕೊಲ್ಲುವ ಹಂತಕ್ಕೆ ಏಕೆ ಹೋದಳು ಎಂಬುದು ಜಿಜ್ಞಾಸೆಯಾಗಿಯೇ ಉಳಿಯುತ್ತದೆ.

ಗಂಗೆಯು ಭುವಿಯಲ್ಲಿ ಹುಟ್ಟುವ ಸುದ್ದಿ ತಿಳಿದ ಶಿವನೂ ಭೂಮಿಯಲ್ಲಿ ಹುಟ್ಟುವುದು, ತಲೆಯ ಮೇಲಿದ್ದ ಚಂದ್ರ 'ತಮ್ಮ ವಂಶದಲ್ಲಿ ನೀವು ಹುಟ್ಟಬೇಕು' ಎಂದು ಕೇಳಿಕೊಳ್ಳುವುದು ಕಥನಕಾರನಿಗಿದ್ದ ಅಥವಾ ಜನಪದರಲ್ಲಿ ಪ್ರಚಲಿತವಿದ್ದ ಚಂದ್ರಮನ ಶಾಪ ಪರಿಹಾರ ಮಾಡಿದ್ದ ಶಿವನಿಗೆ ದೊರಕಿಸಿದ ಮನ್ನಣೆಯನ್ನೇ ನೆನಪಿಸುತ್ತದೆ. ಅದೂ ಶಾಂತಮೂರ್ತಿ ಶಿವನೇ ಶಾಂತನು (ಶಾಂತಮೂರ್ತಿ) ಆಗಿರುವುದು ಜನಪದ ಆಶಯವೇ ಆಗಿದೆ. ಜೊತೆಗೆ ರುದ್ರಗ್ವಾಪ ತಾಳುವ ಪರಶಿವನು ಕಣ್ಣಲ್ಲೇ ಭಸ್ಮ ಮಾಡಬಲ್ಲ ಶಿವನು ಇಲ್ಲಿ ಗಂಗೆ ಹೇಳಿದಂತೆಯೇ ಕೇಳುವ ಸ್ಥಿತಿ ನೋಡಿದರೆ ಜನಪದರ ತಂತ್ರಗಾರಿಕೆಯು ಹೇಗೆ ಕೆಲಸ ಮಾಡಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅದಕ್ಕಾಗಿಯೇ ಅವನನ್ನು ಶಾಂತಮೂರ್ತಿಯಾಗಿಸಿದ್ದಾರೆ. ಇದನ್ನೇ ರಾಗೌ ಅವರು ಮುನ್ನುಡಿಯಲ್ಲಿ "ದೇವತೆಗಳು ಮಾನವ ವ್ಯವಹಾರದಲ್ಲಿ ನೇರ ಹಸ್ತಕ್ಷೇಪ ಮಾಡುವುದು ಕೃತಿಯಲ್ಲಿ ಸಾಮಾನ್ಯ ಆಶಯ" ಎಂದಿದ್ದಾರೆ.

ಗಂಗೆ ಶಂತನುವಿನ ವಿವಾಹವು ಕಟ್ಟುಪಾಡಿನ ನಿಟ್ಟಿನಲ್ಲಿ ಇಲ್ಲಿ ನಡೆಯುತ್ತದೆ. ಅನಂತರ ಆಕೆ ಗರ್ಭವತಿಯಾಗಿ ಹುಟ್ಟಿದ ಮಕ್ಕಳನ್ನೆಲ್ಲ ಕೊಲ್ಲುತ್ತ ಬರುತ್ತಾಳೆ. ಏಳು ಜನರನ್ನು ಕೊಂದ ಮೇಲೆ ಎಂಟನೆಯ ಶಿಶುವನ್ನು ಬಡಿಯಲೋದಾಗ ಶಿಶುವೇ "ಅಪ್ಪನ ಬಾಯಿ ಕಟ್ಟಿದ್ದಿಯಲ್ಲೇ ತಾಯಿ, ಅಪ್ಪನ ಆಸೆಗೆ ನನ್ನ ಉಳುಸಮ್ಮ" ಎನ್ನುತ್ತದೆ. ಇದು ಮೂಲದಲ್ಲಿಲ್ಲದ ಕಲ್ಪನೆ. ಮೂಲದಲ್ಲಿ ಶಂತನು ಮಗುವಿನ ಮೇಲೆ ಆಸೆಯಾಗಿ ತಡೆ, ಪುತ್ರಘಾತನಿ! ಅದನ್ನು ಕೊಲ್ಲಬೇಡ" ಎನ್ನುತ್ತಾನೆ. ಅದಕ್ಕೆ ಗಂಗೆ "ನಿನಗೆ ಮಗನ ಮೇಲೆ ಆಸೆಯಾಯಿತಲ್ಲವೇ? ಆಗಲಿ ನಿನ್ನ ಮಗುವನ್ನು ಕೊಲ್ಲುವುದಿಲ್ಲ." ಎನ್ನುವ ಮಾತುಗಳಿಗೂ ಜನಪದದಲ್ಲಿ ಅಪ್ಪನ ಆಸೆಗೆ ನನ್ನ ಉಳಿಸಮ್ಮ' ಎಂಬ ಮಗುವಿನ ಮಾತಿಗೂ ಸಾಮ್ಯವಿದ್ದು ಕವಿ ಬೇಕೆಂದೇ ಮಗುವಿನ ಬಾಯಲ್ಲಿ ಹೇಳಿಸಿದ್ದಾನೆ. ಏಕೆಂದರೆ ಶಿವನು ಮಾತು ತಪ್ಪಿದವನಾಗಬಾರದೆಂಬ ಭಾವ ಕೆಲಸ ಮಾಡಿರುವ ಸಾಧ್ಯತೆ ಇಲ್ಲಿ ಕಂಡುಬರುತ್ತದೆ.

ಕೊನೆಗೆ ಗಂಗೆಯನ್ನು ಪ್ರಶ್ನಿಸಿದ್ದೇ ಒಂದು ಅಪವಾದವಾಗಿ ಆಕೆ ಹೊರಡುತ್ತಾಳೆ. ಮೂಲದಲ್ಲಿ ಆಕೆ ಶಂತನುವಿಗೆ ತನ್ನ ಮೂಲವನ್ನು "ನಾನು ಗಂಗೆ; ಜಹ್ನುವಿನ ಮಗಳು; ಈ ಮಕ್ಕಳು ಅಷ್ಟವಸುಗಳು; ವಸಿಷ್ಟ ಶಾಪದಿಂದ ಮನುಷ್ಯ ಜನ್ಮವನ್ನು ಪಡೆದಿದ್ದರು; ನಾನು

ಅವರಿಗೆ ಮಾತು ಕೊಟ್ಟಿದ್ದಂತೆ ಹುಟ್ಟುತ್ತಿದ್ದ ಹಾಗೆ ಅವರನ್ನು ಮನುಷ್ಯ ಜನ್ಮದಿಂದ ಬಿಡುಗಡೆ ಮಾಡಿದೆ. ನಿನಗೆ ಮಂಗಳವಾಗಲಿ ನಾನು ಹೋಗಿಬರುತ್ತೇನೆ; ಮಹಾವ್ರತನಾದ ಈ ಮಗುವನ್ನು ಕಾಪಾಡಿಕೋ" ಎಂದು ಹೇಳಿ ಹೊರಡುತ್ತಾಳೆ. ಆದರೆ ಏಳು ಮಕ್ಕಳನ್ನಷ್ಟೇ ಕೊಂದು ಅಷ್ಟಮ ಶಿಶು ಭೀಷ್ಮನನ್ನು ಕೊಲ್ಲದೆ ಇರಲು ಇರುವ ಕಾರಣವನ್ನು ಹುಡುಕಿದಾಗ ಭಾರತದ ಕೊನೆಯಲ್ಲಿ ಭೀಷ್ಮ ಮರಣ ಹೊಂದಿದಾಗ ಮತ್ತೆ ಗಂಗೆ ಬಂದು ದುಃಖಿಸುತ್ತಾಳೆ. ಆಗ ಕೃಷ್ಣನು "ಸಮಾಧಾನ ಮಾಡಿಕೋ ತಾಯಿ! ದುಃಖವನ್ನು ಬಿಡು! ನಿನ್ನ ಮಗ ಶಾಪದಿಂದ ಮನುಷ್ಯ ಜನ್ಮವನ್ನು ಪಡೆದಿದ್ದ ವಸುವಲ್ಲವೇ? ಅವನು ಕ್ಷತ್ರಿಯ ಧರ್ಮದಿಂದ ಯುದ್ಧ ಮಾಡುತ್ತ ರಣರಂಗದಲ್ಲಿ ಮಡಿದನು. ದೇವಿ! ಅವನನ್ನು ಬೀಳಿಸಿದವನು ಅರ್ಜುನ; ಶಿಖಂಡಿಯಲ್ಲ. ನಿನ್ನ ಮಗನನ್ನು ದೇವತೆಗಳೆಲ್ಲಾ ಬಂದರೂ ಕೊಲ್ಲಬಲ್ಲರೇ? ಅವನು ತಾನಾಗಿ ಇಷ್ಟಪಟ್ಟು ಸ್ವರ್ಗಕ್ಕೆ ಹೋಗಿ ವಸುಗಳನ್ನು ಸೇರಿಕೊಂಡನು" ಎನ್ನುವ ನುಡಿಗಳು ದೂರ ಮಾಡುತ್ತವೆ. ಹೀಗೆ ಗಂಗೆ ಭಾರತದ ಆದಿಯಲ್ಲಿ ಬಂದಂತೆ ಕೊನೆಯಲ್ಲೂ ಗೋಚರಿಸುತ್ತಾಳೆ. ಆದರೆ 'ಜನಪದ ಮಹಾಭಾರತ'ದಲ್ಲಿ ಮಗು ಪ್ರಶ್ನಿಸಿದ ಕೂಡಲೇ ಆಕೆ ತಾನು ಹೋಗುವುದಾಗಿ ತಿಳಿಸಿ ಬೇಕಾದ ಭಾಗ್ಯವ ಕೇಳಿಕೋ ಎಂದಾಗ ಭೀಷ್ಮ ಅದನ್ನು ನಿರಾಕರಿಸುತ್ತಾನೆ. ಅದಕ್ಕೆ ಗಂಗೆ ತಾನೇ ಪಾಲಿಸುವ ವರವಾದರೂ –

"ಹಂಗಾದ ಮ್ಯಾಕೆ ಮತ್ತೊಂದ ಹೇಳುತೀನಿ
ಕೇಳು ಕೇಳು ಕಂದ ಈ ನನ್ನ ವಾಕ್ಯವ
ನೀನು – ಬೇಕು ಅಂದಾಗ ಮರಣಕಾಣಪ್ಪ
ಬ್ಯಾಡ ಅಂದಾರೆ ನಿನ್ಗೆ ಮರಣ ಇಲ್ಲವಯ್ಯ!

ಯಾರಿಂದಲೂ ನಿನಗೆ ಮರಣ ಇಲ್ಲವಪ್ಪ
ಯಾತರಿಂದಲೂ ನಿನಗೆ ಮರಣ ಇಲ್ಲವಪ್ಪ
ನಿನ್ಗೆ – ಎದುರಾಗೋ ಬಲಿಷ್ಟರು ಯಾರೂ ಇಲ್ಲ
ನಿನ್ನ ಮಟ್ಟಕ್ಕೆ ನಿಲ್ಲೋ ಶಕ್ತಾರೆ ಇಲ್ಲ" ಎನ್ನುವುದು.

ಅಷ್ಟನ್ನು ಹೇಳಿ ಆಕೆ ಗಂಗಾನದಿಯಾಗಿ ಹರಿದು ಹೋಗುತ್ತಾಳೆ. ಮತ್ತೆ ಅವಳ ಪ್ರಸ್ತಾಪ ಕಾವ್ಯದಲ್ಲಿ ಬರುವುದೇ ಇಲ್ಲ. ಆದರೆ ಇಲ್ಲಿ ತಿಳಿಸುವ ಇಚ್ಛಾ ಮರಣದ ಪ್ರಸಂಗವು ಸಮಾನವಾಗಿದೆ.

ಹೀಗೆ ಅನುಭವವು ಅಸಹಾಯ ಸ್ಥಿತಿಯಿಂದ ಮಾತ್ರ ಬರುತ್ತದೆ ಎಂಬ ಹಿರಿಯರ ನುಡಿಯಂತೆ ಅಸಹಾಯಕ ಪರಿಸ್ಥಿತಿಯಿಂದ ನಿರೂಪಣೆಗೆ ಬರುವ ಗಂಗೆ ಅನುಭವದ ತೀವ್ರತೆಯಿಂದ ಕಾರ್ಯ ನಿರ್ವಹಿಸುತ್ತಾಳೆ. ಈ ಅನುಭವ ಪ್ರಪಂಚಕ್ಕೆ ದೈವ-ಭಕ್ತಿಯ ಆವರಣ ಏರ್ಪಡುವುದು, ಶಾಪ ವಿಮೋಚನೆಯ ಅನುಗ್ರಹಗಳು ಉಂಟಾಗುವುದು ಕಂಡುಬರುತ್ತದೆ. ನೋವು, ಅಪಮಾನ, ಯಾತನೆ ಸಂಕಟಗಳು ತೀವ್ರ ಸ್ವರೂಪಕ್ಕೆ ತಲುಪಿದ ಸಂಕಟದ ಸ್ಥಿತಿಯಲ್ಲಿ ಮಾನವೀಯತೆಯ ಅಂಶಗಳು ಹೆಚ್ಚು ಆಪ್ತವಾಗುತ್ತವೆ. ಅಂತೆಯೇ ಗಂಗೆ ತನ್ನೆಲ್ಲಾ ಸ್ಥಿತಿಗಳಿಂದ ನಂತರದಲ್ಲಿ ತಾನು ನಿಲ್ಲುವ ಸ್ಥಾನ ಮುಖ್ಯವಾಗುತ್ತದೆ.

ಮೂಲದಲ್ಲಿ ಸಕಾರಣವಿಲ್ಲದೆ ಬರುವ ಗಂಗೆಯ ಪಾತ್ರಕ್ಕೆ ಜನಪದದಲ್ಲಿ ಹೊಸ ರೂಪವೊಂದು ದೊರೆತು ಸಹಜತೆಯ ಸಂದರ್ಭದಲ್ಲಿ ತರುವ ಸನ್ನಿವೇಶವು ಉಚಿತವಾಗಿದೆ. ಹೀಗೆ ಸಂಕ್ಷಿಪ್ತವಾದರೂ ಹೃದಯಮಿಡಿತದ ಸಂದರ್ಭವಾಗಿ ನಿರ್ಮಿಸುವ ಮೂಲಕ ಕಾವ್ಯವು ಸಾಗುತ್ತದೆ.

ಇವಿಷ್ಟೇ ಪಾತ್ರಗಳಲ್ಲದೆ ಭಾರತ ಕಥೆಯೊಳಗೆ ಸುಭದ್ರೆ, ಅಂಬೆ, ಅಂಬಿಕೆ, ಅಂಬಾಲಿಕೆ, ಊರ್ವಶಿ, ಭಾನುಮತಿ, ಸ್ವಯಂಪ್ರಭೆಯರಂತೆಯೇ ಅಲ್ಲಲ್ಲಿ ಕಾಣಿಸಿಕೊಳ್ಳುವ ಉರಿಸಿಂಗಿ, ಮದನಮಂಜ್ರಿ, ಈರಮ್ಮ, ರೇಣುಮತಿ, ಸೋಮಲದೇವಿ, ಚಿತ್ರ-ಕುಸುಮಾಲೆಯರಂಥ ಅನೇಕಾನೇಕ ಸಣ್ಣಪುಟ್ಟ ಸ್ತ್ರೀಪಾತ್ರಗಳೂ ಮಹಾಭಾರತದೊಳಗೆ ಇಡಿಕಿರಿದು ತುಂಬಿವೆ. ಅವೆಲ್ಲವೂ ಆಪ್ತವೂ; ವಾತ್ಸಲ್ಯ ಪೂರ್ಣವೂ ಆದವುಗಳು. ತಮಗೊದಗಿದ ಸ್ಥಾನಗಳಲ್ಲಿ ಸಾಮರ್ಥ್ಯ ಮೀರಿಯೇ ಕಾರ್ಯನಿರ್ವಹಿಸಿ ಸಾಗುವ ಉದಾತ್ತದರ್ಶಗಳನ್ನು ಪ್ರತಿಬಿಂಬಿಸಿ ಮೆರೆಯುವ ನಾರಿ ಪಾತ್ರಗಳಾಗಿ ಕಂಡುಬರುತ್ತವೆ. ಆದರೆ ಅವುಗಳು ಸಾಮ್ರಾಜ್ಯದ, ಸಂಸಾರದ, ಔನ್ನತ್ಯಕ್ಕೆ ಕಾರಣವಾಗುವಂತೆ ಅವುಗಳ ಅಧಃಪತನಕ್ಕೂ ಕಾರಣವಾಗುತ್ತವೆ. ಇವುಗಳು ಮನುಷ್ಯನ ಸಹಜ ಗುಣಗಳನ್ನು ಹೊಂದಿರುವುದು, ಮೇಲಾಗಿ ಮನುಷ್ಯ ಪಾತ್ರಗಳೇ ಆದುವುಗಳಾದುದರಿಂದ ಅವುಗಳಲ್ಲಿ ಪರಸ್ಪರ ಪ್ರೀತಿ, ಆತ್ಮೀಯತೆ, ಸ್ನೇಹ ಮನೋಭಾವ, ಕರುಣೆ, ದಯೆ, ನೈತಿಕತೆ, ಪ್ರಮಾಣಿಕತೆ, ದುಷ್ಟತನ, ಮೋಸ, ಸರಳತೆ, ಸಮಾನತೆ, ವೈಚಾರಿಕ ವಿವೇತನ, ಗುರು-ಹಿರಿಯರ ಬಗೆಗಿನ ಗೌರವ, ಕೋಪ-ತಾಪ ಮುಂತಾದ ಬದುಕಿನ ಧನಾತ್ಮಕ ಋಣಾತ್ಮಕ ಗುಣಗಳೊಂದಿಗೆ ನಿಸರ್ಗ ಕಾಳಜಿ, ಪ್ರಾಣಿ ಪಕ್ಷಿಗಳನ್ನು ಕುರಿತು ತಾಳುವ 'ಜೀವಪರ' ಚಿಂತನೆಗಳು ಮುಖ್ಯವಾಗಿ ನಿಲ್ಲುತ್ತವೆ. ಆದರೆ ಗುಣಗಳು ಕೆಲವೊಮ್ಮೆ ಕವಿಯ ಮನಸ್ಥಿತಿಗೂ ಅಥವಾ ಪಾತ್ರದ ಮನಸ್ಥಿತಿಗೂ ಏರ್ಪಡುವ ಮುಖಾಮುಖಿತನದ ಹಿನ್ನೆಲೆಯಲ್ಲಿ ಭಿನ್ನವಾಗುವುದು ಸಾಮಾನ್ಯ ಅಂಶವಾಗುತ್ತದೆ.

ಇಂಥ ಎಲ್ಲ ಗುಣಗಳನ್ನು ಹೊಂದಿರುವ ಅನೇಕ ಸ್ತ್ರೀ ಪಾತ್ರಗಳು ಭಾರತ ಕಥೆಯ ಮುನ್ನಡೆಗೆ ವೇದಿಕೆ ಒದಗಿಸಿದ ಉದಾಹರಣೆಗಳು ಸಾಕಷ್ಟು ಇದ್ದು ಅನೇಕ ಸ್ತರಗಳಲ್ಲಿ ಕಾಣಿಸಿಕೊಂಡಿವೆ. ಇಂತಹ ಅನೇಕ ಪಾತ್ರಗಳಲ್ಲಿ ಏಳು ಪಾತ್ರಗಳನ್ನು ಇಲ್ಲಿ ಅನುಸಂಧಾನ ಮಾಡಲಾಗಿದೆ. ಇದು ಪ್ರಬಂಧದ ಆಳವಿಯ ಮಿತಿಯನ್ನು ಹೊಂದುವ ಉದ್ದೇಶವೂ ಆಗಿದೆ.

ಹೀಗೆ ಭಾರತಕಥೆಯಲ್ಲಿ ಮಾನವೀಯತೆಯು ಸ್ವಾರ್ಥದ ಪರಿಧಿಯನ್ನು ಮೀರಿ, ಮನುಷ್ಯ, ಮನುಷ್ಯರ ನಡುವೆ ಸಮಾನ ಸ್ಪಂದನ, ಸಹನೆ, ಪ್ರಾಮಾಣಿಕತೆ ಮೆರೆದ ಪಾತ್ರಗಳು ಅನೇಕ. ಅದರಲ್ಲೂ ಅಂಥ ಸ್ತ್ರೀ ಪಾತ್ರಗಳು ಭಾರತೀಯ ಸಾಹಿತ್ಯದಲ್ಲೇ ವಿರಳ. ಆದ್ದರಿಂದ ಅಂಥ ಎಲ್ಲಾ ಗುಣ ಮೌಲ್ಯಗಳ ಪ್ರತಿರೂಪಗಳು ಇವಾಗಿವೆ ಎನ್ನಬಹುದಾಗಿದೆ.

ಉಪಸಂಹಾರ

ಇದುವರೆಗೂ ಪ್ರಸ್ತುತ ಪ್ರಬಂಧದಲ್ಲಿ ಯಾವ ವಿಚಾರಗಳನ್ನು ಕುರಿತು ಅವುಗಳಲ್ಲಿನ ವೈಶಿಷ್ಟ್ಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿತ್ತೋ, ಅವೇ ವಿಚಾರಗಳು ಮತ್ತೆ ಪುನರಾವರ್ತನೆಯಾಗಿ ಬರುವುದನ್ನು ಮನಗಂಡು, ಹೆಚ್ಚಿನ ವಿಶ್ಲೇಷಣೆಗೆ ಕೈ ಹಾಕದೆ ಅಲ್ಲಿ ಕಂಡುಕೊಂಡ ಕೆಲವು ಫಲಿತಗಳನ್ನು ಮಾತ್ರ ಪ್ರಬಂಧದ ವಿನ್ಯಾಸಕ್ಕಾಗಿ ಇಲ್ಲಿ ವಿಶ್ಲೇಷಿಸಲಾಗಿದೆ.

ಪ್ರಾಚೀನ ಭಾರತೀಯ ಸಮಾಜವು ಸಾಮಾಜಿಕ ಸಂಘರ್ಷಗಳಿಂದ ತುಂಬಿಹೋಗಿ ಯುದ್ಧದ ಕೆನ್ನಾಲಗೆಯಲ್ಲಿ ಸದಾಕಾಲವೂ ಕರಾಳತೆಯನ್ನು ಕಂಡದ್ದುಂಟು. ಇದು ಆದಿಮಾನವನಿಂದ ಆಧುನಿಕ ಮಾನವನವರೆವಿಗೂ ಜರುಗುತ್ತಲೇ ಬಂದಿದೆ. ಈ ನೆಲೆಯಲ್ಲಿ ಜಗತ್ತಿನ ಇತಿಹಾಸ-ಪುರಾಣಗಳ ಪುಟಪುಟಗಳಲ್ಲಿ ಯುದ್ಧದ ಕಲೆಗಳು ಉಳಿದುಬಂದಿರುವುದು ಗೋಚರಿಸುತ್ತವೆ. ಇಂಥ ಕಲೆಗಳನ್ನು ಅಂಟಿಸಿಕೊಂಡೇ ನಮ್ಮ ಧರ್ಮ ಗ್ರಂಥಗಳಾದ 'ರಾಮಾಯಣ' ಮತ್ತು 'ಮಹಾಭಾರತ'ಗಳೂ ಗೋಚರಿಸುತ್ತವೆ.

ಹೀಗೆ ಜಗತ್ತಿನ ಚರಿತ್ರೆ ಪ್ರತಿ ಹಂತದ ಸಂಘರ್ಷಗಳೊಳಗೇ ಪ್ರತಿಪಾದಿತವಾಗುವ ಇನ್ನಿತರ ನಡಾವಳಿಗಳು ಮೌಲ್ಯಗಳನ್ನು ಹೊಂದಿ ವ್ಯಕ್ತಿಯ ಬದುಕಿನಲ್ಲಿ ಬರಲೆಳಸುತ್ತವೆ. ಅಂತೆಯೇ ಮತ್ತೊಂದು ಮುಖದ ಮೌಲ್ಯವನ್ನು ಬಯಸುತ್ತವೆ. ಆ ನೆಲೆಯಲ್ಲಿ ಸಂಸ್ಕೃತಿಯ ತಿರುಗು ನೋಟದಲ್ಲಿ ಗುಪ್ತಗಾಮಿನಿಯಾಗಿ ಹರಿದುಬರುವ ಜೀವನ ಮೌಲ್ಯಗಳನ್ನು ಸಮಕಾಲೀನ ಕವಿಗಳು ಬದುಕಿನ ವರ್ತಮಾನಕ್ಕೆ ಅನುಗುಣವಾಗಿ ಅವುಗಳನ್ನು ಅಳೆದು-ತೂಗಿ ತಮ್ಮ ಕೃತಿಗಳಲ್ಲಿ ಮೂಡಿಸಿದ್ದಾರೆ. ಇಂಥ ಜೀವ ಬಂಧುರ ಗುಣಗಳೊಂದಿಗೆ ನಾಡಿನ ವೈಶಿಷ್ಟ್ಯ ಬಿಂಬಿಸುವ ಕನ್ನಡ ಕಾವ್ಯಗಂಗೆ 'ಮಹಾಭಾರತ' ಈ ಗುಣ ಮೌಲ್ಯಗಳನ್ನು ಸಾರಿದ ಉದ್ಗ್ರಂಥವಾಗಿದೆ. ಇದನ್ನು ಅನಂತರ ಕಾಲದಲ್ಲಿ ಕಾಣಿಸಿಕೊಂಡ ಕವಿಗಳು ಈ ಗಂಗೆಯನ್ನು ತಮ್ಮ ಬೊಗಸೆಯಲ್ಲಿ ಮೊಗೆದು ಅದನ್ನು ಪವಿತ್ರ ಪಾವನಗೊಳಿಸಿದ್ದಾರೆ. ಅವೆಲ್ಲವೂ ಆಯಾಯ ಕಾಲಘಟ್ಟದ ಅವತರಣಿಕೆಗಳಾಗಿ ಅನಾವರಣಗೊಂಡಿವೆ. ಇಂಥ ಹಲವು ಅವತರಣಿಕೆಗಳಲ್ಲಿ ಅನುವಾದಗಳು, ಬಿಡಿ ಗ್ರಂಥಗಳು, ಬಿಡಿ ಪ್ರಸಂಗಗಳೂ ಕಂಡುಬಂದಿವೆ. ಈ ನೆಲೆಯಲ್ಲಿ 'ವಚನಭಾರತ'ವು ಅಧ್ಯಯನ ವಸ್ತುವಾಯಿತು. ಅಂತೆಯೇ ಇದಕ್ಕಿದ್ದ ಜಾನಪದ ಆವರಣವೆಂಥದ್ದು ಎನ್ನುವ ವೇಳೆ ಪಿ.ಕೆ.ರಾಜಶೇಖರ ಅವರ 'ಜನಪದ ಮಹಾಭಾರತ'ವು ಮುಖ್ಯವಾಯಿತು.

ಈ ಎರಡೂ ಕೃತಿಗಳ ಹಿನ್ನೆಲೆಯಲ್ಲಿ ಪ್ರಬಂಧವು ರೂಪಿತವಾಗಿರುವುದು ಸಾಧಿತ ವಿಷಯುವೇ ಆಗಿದೆ. ಆದರೆ ಅಧ್ಯಯನ ವಸ್ತುವಾದರೂ ಅವುಗಳಲ್ಲಿನ 'ಸ್ತ್ರೀ ಗುಣ ಮೌಲ್ಯಗಳ' ವಿವೇಚನೆಯಾಗಿದೆ. ಶೌರತ್ವದ ಮೌಲ್ಯಗಳನ್ನು ಅಣಕಿಸುವ ಹಾಗೆ ಮಾನವೀಯ ಮೌಲ್ಯಗಳು ಭಾರತ ಕಥಾ ನಾರಿಯರ ಮಿಡಿತದ ಬಗೆ ಎಂಥದ್ದು. ಅವುಗಳು ತಮ್ಮ ಸಾಮಾಜಿಕ ಬಾಂಧವ್ಯ ಹಾಗೂ ಮನೋವೈಶಾಲ್ಯತೆಯನ್ನು ಕಂಡುಕೊಂಡ ಸಂಗತಿಗಳಾವುವು ಎಂಬುದು ಚರ್ಚಿತ ವಿಷಯವಾದರೂ ಪ್ರಬಲವಾದ ಒತ್ತಡಕ್ಕೆ ಏಕಾಏಕಿ ಒಳಪಡದ ಸಂಸ್ಕೃತಿಯೊಳಗೆ ಅವರು ನಿಲ್ಲಬಲ್ಲ ಸ್ಥಾನಗಳೇ ಮುಖ್ಯವಾಗುವಂತಹವುಗಳು.

ಮಾನವನ ಬದುಕಿನಲ್ಲಿ ಹಾಸುಹೊಕ್ಕಾಗಿರುವ 'ಮಹಾಭಾರತ'ವು ಜನರ ಜೀವಂತ ಪಳಿಯುಳಿಕೆಯಾಗಿರುವಂತೆ, ಜನಪದರು ಕಂಡುಕೊಂಡ ಬದುಕಿನ ಸರ್ವಮುಖಗಳನ್ನು ಇದರ ಕಥೆಯಲ್ಲಿ ಪಾತ್ರಗಳಲ್ಲಿ ತೆರೆದುಕೊಂಡಿರುವ ಕುರಿತ ನೋಟವೂ ಮುಖ್ಯವಾಗಿದ್ದಿತು. ಅದರ ನಿವಾರಣೆ ಇಲ್ಲಿ ನೆರವೇರಿರುವುದು ಸಮಾಧಾನದ ಸಂಗತಿಯಾಗಿದೆ. ಜನಪದಕ್ಕೂ-ವ್ಯಾಸರ ಕಾಲಕ್ಕೂ ಅಂತರವಿದೆ. ಕಥಾ ಪರಂಪರೆಯ ನೆಲೆಯಿಂದ ಅವುಗಳಲ್ಲಿನ ವಸ್ತು-ವೈವಿಧ್ಯತೆಗಳು ಭಿನ್ನವಾಗಿ ನಿಲ್ಲುತ್ತವೆ. ಜನಪದರ ಭಿನ್ನಕಥಾಮೂಲಧಾರೆಗಳಿಗೆ ಸಾವಿರ ವರ್ಷಗಳ ನಂತರದಲ್ಲಿ ಒಂದು ಲೌಖಿಕ ಮೌಲ್ಯ ವ್ಯಾಸರಿಂದ ದೊರೆತಿರಬಹುದು. ಅಥವಾ ಶಿಷ್ಟತೆಯ ಒಳಗಿಂದಲೇ ಕಂಡುಬರುವ ಅನೇಕ ಪ್ರಸಂಗಗಳೂ ಕಾಲದಲ್ಲಿ ಭಿನ್ನತೆ ಹೊಂದಿ ಸ್ವತಂತ್ರವಾಗಿರಬಹುದು. ಹೀಗೆ ಅಗೆದಷ್ಟೂ ಅನುಭವದ ಆಳವಿರುವ, ಸಾಗಿದಷ್ಟೂ ದಾರಿಯಿರುವ ಈ ಪರಿಧಿಯಲ್ಲಿ ಆಗಿರುವ ಅಧ್ಯಯನಗಳು, ನಡೆದಿರುವ ಶೋಧನೆಗಳು ವಿಧಿತವಾದವು. ಇಂಥ ಸುದೀರ್ಘ ವ್ಯಾಪ್ತಿಯುಳ್ಳ ಈ ವಿಷಯದ ಬಗೆಗಿನ ಹೊಸ ಅಂಶಗಳು ಮಾತ್ರ ಇಲ್ಲಿ ಅಧ್ಯಯನದಿಂದ ನೆರವೇರಿದ ಫಲಗಳಾಗಿವೆ.

ಪ್ರಸ್ತುತ ವಿಚಾರದ ವಸ್ತುವಿನ ಬಗೆಗೆ ಹೇಳಬೇಕಾದ ವಿಷಯಗಳು ಅಗತ್ಯವಿತ್ತೆಂದೆನಿಸಿದರೂ, ಈ ಪ್ರಬಂಧೋದ್ದೇಶದೊಂದಿಗೆ ಅದರ ಮಿತಿ ಮೀರುವ ಶಂಕೆಯಿಂದ ಕೆಲವು ಅಂಶಗಳು ಉಳಿದಿರುವ ಸಾಧ್ಯತೆ ಉಂಟು. ಹೀಗೆ ನನ್ನ ತೆಕ್ಕೆಗೆ ಒದಗಿದ ಕೆಲವಂಶಗಳನ್ನು ನಾಲ್ಕು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು –

ಮೊದಲನೆಯುದರಲ್ಲಿ ಮಹಾಕಾವ್ಯದ ಸ್ವರೂಪ ಮತ್ತು ಲಕ್ಷಣಗಳ ಕುರಿತ ಚರ್ಚೆಯನ್ನು ಗಮನಿಸಿ ಪರಿಶೀಲಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮಹಾಭಾರತವು ಕನ್ನಡದಲ್ಲಿ ಅವತರಿಸಿದ ಅವತರಣಿಕೆಗಳು, ಅದು ಸಾಗಿ ಬಂದ ಪರಂಪರೆ ಕುರಿತು ವಿವೇಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪ್ರಸ್ತುತ ಕೃತಿಗಳ ವಸ್ತುವಿನ್ಯಾಸ, ವಿಭಾಗಕ್ರಮ, ವ್ಯತ್ಯಾಸ, ನಿರೂಪಣಾ ಭಿನ್ನತೆ ಇವುಗಳ ತುಲನೆ ಮಾಡಲಾಗಿದೆ.

ಕೊನೆಯದಾಗಿ ಪ್ರಬಂಧದ ಹೃದಯಭಾಗವಾದ ಪಾತ್ರಚಿತ್ರಣದ ಕಡೆಗೆ ಗಮನಕೊಟ್ಟು ಅವುಗಳನ್ನು ತುಸುಮಟ್ಟಿನ ಹೊಳಹಿನಿಂದ ನೋಡುವ ಕಾರ್ಯಕೈಗೊಳ್ಳಲಾಗಿದೆ.

ಹೀಗೆ ಬಹುಮಟ್ಟಿಗೆ ಈ ವಿಚಾರಗಳ ಬಗ್ಗೆ ಹಲವು ವಿದ್ವಾಂಸರು ಈಗಾಗಲೇ ಚರ್ಚಿಸಿ, ಮೌಲ್ಯಯುಕ್ತ ಲೇಖನಗಳನ್ನು ಪ್ರಕಟಿಸಿದ್ದರೂ ಸಮಗ್ರತೆಯ ರೂಪ ದೊರೆತಿಲ್ಲ. ಹಾಗಾಗಿ ಇಂಥ ವಿಚಾರಕ್ಕೆ ಸಂಬಂಧಿಸಿ ಅಧ್ಯಯನ ಕೈಗೊಂಡರೆ ಉತ್ತಮವೆಂಬ ತಿಳಿವಿನ ಮಿತಿಯಲ್ಲಿ ಈ ಕಾರ್ಯ ನೆರವೇರಿಸಿದ್ದೇನೆ. ಆದರೆ ಇದೇ ಅಂತಿಮವಲ್ಲ; ಈ ನಿಲುವುಗಳೇ ಮಹತ್ತರವಾದವುಗಳು ಎಂಬ ಹುಸಿ ಭ್ರಮೆಯಾದರೂ ನನ್ನದಲ್ಲ. ಇದು ಇನ್ನೂ ಹಲವು ವಿಚಾರಗಳಿಗೆ ಅವಕಾಶವೀಯುವ ವಸ್ತುವಾಗಿದ್ದು, ಇಲ್ಲಿ ನಾನು ಅಧ್ಯಯನದ ಸೀಮಿತತೆಗೆ ತಕ್ಕಂತೆ ಪರಿಶೀಲನೆ ಮಾಡಿದ್ದೇನೆ ಮತ್ತು ಇದೊಂದು ಭಿನ್ನವಾದ ನೆಲೆಯನ್ನು ಹೊಂದಿದೆ ಎಂಬುದನ್ನು ಮತ್ತೊಮ್ಮೆ ಸ್ಮರಿಸಿಕೊಳ್ಳುತ್ತೇನೆ.

ಅನುಬಂಧ

ಪ್ರಸ್ತುತ ಕೃತಿಗಳ ಬಗೆಗಿನ ಅಭಿಪ್ರಾಯಗಳು

ವಚನಭಾರತವನ್ನು ಕುರಿತಂತೆ

೧. 'ವಚನಭಾರತ'ದಂತಹ ಅನುವಾದ ಕೃತಿ ಮತ್ತೊಂದಿಲ್ಲ. ಅವರ ಗದ್ಯಕ್ಕೆ ಶಿಖರಪ್ರಾಯ ಕೃತಿ. ಅವರಿಗೆ ಹೆಸರು ತಂದುಕೊಟ್ಟ ಕೃತಿಯೆಂದರೆ ವಚನ ಭಾರತವೆಂದೇ ಹೇಳಬೇಕು. ಮಹಾಭಾರತ ಬೃಹತ್ಕಾವ್ಯವನ್ನು ಕೇವಲ ೫೦೦ ಪುಟಗಳಲ್ಲಿ ಸಾರಸಂಗ್ರಹ ಮಾಡಿರುವ ಕಾರ್ಯ ಸಾಮಾನ್ಯವಾದುದಲ್ಲ. ಇದು ಯಥಾವತ್ತಾದ ಅನುವಾದವಾಗಲಿ ಅಥವಾ ಕೇವಲ ಅನುವಾದವಾಗಲಿ ಅಲ್ಲ. ಶಾಸ್ತ್ರಿಗಳ ಅಗಾಧ ಅಧ್ಯಯನದ ಪರಿಶ್ರಮದ ಅಧ್ಯಯನದ ಪರಿಪೂರ್ಣ ಪಾಂಡಿತ್ಯ ಪ್ರತಿಭೆಯ ಪ್ರತಿಫಲ"[೧]– **ನಾ.ಗೀತಾಚಾರ್ಯ**.

೨. "ಈ ಮಹಾವಿದ್ವಾಂಸರಸತಜ್ಞರು ಮೂವತ್ತು ನಲವತ್ತು ವರ್ಷಗಳು ನಿರಂತರವಾಗಿ ನಡೆಸಿದ ಮಹಾಭಾರತ ವ್ಯಾಸಂಗದ ಫಲಸಾರವೆ ಈ ವಚನಭಾರತ. ಪಾಂಡಿತ್ಯಪೂರ್ಣ ರಸದೀಪ್ತವಾದ ಇದು ಸಾರಭಾರವಾಗಿದ್ದರೂ ಹೊರೆಯಾಗಿಲ್ಲ. ಆಳವಾಗಿದ್ದರೂ ಮುಳುಗಿಸುವಂತಿಲ್ಲ"[೨] – **ಪ್ರೊ.ಸುಜನಾ**.

---

[೧] ಸಾಲುದೀಪಗಳು – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

[೨] ಸಂವನಹ – ಸುಜನಾ, ಕನ್ನಡ ಪುಸ್ತಕ ಪ್ರಾಧಿಕಾರ – ಬೆಂಗಳೂರು.

'ಜನಪದ ಮಹಾಭಾರತ'ವನ್ನು ಕುರಿತಂತೆ

೧. 'ಜನಪದ ಮಹಾಭಾರತವು ಆಧುನಿಕ ಮಹಾಭಾರತ ಆವೃತ್ತಿ' – **ದೇ.ಜ.ಗೌ.**

೨. 'ವ್ಯಾಸಭಾರತ ಹದಿನೆಂಟು ಪರ್ವಗಳ ಕಟ್ಟಡ; ಈ ಜನಪದ ಭಾರತ ಮಹಾಕಾವ್ಯವಾದರೋ ಅಸಂಖ್ಯ ಪರ್ವಗಳ ಸೃಷ್ಟಿ; ಬಹುಶಾಖಾ ಸಮನ್ವಿತ ವಟವೃಕ್ಷ, ಅಶ್ವತ್ಥ . . . ಕಲಿಯದವರ ಕಾಮಧೇನು – **ಡಾ. ಸಿ.ಪಿ.ಕೆ.**

೩. 'ವ್ಯಾಸ ಪಂಪರ ಮಹಾಕಾವ್ಯಗಳಂತೆ ಇದು ಕೂಡ ಮತ್ತೆ ಮತ್ತೆ ಓದಿ ಚಿಂತನ ಮಂಥನ ಮನನ ಮಾಡಬೇಕಾದ ದೇಸೀ ಸೊಗಡಿನ ಮಹಾಕಾವ್ಯ' – **ಹಂಪನಾ.**

೪. 'ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಜನಪದರ ಮಾನಸಲೋಕದ ಸಮೃದ್ಧ ಜೀವನ ಪ್ರಜ್ಞೆ ಮತ್ತು ಅನುಪಮ ಸೃಜನಶೀಲತೆಗಳ ಸಂಗಮದ ಫಲ ರೂಪವಾಗಿ ಇದು ಅವಿರ್ಭವಿಸಿತೆಂಬುದು ನಿರ್ವಿವಾದ. ಇಂಥದೊಂದು ಮಹಾಕಥೆಯ ಜಾನಪದಾವತಾರ ಡಾ.ಪಿ.ಕೆ. ರಾಜಶೇಖರ ಅವರ ಈ ಮಹಾಕೃತಿ ಜನಪದ ಮಹಾಭಾರತ' – **ಡಾ.ಎಚ್.ಜೆ. ಲಕ್ಕಪ್ಪಗೌಡ.**

೫. 'ಮಣ್ಣಿನಲ್ಲಿ ಮೂಡಿದ ಮಹಾಪ್ರತಿಭೆ' – **ಪ್ರೊ. ಕೆ.ಎಸ್.ಭಗವಾನ್**

೬. 'ಸ್ಥಳೀಯ ಸಂಸ್ಕೃತಿಯ ಹೊಸಭಾಷ್ಯ' – **ಪ್ರೊ. ಶಿವರಾಮು ಕಾಡನಕುಪ್ಪೆ**

೭. 'ದೇಸಿ ರೂಪಕಗಳ ಕಣಜ' – **ಸಿ.ಬಸವಲಿಂಗಯ್ಯ**

೮. 'ಭಾರತ ಪ್ರಶ್ನೆಗಳ ಉತ್ತರಗಳ ಕಣಜ' – **ತನ್ವೀರ್ ಹಸನ್**

೯. 'ಇದೊಂದು ಭುವನದ ಭಾಗ್ಯ' – **ಪ್ರೊ. ಶಿವರಾಮಯ್ಯ**

೧೦. 'ಅನನ್ಯ ಮಹತ್ಕೃತಿ' – **ಕೆ. ಅನಂತರಾಮು.**

೧೧. 'ಜನಪ್ರಿಯ ಶಿಷ್ಟ ಪುರಾಣವೊಂದು ಪಡೆಯಬಹುದಾದ ಭಿನ್ನ ಕಥಾನಕಕ್ಕೆ ಈ ಕಾವ್ಯ ಒಳ್ಳೆಯ ಉದಾಹರಣೆ. ಈ ಕಾವ್ಯದ ಉಗಮ, ಬೆಳವಣಿಗೆ ಇರುವುದು ಕೃಷಿ ಸಂಸ್ಕೃತಿಯ ಭೂಮಿಕೆಯಲ್ಲಿ. ಈ ಭೂಮಿಕೆಯ ನೆಲೆಯಲ್ಲಿ ಮಹಾಭಾರತದ ಕಥೆಯನ್ನು ಮರುವಾಚಿಕೆಗೆ ಒಳಪಡಿಸುವ ಕ್ರಮ ಆಶ್ಚರ್ಯಕರವಾದ ರೀತಿಯಲ್ಲಿ ಇಲ್ಲಿ

ಪಾಕಗೊಂಡಿದೆ. ಮಹಾಭಾರತದ- ಒಟ್ಟು ಚೌಕಟ್ಟನ್ನು ಮುರಿಯದೆ ಅದರ ಒಳಗೇ ಮಾರ್ಫಿಂಗ್ ರೀತಿಯ ತಂತ್ರದ ಮೂಲಕ ಒಡಮೂಡುವ ಪಾತ್ರಗಳು ಜನಪದರ ಅದ್ಭುತ ಕಲ್ಪನಾಶಕ್ತಿಗೆ ಶ್ರೇಷ್ಠ ಉದಾಹರಣೆ' – **ಲಿಂಗದೇವರು ಹಳೆಮನೆ**.

ಹೀಗೆ ಇನ್ನೂ ಹಲವು ವಿದ್ವಾಂಸರು ಭಾರತಗಳ ಬಗ್ಗೆ ಹಲವು ರೀತಿ ಮಾತುಗಳನ್ನು ಆಡಿರುವುದು ಅವುಗಳ ಮೌಲ್ಯವನ್ನು ತಿಳಿಸುವ ಗುಣಗಳೇ ಆಗಿವೆ ಎನ್ನಬಹುದಾಗಿದೆ.

(ಜನಪದ ಮಹಾಭಾರತವನ್ನು ಕುರಿತ ಅಭಿಪ್ರಾಯಗಳನ್ನು 'ಜನಪದ ಜೋಗಿ' ಗ್ರಂಥದಲ್ಲಿಂದ ತೆಗೆದುಕೊಂಡವುಗಳಾಗಿವೆ)

ಪರಾಮರ್ಶನ ಗ್ರಂಥಗಳು

೧. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂ.) – 'ಕರ್ಣಾಟ ಭಾರತ ಕಥಾ ಮಂಜರಿ' ೧೯೫೪, ಸರ್ಕಾರಿ ಮುದ್ರಣಾಲಯ, ಮೈಸೂರು.

೨. ಕೃಷ್ಣಕುಮಾರ್ ಸಿ.ಪಿ. (ಅನು) – 'ಎಲಿಯಟ್‌ನ ಮೂರು ಉಪನ್ಯಾಸಗಳು' ೧೯೫೭, ನೆಲೆಮನೆ ಪ್ರಕಾಶನ, ಬೆಂಗಳೂರು.

೩. ಕೃಷ್ಣಕುಮಾರ್ ಸಿ.ಪಿ. (ಸಂ.) – 'ಕನ್ನಡ ಭಾರತ ವಿರಾಟ ಪರ್ವ' ೧೯೯೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಕೃಷ್ಣಕುಮಾರ್ ಸಿ.ಪಿ. – 'ಪಂಪನ ಕೆಲವು ಮುಖಗಳು' ೨೦೦೧, ಭಾರತಿ ಪ್ರಕಾಶನ, ಮೈಸೂರು.

೫. ಕೃಷ್ಣಕುಮಾರ್ ಸಿ.ಪಿ. (ಅನು) – 'ಸಾಹಿತ್ಯ ಪ್ರವೇಶ' (ಹೆನ್ರಿಹಡ್ಸನ್) ೧೯೬೫, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೬. ಕೃಷ್ಣಮೂರ್ತಿ .ಕೆ. (ಅನು) – 'ಕನ್ನಡ ಕಾವ್ಯಾಲಂಕಾರ' (ಭಾಮಹ) ೧೯೬೧, ಶಾರದಾ ಮಂದಿರ ಪ್ರಕಾಶನ, ಮೈಸೂರು.

೭. ಕೃಷ್ಣಶಾಸ್ತ್ರಿ ಎ.ಆರ್. – 'ವಚನಭಾರತ' ೧೯೪೮, ಗೀತಾ ಬುಕ್ ಹೌಸ್, ಮೈಸೂರು.

೮. ಗುಂಡಪ್ಪ ಡಿ.ವಿ. – 'ಕಾವ್ಯ ಸ್ವಾರಸ್ಯ' ೧೯೭೫, ಕಾವ್ಯಾಲಯ ಪ್ರಕಾಶಕರು, ಮೈಸೂರು.

೯. ಚನ್ನಬಸಪ್ಪ ಕೋ. – 'ಕುವೆಂಪು ಸಂದರ್ಶನ' ೧೯೫೨, ಓಂಕಾರ್ ಪ್ರೆಸ್, ಬೆಂಗಳೂರು.

೧೦. ಚಂದ್ರಕಿರಣ್ ಎಸ್. – 'ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮಾನವೀಯ ಮೌಲ್ಯಗಳು' ೨೦೦೫ ವಿಜಯಲಕ್ಷ್ಮೀ ಪ್ರಕಾಶನ, ಮೈಸೂರು.

೧೧. ಜವರೇಗೌಡ .ದೇ. – 'ಪೂರ್ವಕವಿಗಳಿಗೆ ನಮನ' ೨೦೦೬, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೨. ತಿಪ್ಪೇರುದ್ರಸ್ವಾಮಿ ಎಚ್. – 'ತೌಲನಿಕ ಕಾವ್ಯ ಮೀಮಾಂಸೆ' ೨೦೦೬, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೧೩. ನರಸಿಂಹಚಾರ್ ಡಿ.ಎಲ್. – 'ಶಬ್ದವಿಹಾರ' ೨೦೦೫, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೧೪. ನರಸಿಂಹಚಾರ್ .ಆರ್. – 'ಕರ್ಣಾಟಕ ಕವಿ ಚರಿತೆ ಸಂಪುಟಗಳು' ೧೯೬೧, ಬೆಂಗಳೂರು ಪ್ರೆಸ್, ಬೆಂಗಳೂರು.

೧೫. ನಾರಾಯಣಶೆಟ್ಟಿ ಸು.ಜ. – 'ಸಂವಹನ' ೨೦೦೨, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೬. ನಾರಾಯಣಶೆಟ್ಟಿ ಸು.ಜ. – 'ಹೃದಯ ಸಂವಾದ' ೧೯೬೪, ಸರಸ ಸಾಹಿತ್ಯ ಪ್ರಕಾಶನ, ಬೆಂಗಳೂರು.

೧೭. ಪುಟ್ಟಸ್ವಾಮಿ ಎಸ್. – 'ಕನ್ನಡ ಜಾನಪದದಲ್ಲಿ ರಾಮಾಯಣ–ಮಹಾಭಾರತ' ೨೦೦೩, ಎಸ್.ಪಿ.ಮೋಹಿತ್ ಪ್ರಕಾಶನ, ಸಾದೋಳಲು, ಮಂಡ್ಯ.

೧೮. ಪ್ರಧಾನ್ ಗುರುದತ್ತ – 'ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ' ೧೯೭೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೧೯. ಬಾಲಸುಬ್ರಹ್ಮಣ್ಯಂ ಎನ್. (ಅನು) – 'ಅರಿಸ್ಟಾಟಲ್‌ನ ಕಾವ್ಯ ಮೀಮಾಂಸೆ' ೧೯೭೨, ಕಾವ್ಯಾಲಯ ಪ್ರಕಾಶಕರು, ಮೈಸೂರು.

೨೦. ಬಿಂದು ಮಾಧವ ಬುರ್ಲಿ – 'ಮಹಾಭಾರತದ ಮಹಿಳೆಯರು' ೧೯೬೯, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ.

೨೧. ಮುಗಳಿ ರಂ.ಶ್ರೀ – 'ಕನ್ನಡ ಸಾಹಿತ್ಯ ಚರಿತ್ರೆ' ೨೦೦೫, ಗೀತಾ ಬುಕ್ ಹೌಸ್, ಮೈಸೂರು.

೨೨. ರಾಜಶೇಖರ ಪಿ.ಕೆ. (ಸಂ.) – 'ಜನಪದ ಮಹಾಭಾರತ' ೨೦೦೪, ಹೊನ್ನಾರು ಜನಪದ ಗಾಯಕರು, ಮೈಸೂರು.

೨೩. ರಾಜಪ್ಪ ದಳವಾಯಿ (ಸಂ.) – 'ಕನ್ನಡ ಸಾಹಿತ್ಯ ಕೋಶ' ೨೦೦೬, ರಾಘವೇಂದ್ರ ಪ್ರಕಾಶನ, ಬೆಂಗಳೂರು.

೨೪. ರಾಮಚಂದ್ರನ್ ಸಿ.ಎನ್. – 'ಹೊಸಮಡಿಯ ಮೇಲೆ ಚದುರಂಗ' ೨೦೦೭, ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫. ರಾಮಣ್ಣ ಕ್ಯಾತನಹಳ್ಳಿ (ಸಂ.) 'ಕೊಂತಿಪೂಜೆ : ಒಂದು ಅಧ್ಯಯನ' ೧೯೮೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೬. ಲಕ್ಕಪ್ಪಗೌಡ ಎಚ್.ಜೆ. – 'ಶ್ರೀರಾಮಾಯಣದರ್ಶನಂ ವಿಮರ್ಶಾತ್ಮಕ ಅಧ್ಯಯನ' ೧೯೯೨, ಸಹ್ಯಾದ್ರಿ ಪ್ರಕಾಶನ, ಮೈಸೂರು.

೨೭. ವೀರಣ್ಣದಂಡೆ – 'ಕನ್ನಡ ಕಾವ್ಯ ಮೀಮಾಂಸೆ' ೨೦೦೬, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೮. ವೆಂಕಟಾಚಲಶಾಸ್ತ್ರೀ ಟಿ.ವಿ. – 'ಮಹಾಕಾವ್ಯ ಲಕ್ಷಣ' ೨೦೦೪, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೨೯. ವೆಂಕಟ ವಿಶ್ವನಾಥ ಎಸ್. – 'ಕುವೆಂಪು ನಾಟಕ ಸಮೀಕ್ಷೆ' ೧೯೭೨, ಸುರಚಿ ಪ್ರಕಾಶನ, ಮೈಸೂರು.

೩೦. ಶಿವರುದ್ರಪ್ಪ ಜಿ.ಎಸ್. – 'ಮಹಾಕಾವ್ಯ ಸ್ವರೂಪ' ೧೯೭೬, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ.

೩೧. ಶಿವರಾಮುಕಾಡನಕುಪ್ಪೆ ಮತ್ತು ಶಿವಸತೀಶ್ (ಗೌ.ಸಂ.) – 'ಜಾನಪದ ಜೋಗಿ' ೨೦೦೮, ಪಿ.ಕೆ.ರಾಜಶೇಖರ ಅಭಿನಂದನಾ ಸಮಿತಿ, ಬೆಂಗಳೂರು.

೩೨. ಶ್ರೀಪಾದಭಟ್ – 'ಮಹಾಕಾವ್ಯ ಲಕ್ಷಣ' (ಲೇಖನ), 'ಬುತ್ತಿಬೆಳಕು' ೨೦೦೩, ಜ್ಞಾನಬುತ್ತಿ ಸಂಸ್ಥೆ, ಮೈಸೂರು.

೩೩. ಶ್ರೀಕಂಠಯ್ಯ ತೀ.ನಂ. 'ಭಾರತೀಯ ಕಾವ್ಯ ಮೀಮಾಂಸೆ' ೧೯೭೩, ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩೪. ಶೇಷಾಚಲಶರ್ಮ ಎನ್. (ಸಂ.) – 'ಕನ್ನಡ ಭಾರತ ಆದಿಪರ್ವ–೨' ೧೯೯೦, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೫. ಶೇಷ ನವರತ್ನ – 'ಮಹಾಭಾರತದಲ್ಲಿ ಧರ್ಮ' ೧೯೯೩, ಸಮಾಜ ಪುಸ್ತಕಾಲಯ, ಧಾರವಾಡ.

೩೬. ಶ್ಯಾಮಸುಂದರ ಬಿದರಕುಂದಿ – 'ಕುಮಾರವ್ಯಾಸ ಕನ್ನಡ ಭಾರತ' ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೭. ಸಿದ್ದಲಿಂಗಯ್ಯ ಜಿ.ಎಸ್. ಮತ್ತು ಕೃಷ್ಣ ಎಂ.ಎಚ್. (ಸಂ.) – 'ಸಾಲು ದೀಪಗಳು' ೨೦೦೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೮. ಸಾಹಿತ್ಯ ಚರಿತ್ರೆ ಸಂಪುಟಗಳು – ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.